ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 13 ಶುಕ್ರವಾರ 2023

ಸಂಪುಟ: 43 | ಸಂಚಿಕೆ: 267 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಹುಬ್ಬಳ್ಳಿಯಲ್ಲಿ 26ನೇ ರಾಷ್ಟ್ರೀಯ ಯುವಜನೋತ್ಸವ


ಮೋದಿ ಮೆಗಾ ರೋಡ್ ಶೋ



ಹುಬ್ಬಳ್ಳಿ, ಜ.12–ಹುಬ್ಬಳ್ಳಿ ನಗರದಲ್ಲಿ ಗುರುವಾರ ಪ್ರಧಾನಿ ನರೇಂದ್ರ ಮೋದಿಯವರದ್ದೇ ಕಲರವ. 26ನೇ ರಾಷ್ಟ್ರೀಯ ಯುವ ಜನೋತ್ಸವಕ್ಕೆ ಆಗಮಿಸಿದ್ದ ಪ್ರಧಾನಿ ಮೋದಿಯವರು, ಭಾರೀ ರೋಡ್ ಶೋ ಮಾಡುವ ಮೂಲಕ ಗಮನ ಸೆಳೆದರು.

ವಿಶೇಷ ವಿಮಾನದಲ್ಲಿ ಇಳಿದ ನಂತರ 8 ಕಿ.ಮೀ. ದೂರ ತಮ್ಮ ಕಾರಿನಲ್ಲೇ ನಿಂತು ಸುಮಾರು 1 ಗಂಟೆಗಳ ಕಾಲ ಇಕ್ಕೆಲಗಳಲ್ಲಿ ನಿಂತಿದ್ದ ಜನ ಸಾಗರದತ್ತ ಕೈ ಬೀಸುತ್ತಾ ಉತ್ಸಾಹದಿಂದ ರೋಡ್ ಶೋ ನಡೆಸಿದರು. ಮೋದಿ ರೋಡ್ ಶೋ ನಡೆಸಿದ ಮಾರ್ಗದುದ್ದಕ್ಕೂ ಬಿಜೆಪಿ ಬಾವುಟ ಹಾಗೂ ಮೋದಿಯವರ ಫ್ಲೆಕ್ಸ್‌ಗಳು ರಾರಾಜಿಸುತ್ತಿದ್ದವು. ಇಕ್ಕೆಲಗಳಲ್ಲಿ ನಿಂತಿದ್ದ ಜನರು ಮೋದಿಯವರ ಭಾವಚಿತ್ರವಿರುವ ಪ್ಲೇಕ್ ಕಾರ್ಡ್‌ಗಳನ್ನಿಡಿದು, ಮೋದಿಯವರು ಆಗಮಿಸುತ್ತಿದ್ದಂತೆಯೇ ಜಯಘೋಷ ಕೂಗುತ್ತಾ ಸಂಭ್ರಮಿಸಿದರು. ಮಾರ್ಗದುದ್ದಕ್ಕೂ ಮೋದಿಯವರ ಮೇಲೆ ಅಭಿಮಾನಿಗಳು ಪುಷ್ಪವೃಷ್ಟಿಗರೆದರು. ಹುಬ್ಬಳ್ಳಿಯ ರೈಲ್ವೆ ಮೈದಾನದಲ್ಲಿ ಆಯೋಜಿಸಿದ್ದ ಯುವ ಜನೋತ್ಸವದಲ್ಲಿ ಮೋದಿ ಅವರು ಆಗಮಿಸಿದಾಗ ಯುವಕರು ಪಥ ಸಂಚಲನ ನಡೆಸಿದರು. ಅಲ್ಲದೇ ಯುವ ಜನತೆ ರಾಜ್ಯದ ಸಂಸ್ಕೃತಿಯನ್ನು ನೃತ್ಯದ ಮೂಲಕ ಅನಾವರಣಗೊಳಿಸಿದರು. ಗ್ಲೋಬಲ್ ಶಾಲೆ ವಿದ್ಯಾರ್ಥಿಗಳು ▶ 6ನೇ ಪುಟಕ್ಕೆ

ಎಸ್‌ಪಿಜಿ ಭದ್ರತೆ ನಡುವೆ ಹಾರ ಹಿಡಿದು ಪ್ರಧಾನಿಯತ್ತ ಧಾವಿಸಿದ ಪುಟ್ಟ ಪೋರ



ಹುಬ್ಬಳ್ಳಿ, ಜ.12–ಉತ್ಸಾಹಿ ಬಾಲಕನೋರ್ವ ಬ್ಯಾರಿಕೇಡ್ ಹಾರಿ, ಎಸ್‌ಪಿಜಿ ಭದ್ರತೆ ನಡುವೆ ಪ್ರಧಾನಿ ಮೋದಿ ಅವರ ಬಳಿಗೆ ಹಾರ ಹಿಡಿದು ಬಂದ ಘಟನೆ ಇಂದು ಪ್ರಧಾನಿ ಮೋದಿ ರೋಡ್ ಶೋನಲ್ಲಿ ಸಂಭವಿಸಿದೆ. ಪ್ರಧಾನಿ ಮೋದಿ ಅವರು ಹುಬ್ಬಳ್ಳಿ ವಿಮಾನ ನಿಲ್ದಾಣದಿಂದ ರೈಲ್ವೆ ▶ 6ನೇ ಪುಟಕ್ಕೆ

ಸಾಧನೆ ಮಾಡಲು ಇದು ಸಕಾಲ... ರನ್‌ವೇ ರೆಡಿ ಇದೆ..., ನೀವು ಟೇಕಾಫ್ ಆಗುವುದು ಒಂದೇ ಬಾಕಿ

ಯುವ ಜನತೆಗೆ ಪ್ರಧಾನಿ ನರೇಂದ್ರ ಮೋದಿ ಕರೆ



ಹುಬ್ಬಳ್ಳಿ, ಜ.12–ಭಾರತ ದೊಡ್ಡ ಆರ್ಥಿಕ ಶಕ್ತಿಯಾಗಿ ಬೆಳೆಯುತ್ತಿದ್ದು, ಸಾಧನೆ ಮಾಡಲು ಯುವ ಸಮುದಾಯಕ್ಕೆ ಇದು ಸಕಾಲ. ರನ್ ವೇ ರೆಡಿಯಿದೆ, ನೀವು ಟೇಕಾಫ್ ಆಗುವುದು ಒಂದೇ ಬಾಕಿ ಎಂದು ಪ್ರಧಾನಿ ಮೋದಿಯವರು ಯುವ ಜನತೆಗೆ ಕರೆ ನೀಡಿದರು. ಹುಬ್ಬಳ್ಳಿಯ ರೈಲ್ವೆ ಮೈದಾನದಲ್ಲಿ 26ನೇ ರಾಷ್ಟ್ರೀಯ ▶ 6ನೇ ಪುಟಕ್ಕೆ

> **"ಸಿದ್ಧಾರೂಢ ಮಠ, ಮೂರುಸಾವಿರ ಮಠ ಇಂತಹ ಅನೇಕ ಮಠಗಳ ಕ್ಷೇತ್ರಕ್ಕೆ ನನ್ನ ನಮಸ್ಕಾರಗಳು. ಚೆನ್ನಮ್ಮ ನಾಡು, ಸಂಗೊಳ್ಳಿ ರಾಯಣ್ಣನ ಬೀಡು, ಈ ಪುಣ್ಯ ಭೂಮಿಗೆ ನನ್ನ ನಮಸ್ಕಾರಗಳು.**
> – ಪ್ರಧಾನಿ ನರೇಂದ್ರ ಮೋದಿ

ರಾಜ್ಯ ಸರ್ಕಾರದ ಹೊಸ ಮೀಸಲಾತಿ 2ಸಿ, 2ಡಿಗೆ ಹೈಕೋರ್ಟ್ ತಡೆ



ಬೆಂಗಳೂರು, ಜ.12– ಪಂಚಮಸಾಲಿ ಸೇರಿದಂತೆ ವೀರಶೈವ ಲಿಂಗಾಯತ ಸಮುದಾಯ ಮತ್ತು ಒಕ್ಕಲಿಗ ಸಮುದಾಯಕ್ಕೆ ಪ್ರತ್ಯೇಕ ಪ್ರವರ್ಗ ಸೃಷ್ಟಿಸಿ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ ನೀಡುವ ರಾಜ್ಯ ಸರ್ಕಾರದ ಮಹತ್ವದ ತೀರ್ಮಾನಕ್ಕೆ ಹೈಕೋರ್ಟ್ ಗುರುವಾರ ತಡೆಯಾಜ್ಞೆ ನೀಡಿದೆ. ಪಂಚಮಸಾಲಿ ಸೇರಿದಂತೆ ವೀರಶೈವ ಲಿಂಗಾಯತ ಸಮುದಾಯಕ್ಕೆ 2ಡಿ ಮತ್ತು ಒಕ್ಕಲಿಗರಿಗೆ 2ಸಿ ಮೀಸಲಾತಿ ನೀಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸಚಿವ ಸಂಪುಟ ಒಪ್ಪಿಗೆ ನೀಡಿತ್ತು. ಬೊಮ್ಮಾಯಿ ಸಂಪುಟದ ತೀರ್ಮಾನ ಪ್ರಶ್ನಿಸಿ ರಾಘವೇಂದ್ರ ಡಿ.ಜಿ. ಎಂಬುವವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್, ಸಂಪೂರ್ಣ ವಿಚಾರಣೆಯಾಗುವವರೆಗೆ ಹೊಸ ಮೀಸಲಾತಿ ಘೋಷಣೆ ಮಾಡಬಾರದು ಎಂದು ರಾಜ್ಯ ಸರ್ಕಾರಕ್ಕೆ ಸೂಚಿಸಿದೆ. ಮೀಸಲಾತಿ ವಿಚಾರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಬೇಕು. ಸದ್ಯ ಇರುವ ಮೀಸಲಾತಿ ನೀತಿಯನ್ನೇ ಮುಂದುವರಿಸಬೇಕು. ಈ ಬಗ್ಗೆ ಪೂರ್ಣ ವಿಚಾರಣೆ ನಡೆಸಿದ ನಂತರ ಮುಂದಿನ ತೀರ್ಪನ್ನಾಧರಿಸಿ ಸರ್ಕಾರ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಹೈಕೋರ್ಟ್ ಹೇಳಿದೆ.

ಶರದ್ ಯಾದವ್ ಇನ್ನಿಲ್ಲ



ನವದೆಹಲಿ: ಹಿರಿಯ ಸಮಾಜವಾದಿ ನಾಯಕ, ಮಾಜಿ ಕೇಂದ್ರ ಸಚಿವ ಶರದ್ ಯಾದವ್ (75) ನಿಧನರಾಗಿದ್ದಾರೆ. ಶರದ್ ಯಾದವ್ ಅವರ ಆರೋಗ್ಯದಲ್ಲಿ ಇತ್ತೀಚೆಗೆ ವ್ಯತ್ಯಯ ಉಂಟಾಗಿತ್ತು. ಹೀಗಾಗಿ ಅವರನ್ನು ಗುರುಗ್ರಾಮ್‌ನ ಫೋರ್ಟಿಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಇದೀಗ ಅವರು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಶರದ್ ಯಾದವ್ ನಿಧನರಾಗಿರುವುದನ್ನು ಅವರ ಪುತ್ರಿ ಟ್ವೀಟ್ ಮಾಡುವ ಮೂಲಕ ಖಚಿತಪಡಿಸಿದ್ದಾರೆ. 2003ರಿಂದ 2016ರವರೆಗೆ ಜೆಡಿಯು ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಶರದ್ ಯಾದವ್, ಮಧ್ಯಪ್ರದೇಶದ ಜಬಲ್ಪುರದಿಂದ ಲೋಕಸಭೆಗೆ ಮೊದಲ ಬಾರಿಗೆ ಪ್ರವೇಶಿಸಿದ್ದರು. ಬಳಿಕ 7 ಬಾರಿ ಲೋಕಸಭೆ ಹಾಗೂ 4 ಬಾರಿ ರಾಜ್ಯಸಭೆಗೆ ಆಯ್ಕೆಯಾಗಿದ್ದರು.

ಜ.15ರಂದು ಎಂಆರ್‌ಸಿ ಮೈದಾನದಲ್ಲಿ ಯೋಗಥಾನ್

● ಗರಿಷ್ಠ 80,000 ಮಂದಿಯಿಂದ ಯೋಗಾಭ್ಯಾಸ ● ಎಡಿಸಿ ಆರ್.ಲೋಕನಾಥ್, ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್ ನೇತೃತ್ವದ ಅಧಿಕಾರಿಗಳಿಂದ ಸ್ಥಳ ಪರಿಶೀಲನೆ ● ಕಾರ್ಯಕ್ರಮ ಸ್ಥಳದಲ್ಲಿ ಇಂದಿನಿಂದ ಗುರುತು ಮಾಡುವ ಕೆಲಸ

ಮೈಸೂರು, ಜ.12(ಆರ್‌ಕೆ)– ಜನವರಿ 15ರಂದು ಮೈಸೂರಿನ ಮೈಸೂರು ರೇಸ್ ಕ್ಲಬ್ (ಎಂಆರ್‌ಸಿ) ಮೈದಾನದಲ್ಲಿ ನಡೆಯಲಿರುವ ಯೋಗಥಾನ್ ಕಾರ್ಯಕ್ರಮದಲ್ಲಿ ಗರಿಷ್ಠ 80,000 ಮಂದಿ ಯೋಗಾಭ್ಯಾಸ ಮಾಡುವ ನಿರೀಕ್ಷೆ ಇದೆ.

ಮೈಸೂರು ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ, ಜಿಲ್ಲಾ ಪಂಚಾಯಿತಿ, ಆಯುಷ್ ಹಾಗೂ ಯುವಜನ ಮತ್ತು ಕ್ರೀಡಾ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ಯೋಗಥಾನ್ ಕಾರ್ಯಕ್ರಮದಲ್ಲಿ ಕನಿಷ್ಠ 50,000 ಮತ್ತು ಗರಿಷ್ಠ 80,000 ಮಂದಿ ಪಟುಗಳಿಂದ ಯೋಗ ಪ್ರದರ್ಶನ ಮಾಡಿಸಲು ಉದ್ದೇಶಿಸಲಾಗಿದ್ದು, ▶ 8ನೇ ಪುಟಕ್ಕೆ



ಎಡಿಸಿ ಆರ್.ಲೋಕನಾಥ್ ಹಾಗೂ ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್ ನೇತೃತ್ವದಲ್ಲಿ ಅಧಿಕಾರಿಗಳು ಗುರುವಾರ ಎಂಆರ್‌ಸಿ ಮೈದಾನದಲ್ಲಿ ಪರಿಶೀಲನೆ ನಡೆಸಿದರು.

ನಾನು ಬಿಜೆಪಿ ಕಾರ್ಯಕರ್ತ... ಪೊಲೀಸ್ ಅಧಿಕಾರಿಗಳ ವರ್ಗಾವಣೆ ಮಾಡಿಸಿದ್ದೇನೆ...

● ವರ್ಷದ ಹಿಂದೆ ಬೆಂಗಳೂರಿನ ರಾಜರಾಜೇಶ್ವರಿ ನಗರ ಠಾಣೆ ಇನ್ಸ್‌ಪೆಕ್ಟರ್‌ಗೆ ಸ್ಯಾಂಟ್ರೋ ರವಿ ನೀಡಿದ್ದ ಲಿಖಿತ ಹೇಳಿಕೆ ● ವರ್ಗಾವಣೆ ಬಗ್ಗೆ ಗೃಹ ಸಚಿವರ ಸ್ನೇಹಿತರು, ಆಪ್ತ ಸಹಾಯಕ, ಡಿಜಿ ಮತ್ತು ಐಜಿಪಿ ಕಚೇರಿಯ ಅಧಿಕಾರಿಯೊಂದಿಗೆ ವ್ಯವಹಾರ ● ಮೈಸೂರಲ್ಲಿ ಮಕ್ಕಳ ವಿದ್ಯಾಭ್ಯಾಸ, ಪತ್ನಿ ಹೈಕೋರ್ಟ್ ವಕೀಲೆ

ಎಸ್.ಟಿ.ರವಿಕುಮಾರ್

ಮೈಸೂರು, ಜ.12–ತಾನು ಬಿಜೆಪಿ ಕಾರ್ಯಕರ್ತನಾಗಿದ್ದು, ಪೊಲೀಸ್ ಅಧಿಕಾರಿಗಳ ವರ್ಗಾವಣೆ ಮಾಡಿಸಿದ್ದೇನೆ ಎಂದು ವೇಶ್ಯಾವಾಟಿಕೆ ದಂಧೆ ಕಿಂಗ್‌ಪಿನ್ ಸ್ಯಾಂಟ್ರೋ ರವಿ ಬೆಂಗಳೂರಿನ ರಾಜರಾಜೇಶ್ವರಿ ನಗರ ಠಾಣೆಯ ಇನ್ಸ್‌ಪೆಕ್ಟರ್‌ಗೆ ಕಳೆದ ವರ್ಷ ಸ್ವತಃ ಹೇಳಿಕೆ ನೀಡಿರುವುದು ಬೆಳಕಿಗೆ ಬಂದಿದೆ.

ರಾಜರಾಜೇಶ್ವರಿ ನಗರದ ಜಗದೀಶ್ ಎಂಬುವರು ಸ್ಯಾಂಟ್ರೋ ರವಿ ಎರಡು–ಮೂರು ಕಾರುಗಳನ್ನು ಇಟ್ಟುಕೊಂಡು, ತನ್ನ ಪತ್ನಿ ವಕೀಲೆ ಎಂದು ಹೇಳಿಕೊಂಡು, ರಾಜಕೀಯ ಮುಖಂಡರ ಜೊತೆ ತೆಗೆಸಿರುವ ಫೋಟೋಗಳನ್ನು ತೋರಿಸಿ ಸರ್ಕಾರಿ ನೌಕರರನ್ನು ವರ್ಗಾವಣೆ ಮಾಡಿಸುವುದಾಗಿ ನಂಬಿಸಿ ಮೋಸ ಮಾಡುತ್ತಿದ್ದಾನೆ ಎಂದು 2022ರ ಜನವರಿ 21ರಂದು ಕೆಂಗೇರಿ ಉಪ ವಿಭಾಗದ ಎಸಿಪಿ ಮತ್ತು ರಾಜರಾಜೇಶ್ವರಿ ನಗರ ಠಾಣೆಯ ಇನ್ಸ್‌ಪೆಕ್ಟರ್‌ಗೆ ದೂರು ಸಲ್ಲಿಸಿದ್ದರು. ಈ ದೂರಿನ ಹಿನ್ನೆಲೆಯಲ್ಲಿ ಮರು ದಿನವೇ ರಾಜರಾಜೇಶ್ವರಿ ನಗರ ಠಾಣೆಗೆ ತೆರಳಿದ್ದ ಸ್ಯಾಂಟ್ರೋ ರವಿ ತನ್ನನ್ನು ಬಿಜೆಪಿ ಕಾರ್ಯಕರ್ತನೆಂದು ಹೇಳಿಕೊಂಡಿದ್ದಲ್ಲದೇ, ಇಬ್ಬರು ಪೊಲೀಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿಸಿರುವುದಾಗಿಯೂ, ಗೃಹ ಸಚಿವರ ಕಚೇರಿಯ ಪಿಎ, ಗೃಹ ಸಚಿವರ ಸ್ನೇಹಿತರು, ಡಿಜಿ ಮತ್ತು ಐಜಿ ಕಚೇರಿಯ ಅಧಿಕಾರಿ ಮುಂತಾದವರ ಸಂಪರ್ಕ ತನಗೆ ಇರುವುದಾಗಿಯೂ, ಕೆಲ ಪೊಲೀಸ್ ಅಧಿಕಾರಿಗಳ ವರ್ಗಾವಣೆ ವಿಚಾರವಾಗಿ ವ್ಯವಹರಿಸಿರುವುದು ಮಾತ್ರವಲ್ಲದೆ, ಕೆಎಎಸ್ ಅಧಿಕಾರಿಯೊಬ್ಬರ ವರ್ಗಾವಣೆಗೆ ಪ್ರಯತ್ನಿಸಿರುವುದಾಗಿಯೂ ಲಿಖಿತ ಹೇಳಿಕೆಯಲ್ಲಿ ತಿಳಿಸಿರುವುದಲ್ಲದೇ, ಇನ್ನು ಮುಂದೆ ಸರ್ಕಾರಿ ನೌಕರರ ವರ್ಗಾವಣೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಹಸ್ತಕ್ಷೇಪ ಮಾಡುವುದಿಲ್ಲ ಹಾಗೂ ಯಾವುದೇ ರೀತಿಯ ಹಣಕಾಸಿನ ವ್ಯವಹಾರವನ್ನೂ ಮಾಡುವುದಿಲ್ಲ. ರಾಜಕೀಯ ವ್ಯಕ್ತಿಗಳಿಗೆ ಧಕ್ಕೆ ತರುವಂತಹ ಕೆಲಸವನ್ನು ಮಾಡುವುದಿಲ್ಲ ಎಂದು ಪೊಲೀಸ್ ಇನ್ಸ್‌ಪೆಕ್ಟರ್ ಬಿ.ಎನ್.ಲೋಹಿತ್ ಅವರಿಗೆ ಲಿಖಿತ ಹೇಳಿಕೆಯಲ್ಲಿ ತಿಳಿಸಿದ್ದಾನೆ. ತನ್ನ ತಂದೆ ಸಿದ್ದಶೆಟ್ಟಿಯವರು ಅಬಕಾರಿ ಇಲಾಖೆಯಲ್ಲಿ ಎಎಸ್‌ಐ ಆಗಿದ್ದರು. ಕಳೆದ 14–15 ವರ್ಷದ ಹಿಂದೆ ನಿಧನರಾಗಿದ್ದಾರೆ ಎಂದಿರುವ ಸ್ಯಾಂಟ್ರೋ ರವಿ, ತನ್ನ ಪ್ರಾಥಮಿಕ ಹಾಗೂ ಪದವಿ ಪೂರ್ವ ಶಿಕ್ಷಣ ಮಂಡ್ಯದಲ್ಲಿ ನಡೆದಿದ್ದು, ಪಿಯುಸಿವರೆಗೂ ವ್ಯಾಸಂಗ ಮಾಡಿರುವುದಾಗಿ ತಿಳಿಸಿದ್ದಾನೆ. ತನ್ನ ಪತ್ನಿ ವನಜಾಕ್ಷಿ ಹೈಕೋರ್ಟ್ ವಕೀಲೆ ಎಂದು ತಿಳಿಸಿರುವ ಆತ, ತನ್ನ ಇಬ್ಬರು ಮಕ್ಕಳು ▶ 8ನೇ ಪುಟಕ್ಕೆ



ಸ್ಯಾಂಟ್ರೋ ರವಿ ನಿರೀಕ್ಷಣಾ ಜಾಮೀನು ಅರ್ಜಿ ವಿಚಾರಣೆ ಜ.17ಕ್ಕೆ ಮುಂದೂಡಿಕೆ

ಮೈಸೂರು, ಜ.12(ಆರ್‌ಕೆ)–ಪತ್ನಿ ಮೇಲೆ ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ಕೆ.ಎಸ್.ಮಂಜುನಾಥ ಅಲಿಯಾಸ್ ಸ್ಯಾಂಟ್ರೋ ರವಿ ನಿರೀಕ್ಷಣಾ ಜಾಮೀನು ಅರ್ಜಿ ಜ.17ಕ್ಕೆ ಮುಂದೂಡಲಾಗಿದೆ. ವಕೀಲರ ಮೂಲಕ ಸಲ್ಲಿಸಲಾಗಿದ್ದ ಅರ್ಜಿ ವಿಚಾರಣೆಯನ್ನು ಮೈಸೂರಿನ 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಇಂದು ಕೈಗೆತ್ತಿಕೊಳ್ಳಲಾಯಿತಾದರೂ, ಆಕ್ಷೇಪಣೆ ಸಲ್ಲಿಸಲು ಸರ್ಕಾರಿ ಅಭಿಯೋಜಕರು ಕಾಲಾವಕಾಶ ಕೇಳಿದ ಹಿನ್ನೆಲೆಯಲ್ಲಿ ನ್ಯಾಯಾಧೀಶರು ಮುಂದಿನ ▶ 8ನೇ ಪುಟಕ್ಕೆ

ರಾಮನಗರ ಬಳಿ ಕಾರು ಚಾಲಕ ಪೊಲೀಸರ ವಶಕ್ಕೆ

ಇಂದು ಕೆ.ಆರ್.ಕ್ಷೇತ್ರದಲ್ಲಿ 120 ಪಾರ್ಕ್‌ಗಳ ಅಭಿವೃದ್ಧಿಗೆ ಚಾಲನೆ



ಮೈಸೂರು, ಜ.12(ಎಂಕೆ)– ಕೃಷ್ಣರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 216 ಉದ್ಯಾನವನಗಳಿದ್ದು, ಅವುಗಳಲ್ಲಿ 120 ಉದ್ಯಾನವನಗಳ ಅಭಿವೃದ್ಧಿಗೆ ನಾಳೆ(ಜ.13) ಚಾಲನೆ ನೀಡಲಾಗುವುದು ಎಂದು ಶಾಸಕ ಎಸ್.ಎ.ರಾಮದಾಸ್ ತಿಳಿಸಿದರು.

ಮೈಸೂರಿನ ಆಲನಹಳ್ಳಿ ಬಡಾವಣೆಯಲ್ಲಿ ಅಭಿವೃದ್ಧಿಪಡಿಸಿರುವ ಶ್ರೀ ಬಸವೇಶ್ವರ ಉದ್ಯಾನವನದ ಉದ್ಘಾಟನೆ ಹಾಗೂ ಸ್ವಾಮಿ ವಿವೇಕಾನಂದರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕ್ಷೇತ್ರದಲ್ಲಿರುವ ಒಂದೊಂದು ಉದ್ಯಾನವನವನ್ನು ಒಂದೊಂದು ವಿಷಯಾಧಾರಿತವಾಗಿ ಅಭಿವೃದ್ಧಿ ಮಾಡುವ ಗುರಿ ಇಟ್ಟುಕೊಳ್ಳಲಾಗಿದೆ. ಈಗಾಗಲೇ 16 ಪಾರ್ಕ್ ಗಳನ್ನು ವಿಷಯಾಧಾರಿತ ಹಾಗೂ ಸ್ಥಳೀಯ ಜನರ ಭಾವನೆಗಳ ಆಧಾರದ ಮೇಲೆ ಅಭಿವೃದ್ಧಿಪಡಿಸಲಾಗಿದೆ. ಉದ್ಯಾನವನಗಳನಷ್ಟಲ್ಲದೇ ಕ್ಷೇತ್ರದಲ್ಲಿರುವ ಎಲ್ಲಾ ಸ್ಮಶಾನಗಳ ಅಭಿವೃದ್ಧಿಗೆ 50 ಲಕ್ಷ ರೂ. ವೆಚ್ಚದಲ್ಲಿ ಈಗಾಗಲೇ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು. ಆಲನಹಳ್ಳಿ ಬಡಾವಣೆಯ ಉದ್ಯಾನವನಕ್ಕೆ ಬಸವೇಶ್ವರರ ಹೆಸರಿಡಬೇಕು ಎಂಬ ಮನವಿಯಂತೆ ಶ್ರೀ ಬಸವೇಶ್ವರ ಉದ್ಯಾನವನ ಎಂದು ಹೆಸರಿಡಲಾಗುವುದು. ಬಸವಣ್ಣ ಅವರು ವಿಶ್ವನಾಯಕ. ಆ ಕಾರಣದಿಂದಲೇ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಬಸವಣ್ಣ ಅವರನ್ನು ಲೋಕಸಭೆಯಲ್ಲಿ ಕೊಂಡಾಡಿದ್ದಾರೆ ಎಂದರು.

ಅಭಿವೃದ್ಧಿಗೊಂಡ ಉದ್ಯಾನವನದ ಉದ್ಘಾಟಿಸಿದ ಮೇಯರ್ ಶಿವಕುಮಾರ್ ಮಾತನಾಡಿ, ಉದ್ಯಾನವನ ಉದ್ಘಾಟನೆಯ ಜೊತೆಗೆ ಸ್ವಾಮಿ ವಿವೇಕಾನಂದರ 160ನೇ ಜಯಂತಿ ಆಚರಿಸಲಾಗಿದೆ. ದೇಶವನ್ನು ಕೀಳರಿಮೆಯಿಂದ ನೋಡುತ್ತಿದ್ದ ಕಾಲದಲ್ಲಿ ಸ್ವಾಮಿ ವಿವೇಕಾನಂದರು ನಮ್ಮ ಧರ್ಮ, ಸಂಸ್ಕೃತಿಯನ್ನು ಪ್ರಪಂಚಕ್ಕೆ ತಿಳಿಸಿ, ದೇಶದ ಘನತೆಯನ್ನು ಪ್ರಪಂಚಕ್ಕೆ ಸಾರಿದ್ದಾರೆ. ಅವರ ಆದರ್ಶಗಳನ್ನು ಪಾಲಿಸುತ್ತಾ ದೇಶದ ಅಭಿವೃದ್ಧಿ ಎಲ್ಲರೂ ಒಟ್ಟಾಗಿ ಶ್ರಮಿಸಬೇಕು ಎಂದರು. ಉಪ ಮೇಯರ್ ಡಾ.ಜಿ.ರೂಪ, ಮಾಜಿ ಉಪ ಮೇಯರ್ ಮಹದೇವಮ್ಮ, ಪಾಲಿಕೆ ಆಯುಕ್ತ ಲಕ್ಷ್ಮಿಕಾಂತರೆಡ್ಡಿ, ಯೋಗಗುರು ಶ್ರೀಹರಿ, ಮುಖಂಡರಾದ ಪ್ರಕಾಶ್, ಪಟೇಲ, ಮಹದೇವ್, ಅರ್ಜುನ, ಸಂತೋಷ್ ಶಂಭು, ಸೋಮಶೇಖರ್ ಚಿನ್ನ, ಮೋಟಪ್ಪ, ಕುಮಾರ್, ಕೃಷ್ಣ, ಮಹೇಶ್, ಪುನೀತ್, ಶಶಾಂಕ್, ಮಹದೇವಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ರಂಗಭೂಮಿ ಅಕ್ಷರಭ್ಯಾಸ ಕಲಿಸುವ ಗುರುಕುಲವಿದ್ದಂತೆ

ಮೂರು ದಿನಗಳ ನಾಟಕ ಕದಂಬ ಉತ್ಸವಕ್ಕೆ ಚಾಲನೆ



ಮೈಸೂರು, ಜ.12(ಜಿಎ)–ರಂಗಭೂಮಿ ಕಲಾವಿದರಿಗೆ ಅಕ್ಷರಭ್ಯಾಸ ಕಲಿಸುವ ಗುರುಕುಲವಿದ್ದಂತೆ ಎಂದು ನಟ ಶಂಕರ್ ಅಶ್ವಥ್ ಅಭಿಪ್ರಾಯಪಟ್ಟರು.

ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಕದಂಬ ರಂಗವೇದಿಕೆ ಮತ್ತು ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿರುವ ಮೂರು ದಿನಗಳ ನಾಟಕ ಕದಂಬ ಉತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ನಾವೆಲ್ಲರೂ ಶಿಕ್ಷಣ ಆರಂಭಿಸಿದಾಗ ಅಕ್ಷರಗಳನ್ನು ತಿದ್ದಿ ಕಲಿತಿರುವುದರಿಂದ ನಮ್ಮ ಅಕ್ಷರಗಳು ದುಂಡಾಗಿ ಕಾಣಿತ್ತವೆ. ಆದರೆ, ಇಂದಿನ ಮಕ್ಕಳು ಎಲ್ಲವನ್ನು ಟೈಪ್ ಮಾಡುವ ಮೂಲಕ ಬರವಣಿಗೆಯನ್ನೇ ಮರೆತಿರುವ ಕಾರಣ ಯಾರಿಗೂ ಭಾಷೆಯ ಮೇಲೆ ಹತೋಟಿ ಇಲ್ಲದಂತಾಗಿದೆ. ಇದೇ ರೀತಿ ಅಭ್ಯಾಸವಿಲ್ಲದೆ ಚಿತ್ರರಂಗ ಹಾಗೂ ಕಿರುತೆರೆಗೆ ಬರುವವರ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ರಂಗಭೂಮಿ ಒಂದು ಗುರುಕುಲವಿದ್ದಂತೆ. ಇಲ್ಲಿ ಅಭ್ಯಾಸ ಮಾಡಿದರೆ, ಅಭಿನಯದಲ್ಲಿ ಆಸಕ್ತಿ, ಶ್ರದ್ಧೆ ಮೂಡುತ್ತದೆ. ಇತೀಚೆಗೆ ಅನೇಕರು ಶಿಫಾರಸ್ಸು ಮತ್ತು ಲಾಭಕ್ಕಾಗಿ ಅಭಿನಯಿಸಲು ಬರುತ್ತಿರುವುದರಿಂದ ಗುಣಮಟ್ಟ ಕಡಿಮೆಯಗುತ್ತಿದೆ. ಇದಕ್ಕೆಲ್ಲ ಮುಖ್ಯ ಕಾರಣ ಅಭ್ಯಾಸವಿಲ್ಲದಿರುವುದು ಆದ್ದರಿಂದ ರಂಗಭೂಮಿಯಲ್ಲಿ ತೊಡಗಿಸಿಕೊಂಡರೆ, ಉತ್ತಮ ಫಲಿತಾಂಶ ನಿರೀಕ್ಷಿಸಬಹುದಾಗಿದೆ ಎಂದು ಸಲಹೆ ನೀಡಿದರು.

ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ಮನರಂಜನೆಯ ಹೆಸರಿನಲ್ಲಿ ನೂರಾರು ವಾಹಿನಿಗಳು ಹುಟ್ಟಿಕೊಂಡು ಅಭಿನಯದ ಗಾಂಭೀರ್ಯವನ್ನು ಹಾಡು ಮಾಡಿ, ಆತುರದ ಅಡುಗೆಯ ರೀತಿಯಲ್ಲಿ ಮನೋರಂಜನೆ ನೀಡುತ್ತಿವೆ. ಆದರೆ, ರಂಗಭೂಮಿ ಯಾವುದೇ ಲಾಭ, ಆಸೆಗಳನ್ನು ಇಟ್ಟುಕೊಳ್ಳದೆ ಸಮಾಜಕ್ಕೆ ಉತ್ತಮ ಸಂದೇಶವನ್ನು ನೀಡುತ್ತಿದೆ ಎಂದರು.

ಇಂದು ವಿದ್ಯುತ್ ಚಿತಾಗಾರ ಉದ್ಘಾಟನೆ


ಮೈಸೂರು, ಜ.12– ಮೈಸೂರು ಕುಂಬಾರಕೊಪ್ಪಲಿನ ಸ್ಮಶಾನದಲ್ಲಿ ವಿದ್ಯುತ್ ಚಿತಾಗಾರ ಇನ್ನಿತರ ಅಭಿವೃದ್ಧಿ ಕಾರ್ಯಗಳ ಉದ್ಘಾಟನಾ ಕಾರ್ಯಕ್ರಮ ನಾಳೆ(ಜ.13) ಬೆಳಗ್ಗೆ 10.30ಕ್ಕೆ ನೆರವೇರಲಿದೆ. ಪಾಲಿಕೆ ಸದಸ್ಯ ಪೈಲ್ವಾನ್ ಶ್ರೀನಿವಾಸ್ ಅವರ ಪ್ರಯತ್ನದ ಫಲವಾಗಿ ಈ ಸ್ಮಶಾನದ ಅಭಿವೃದ್ಧಿಗಾಗಿ ಪಾಲಿಕೆಯಿಂದ 1.50 ಕೋಟಿ ರೂ. ಅನುದಾನ ದೊರೆತಿತ್ತು. ಶವ ಸಂಸ್ಕಾರಕ್ಕಾಗಿ ಹೈ ವೋಲ್ಟೇಜ್ ಎಲೆಕ್ಟ್ರಿಕಲ್ ಬರ್ನಿಂಗ್ ಮೆಷಿನ್, ಆವರಣದಲ್ಲಿ ಹೈಮಾಸ್ಟ್ ಲೈಟ್, ನೀರಿನ ಟ್ಯಾಂಕ್ ಸೇರಿದಂತೆ ಅನೇಕ ಅಭಿವೃದ್ಧಿ ಕಾರ್ಯಗಳಾಗಿವೆ.

ಮೈಸೂರಲ್ಲಿ ಸಾವಿನಲ್ಲೂ ಒಂದಾದ ದಂಪತಿ

ಮೈಸೂರು, ಜ.12(ಎಸ್‌ಬಿಡಿ)– ಸುದೀರ್ಘ ದಾಂಪತ್ಯ ಜೀವನದಲ್ಲಿ ಹೆಜ್ಜೆ ಹಾಕಿದ್ದ



ದಂಪತಿ, ಒಂದೇ ದಿನ ಜೀವನ ಪಯಣ ಮುಗಿಸಿ ಸಾವಿನಲ್ಲೂ ಒಂದಾಗಿರುವ ಮನಕಲಕುವ ಘಟನೆ ಮೈಸೂರಿನಲ್ಲಿ ನಡೆದಿದೆ. ಮೈಸೂರಿನಲ್ಲಿ 45 ವರ್ಷಗಳ ಕಾಲ ಪತ್ರಿಕೆ ವಿತರಕರಾಗಿ ಸೇವೆ ಸಲ್ಲಿಸಿದ್ದ, ಅರವಿಂದನಗರ ನಿವಾಸಿ ವಾಸುದೇವ(83) ಅವರು ತಮ್ಮ ಪತ್ನಿ ಚಂದ್ರಮ್ಮ(76) ಸಾವನ್ನಪ್ಪಿದ ಕೆಲವೇ ಗಂಟೆಯಲ್ಲಿ ತಾವೂ ಕೊನೆಯುಸಿರೆಳೆದಿದ್ದಾರೆ. ವಾಸುದೇವ ಹಾಗೂ ಚಂದ್ರಮ್ಮ ದಂಪತಿ ವಿವಾಹವಾಗಿ 52 ವರ್ಷ ಕಳೆದಿತ್ತು. ಚಂದ್ರಮ್ಮ ಅವರಿಗೆ ಹೃದಯ ಸಂಬಂಧಿ ಸಮಸ್ಯೆಯಿತ್ತು. 20 ದಿನಗಳ ಹಿಂದೆಯಷ್ಟೇ ವಾಸುದೇವ ಅವರನ್ನು ಪಾರ್ಶ್ವವಾಯು ಬಾಧಿಸಿತ್ತು. ಇದರಿಂದ ಮತ್ತಷ್ಟು ಚಿಂತೆಗೀಡಾಗಿದ್ದ ಚಂದ್ರಮ್ಮನವರು ಗುರುವಾರ ಬೆಳಗ್ಗೆ 10.10ರಲ್ಲಿ ಸಾವನ್ನಪ್ಪಿದರು. ಇವರ ಪುತ್ರಿ ಹೊರರಾಜ್ಯದಿಂದ ಬರಬೇಕಿರುವ ಕಾರಣ ಶುಕ್ರವಾರ ಅಂತ್ಯ ಸಂಸ್ಕಾರ ನಡೆಸಲು ಕುಟುಂಬದವರು ನಿರ್ಧರಿಸಿದ್ದರು. ಆದರೆ ವಿಧಿಯಾಟವೇ ಬೇರೆಯಾಗಿತ್ತು. ವಾಸುದೇವ ಅವರೂ ಸಂಜೆ 7.10ರಲ್ಲಿ ಕೊನೆಯಿಸಿರೆಳೆದಿದ್ದಾರೆ. ಈ ದಂಪತಿ ಜಾಮೂನು ತಯಾರಿಸಿ ಹೋಟೆಲ್ ಹಾಗೂ ಸಿಹಿತಿಂಡಿ ಅಂಗಡಿಗಳಿಗೆ ವಿತರಿಸುತ್ತಿದ್ದರು. ಮೃತರು ಪುತ್ರ ಮೋಹನ್ ಕುಮಾರ್, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಬನ್ನಿಮಂಟಪ ಜೋಡಿ ತೆಂಗಿನಮರ ಸ್ಮಶಾನದಲ್ಲಿ ಶುಕ್ರವಾರ ಮಧ್ಯಾಹ್ನ 12ರ ನಂತರ ಇಬ್ಬರ ಅಂತ್ಯ ಸಂಸ್ಕಾರವನ್ನು ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಪೇಪರ್ ವಾಸುದೇವ ದಂಪತಿ ನಿಧನಕ್ಕೆ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಜೆ.ಎಸ್.ಹೋಮದೇವ, ಪದಾಧಿಕಾರಿಗಳು ಹಾಗೂ ಸದಸ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.



ತೀತಿರಮಾಡ ದೀಪ್ ಬೆಳ್ಳಿಯಪ್ಪ ನಿಧನ

ಮೈಸೂರು, ಜ.12– ಕೊಡಗು ಮೂಲದ ತೀತರಮಾಡ ದೀಪ್ ಬೆಳ್ಳಿಯಪ್ಪ(71) ಅವರು ಕೆನಡಾದ ಮಿಸ್ಸಿಸ್ಸೌಗಾ ನಗರದಲ್ಲಿ ಗುರುವಾರ ನಿಧನರಾದರು. ಮೃತರು ಪತ್ನಿ ಲೇಖಾ, ಪುತ್ರ ಕಮಲ್, ಸೊಸೆ ರುಕ್ಸಾನಾ, ಮೊಮ್ಮಗ ದಿಲನ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಪ್ರಸಾದ ಯೋಜನೆಯಡಿ ಚಾಮುಂಡಿಬೆಟ್ಟದಲ್ಲಿ ಮಿತಿ ಮೀರಿದ ಅಭಿವೃದ್ಧಿಗೆ ಖಂಡನೆ

ಚಾಮುಂಡಿಬೆಟ್ಟ ಉಳಿಸಿ ಸಮಿತಿಯಿಂದ ಪ್ರತಿಭಟನೆಗೆ ನಿರ್ಧಾರ

ಮೈಸೂರು,ಜ.12(ಎಂಟಿವೈ)–ಮೈಸೂರಿನ ಪ್ರಮುಖ ಧಾರ್ಮಿಕ ಕೇಂದ್ರವಾಗಿರುವ ಚಾಮುಂಡಿಬೆಟ್ಟದಲ್ಲಿ 'ಪ್ರಸಾದ್' ಯೋಜನೆಯಡಿ ನಡೆಸಲು ಉದ್ದೇಶಿಸಿರುವ ಮಿತಿಮೀರಿದ ಅಭಿವೃದ್ಧಿ ಖಂಡಿಸಿ, ಪರಿಸರ ಸಂರಕ್ಷಣೆಯೊಂದಿಗೆ ಚಾಮುಂಡಿಬೆಟ್ಟವನ್ನು ದೇಶದ ಮಾದರಿ ಬೆಟ್ಟವಾಗಿಸುವಂತೆ ಆಗ್ರಹಿಸಿ ಚಾಮುಂಡಿಬೆಟ್ಟ ಉಳಿಸಿ ಸಮಿತಿ ಪ್ರತಿಭಟನೆ ನಡೆಸಲು ನಿರ್ಧರಿಸಿದೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಚಾಮುಂಡಿಬೆಟ್ಟ ಉಳಿಸಿ ಸಮಿತಿಯ ಪದಾಧಿಕಾರಿಗಳಾದ ಪರಶುರಾಮೇಗೌಡ, ಪಾರಂಪರಿಕ ತಜ್ಞ ಪ್ರೊ.ಎನ್.ಎಸ್.ರಂಗರಾಜು, ಜಲ ತಜ್ಞ ಪ್ರೊ.ಯು.ಎನ್.ರವಿಕುಮಾರ್, ಶ್ರೀಶೈಲ ರಾಮಣ್ಣನವರ್(ಎಂಜಿಪಿ), ಪ್ರಭಾ ನಂದೀಶ್, ಲೀಲಾ ವೆಂಕಟೇಶ್ ಹಾಗೂ ಜವರಪ್ಪ ಮಾತನಾಡಿ, ಮೈಸೂರಿಗೆ ಚಾಮುಂಡಿಬೆಟ್ಟ ಮುಕುಟದಂತೆ ಕಂಗೊಳಿಸುತ್ತಿದೆ. ಆದರೆ, ಈಗಾಗಲೇ ಬೆಟ್ಟದ ಮೇಲೆ ಮಿತಿ ಮೀರಿದ ಪ್ರಮಾಣದಲ್ಲಿ ಅಭಿವೃದ್ಧಿಯಾಗಿದೆ. ಬೆಟ್ಟದ ಮೇಲೆ ಒತ್ತಡ ಹೆಚ್ಚಾಗುತ್ತಿದೆ. ಅದರ ಪರಿಣಾಮವಾಗಿಯೇ ಕಳೆದ ಎರಡು ವರ್ಷಗಳಿಂದ ಬೆಟ್ಟದ ನಂದಿ ರಸ್ತೆಯಲ್ಲಿ ಭೂ ಕುಸಿತ ಉಂಟಾಗಿದೆ. ಒತ್ತಡದಿಂದಾಗಿ ಬೆಟ್ಟದ ಮಣ್ಣು ಸಡಿಲಗೊಳ್ಳುತ್ತಿದೆ. ಈಗಾಗಲೇ ತಜ್ಞರು ಅಭಿವೃದ್ಧಿ ಕಾರ್ಯಗಳಿಂದ ಆಗುತ್ತಿರುವ ತೊಂದರೆಯ ಬಗ್ಗೆ ವಿಷಾದ ವ್ಯಕ್ತಪಡಿಸಿ ಎಚ್ಚರಿಕೆಯ ವರದಿಯನ್ನೂ ನೀಡಿದ್ದಾರೆ.

ಆದರೆ, ಅದನ್ನು ಪರಿಗಣಿಸದೆ ಇದೀಗ ಪ್ರಸಾದ ಯೋಜನೆಯಡಿ ಬೆಟ್ಟವನ್ನು ಇನ್ನಷ್ಟು ಕಾಂಕ್ರೀಟಿಕರಣ ಮಾಡುವ ಮೂಲಕ ಬೆಟ್ಟಕ್ಕೆ ಮತ್ತಷ್ಟು ಗಂಡಾಂತರ ತರಲು ಮುಂದಾಗಿರುವ ಕ್ರಮ ಖಂಡಿಸಿ ನಿರಂತರ ಹೋರಾಟ ನಡೆಸಲು ನಿರ್ಧರಿಸಲಾಗಿದೆ ಎಂದು ವಿವರಿಸಿದರು. ಚಾಮುಂಡಿಬೆಟ್ಟ ಸಡಿಲ ಮಣ್ಣಿನಿಂದ ಕೂಡಿದ್ದಾಗಿದ್ದು, ಇಲ್ಲಿನ ಮಣ್ಣು ತೆಗೆದರೆ ಬಂಡೆಗಳು ಉರುಳುತ್ತವೆ. ಮೇಲೆ ಕಾಂಕ್ರೀಟ್ ಕಟ್ಟಡ ನಿರ್ಮಿಸಿದರೆ, ಪರಿಸರ ಕಾಂಕ್ರಿಟೀಕರಣಗೊಂಡರೆ ನೀರು ಇಂಗುವುದಿಲ್ಲ. ಹೀಗಾಗಿ ಪ್ರಸಾದ ಯೋಜನೆ ಅಡಿಯಲ್ಲಿ ಕಾಮಗಾರಿ ಕೈಗೊಳ್ಳುವುದು ಬೆಟ್ಟಕ್ಕೆ ಅಪಾಯ ತಂದೊಡ್ಡುತ್ತದೆ. ಬೆಟ್ಟದ ಹಲವೆಡೆ ಭೂಕುಸಿತ ಸಂಭವಿಸಿರುವುದನ್ನು ಮರೆಯುವಂತಿಲ್ಲ. ಹೀಗಾಗಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಚಾಮುಂಡಿಬೆಟ್ಟ ಉಳಿಸಿ ಸಮಿತಿ ಸದಸ್ಯ ಪ್ರೊ.ಎನ್‌ಎಸ್.ರಂಗರಾಜು ಮಾತನಾಡುತ್ತಿರುವುದು. ಚಿತ್ರದಲ್ಲಿ ಬೆಟ್ಟ ಉಳಿಸಿ ಸಮಿತಿ ಸದಸ್ಯರಾದ ಜವರಪ್ಪ, ಶ್ರೀಶೈಲ ರಾಮಣ್ಣನವರ್(ಎಂಜಿಪಿ), ಪರಶುರಾಮೇಗೌಡ, ಜಲತಜ್ಞ ಪ್ರೊ.ಯು.ಎನ್.ರವಿಕುಮಾರ್, ಪ್ರಭಾ ನಂದೀಶ್, ಲೀಲಾ ವೆಂಕಟೇಶ್ ಅವರನ್ನು ಕಾಣಬಹುದು.

ಇಂತಹ ಪರಿಸ್ಥಿತಿಯಲ್ಲಿ ಬೆಟ್ಟದ ಮೇಲೆ ಯಾವುದೇ ರೀತಿಯ ಕಾಮಗಾರಿ ಕೈಗೊಳ್ಳ ಬೇಕಾದರೂ ತಜ್ಞರ ಅಭಿಪ್ರಾಯ ಪಡೆಯುವುದು ಅಗತ್ಯವಾಗಿದೆ ಎಂದರು. ಪ್ರಸಾದ ಯೋಜನೆಯಡಿ ಬೆಟ್ಟದ ಮೇಲೆ ಕೇವಲ ಸೌಂದರ್ಯೀಕರಣ ಉದ್ದೇಶದಿಂದ ನಿರ್ಮಾಣಗಳಾಗುತ್ತಿವೆ. ಇದು ಬೆಟ್ಟದ ಪರಿಸರ ಹಾಗೂ ಧಾರ್ಮಿಕ ಪಾವಿತ್ರ್ಯಕ್ಕೆ ಕುಂದುಂಟು ಮಾಡುತ್ತದೆ. ಸೌಂದರ್ಯೀಕರಣದಿಂದ ಪ್ರವಾಸ ಸ್ಥಳವಾಗಿ ಮಾರ್ಪಡುತ್ತದೆ. ಆದರೆ, ಬೆಟ್ಟವನ್ನು ಧಾರ್ಮಿಕ ಕೇಂದ್ರವಾಗಿ ಕಾಪಾಡಿಕೊಳ್ಳಬೇಕಾಗಿದೆ. ಪ್ರವಾಸೋದ್ಯಮದಿಂದಾಗಿ ಈಗಾಗಲೇ ಮೈಸೂರು ನಗರ ಹಾಗೂ ಚಾಮುಂಡಿಬೆಟ್ಟದ ಮೇಲೆ ಸಾಕಷ್ಟು ಒತ್ತಡ ಬಿದ್ದಿದೆ. ಹೀಗಾಗಿ ಈ ಒತ್ತಡ ಇನ್ನಷ್ಟು ಹೆಚ್ಚುವಂತೆ ಬೆಟ್ಟದ ಮೇಲೆ ಪ್ರವಾಸೋದ್ಯಮ ಅಭಿವೃದ್ಧಿಪಡಿಸುವುದು ಬೇಡ ಎಂದು ಸಲಹೆ ನೀಡಿದರು. ಬೆಟ್ಟವನ್ನು ಹಸಿರೀಕರಣ ಮಾಡಲು ಕ್ರಮ ಕೈಗೊಳ್ಳಬೇಕು. ಬೆಟ್ಟದಲ್ಲಿ ಲಭ್ಯವಿರುವ ಜಾಗದಲ್ಲಿ ವಿವಿಧ ಜಾತಿಯ ಗಿಡ ನೆಟ್ಟು ಹಸಿರೀಕರಣಗೊಳಿಸಲು ಕ್ರಮಕೈಗೊಳ್ಳಬೇಕು. ಬೆಟ್ಟದ ಮೇಲಿನ ಚರಂಡಿ ನೀರನ್ನು ಸಂಸ್ಕರಿಸಬೇಕು. ಸಮರ್ಪಕವಾಗಿ ತ್ಯಾಜ್ಯ ವಿಲೇವಾರಿ ಮಾಡಬೇಕು. ಬೆಟ್ಟದಲ್ಲಿ ಸಾಧ್ಯವಾದಷ್ಟು ನವೀಕರಿಸಬಹುದಾದ ಸೋಲಾರ್ ಶಕ್ತಿಯನ್ನು ವಿದ್ಯುಚ್ಛಕ್ತಿಯಾಗಿ ಬಳಸಲು ಮುಂದಾಗಬೇಕು. ಬೆಟ್ಟಕ್ಕೆ ಬರುವವರ ಸಂಖ್ಯೆ ಹೆಚ್ಚಾಗಿದೆ. ಇದರಿಂದ ಗೋಪಾಲಸ್ವಾಮಿ ಬೆಟ್ಟದ ಮಾದರಿಯಲ್ಲಿ ಖಾಸಗಿ ವಾಹನಗಳ ಪ್ರವೇಶ ನಿರ್ಬಂಧಿಸಬೇಕು. ಸರ್ಕಾರಿ ಬಸ್‌ಗಳಲ್ಲೇ ಪ್ರಯಾಣಿಸಬೇಕು ಎಂದು ಆಗ್ರಹಿಸಿದರು.

ಸರ್ಕಾರ ಹಾಗೂ ಜಿಲ್ಲಾಡಳಿತ ಪ್ರಸಾದ ಯೋಜನೆಯಡಿ ಬೆಟ್ಟದಲ್ಲಿ ನಡೆಸಲು ಉದ್ದೇಶಿಸಿರುವ ಅಭಿವೃದ್ಧಿ ಕಾರ್ಯವನ್ನು ಸ್ಥಗಿತಗೊಳಿಸಬೇಕು. ಇಲ್ಲದಿದ್ದರೆ, ಬೆಟ್ಟದ ರಕ್ಷಣೆಗಾಗಿ ಚಾಮುಂಡಿಬೆಟ್ಟ ಉಳಿಸಿ ಸಮಿತಿಯಿಂದ ನಿರಂತರ ಹೋರಾಟ ನಡೆಸಲು ತೀರ್ಮಾನಿಸಲಾಗಿದೆ. ಪಾದಯಾತ್ರೆ ಸಹಿ ಸಂಗ್ರಹ ಅಭಿಯಾನ, ಜಾಗೃತಿ ಜಾಥಾ, ಸತ್ಯಾಗ್ರಹ ಸೇರಿದಂತೆ ವಿವಿಧ ಸ್ವರೂಪದ ಹೋರಾಟ ನಡೆಸಲು ಚಿಂತಿಸಲಾಗಿದೆ. ಚಾಮಲಾಪುರ ಹೋರಾಟದ ಮಾದರಿಯಲ್ಲಿ ಮತ್ತೊಂದು ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ಅಭಿವೃದ್ಧಿ ವಿರೋಧಿಗಳಲ್ಲ: ನಾವು ಅಭಿವೃದ್ಧಿ ವಿರೋಧಿಗಳಲ್ಲ. ಚಾಮುಂಡಿಬೆಟ್ಟವನ್ನು ಕಾಂಕ್ರೀಟೀಕರಣ ಮಾಡುವುದಕ್ಕೆ ನಮ್ಮ ವಿರೋಧವಿದೆ. ನೈಸರ್ಗಿಕವಾಗಿಯೇ ಚಾಮುಂಡಿಬೆಟ್ಟ ಸುಂದರವಾಗಿದೆ. ಈಗಾಗಲೇ ದೇಶದ ಹಲವು ಬೆಟ್ಟಗಳಲ್ಲಿ ಆಗುತ್ತಿರುವ ಸಮಸ್ಯೆಗಳನ್ನು ಅವಲೋಕಿಸಬೇಕು. ನಂದಿ ರಸ್ತೆಯಲ್ಲಿ ಭೂಕುಸಿತ ನಮಗೆಲ್ಲಾ ಎಚ್ಚರಿಕೆಯ ಗಂಟೆ. ಹಸಿರು ಉಳಿಸಬೇಕು. ಹಸಿರಿದ್ದರೆ ನಾವೆಲ್ಲಾ ಉಸಿರಾಡಬಹುದು. ಈ ನಿಟ್ಟಿನಲ್ಲಿ ಹೋರಾಟ ನಡೆಸಲಾಗುತ್ತಿದೆ ಎಂದರು.

ದೇವಿಕೆರೆ ಅಭಿವೃದ್ಧಿ ಕಾರ್ಯ ಅವೈಜ್ಞಾನಿಕ



"ಚಾಮುಂಡಿಬೆಟ್ಟದ ದೇವಿಕೆರೆಯನ್ನು ಅವೈಜ್ಞಾನಿಕವಾಗಿ ಅಭಿವೃದ್ಧಿ ಮಾಡಲಾಗುತ್ತಿದೆ. ಕೆರೆಯ ನೈಸರ್ಗಿಕ ಲಕ್ಷಣ ಕಾಪಾಡಿಕೊಂಡು ವೈಜ್ಞಾನಿಕ ಕ್ರಮ ಅನುಸರಿಸಿ, ಕೆರೆ ವಾತಾವರಣ ಕಾಪಾಡಿಕೊಂಡು ಅಭಿವೃದ್ಧಿ ಪಡಿಸಬೇಕಾಗಿದೆ. ಆದರೆ, ದೇವಿಕೆರೆಯನ್ನು ಮನಬಂದಂತೆ ಹೂಳೆತ್ತಿ, ಟೈಲ್ಸ್‌ಗಳನ್ನು ಜೋಡಣೆ ಮಾಡಿ ಸುಂದರಗೊಳಿಸುವುದರಿಂದ ಅಭಿವೃದ್ಧಿ ಎನಿಸುವುದಿಲ್ಲ. ಕೆರೆಯಲ್ಲಿ ಹಲವು ವೈವಿಧ್ಯಮಯ ಜಲಚರಗಳು ಜೀವಿಸುತ್ತವೆ. ಅವುಗಳಿಗೆ ಸೂಕ್ತವಾದ ವಾತಾವರಣ ನಿರ್ಮಿಸಿ, ಕೆರೆ ಅಭಿವೃದ್ಧಿ ಪಡಿಸಬೇಕಾಗಿತ್ತು. ಅಲ್ಲದೆ, ಅಧಿಕಾರಿಗಳು ತಜ್ಞರ ಅಭಿಪ್ರಾಯ, ಸಲಹೆ ಪಡೆಯಬಹುದಾಗಿತ್ತು.

–ಯು.ಎನ್.ರವಿಕುಮಾರ್, ಜಲತಜ್ಞ

ಮೂಲ ನಿವಾಸಿಗಳಿಗೆ ತೊಂದರೆ: ಅಭಿವೃದ್ಧಿ ಹೆಸರಲ್ಲಿ ಬೆಟ್ಟದ ಮೇಲೆ ನಿರ್ಮಾಣ ಮಾಡುವ ಕಟ್ಟಡಗಳಿಂದ, ಕಾಂಕ್ರೀಟೀಕರಣದಿಂದ ಬೆಟ್ಟ ಮತ್ತಷ್ಟು ಸಡಿಲಗೊಳ್ಳುತ್ತದೆ. ಯಾವುದೋ ಉದ್ದೇಶ ಇಟ್ಟುಕೊಂಡು ಅಭಿವೃದ್ಧಿ ಕಾರ್ಯ ನಡೆಸಿದರೆ, ಅದರಿಂದ ಬೆಟ್ಟದ ಮೇಲೆ ವಾಸಿಸುತ್ತಿರುವ ಮೂಲ ನಿವಾಸಿಗಳಿಗೆ ತೊಂದರೆಯಾಗುತ್ತದೆ. ದಿನದ 24 ಗಂಟೆಯೂ ಬೆಟ್ಟದ ಮೇಲೆ ವಾಸಿಸುವ ಜನರ ಹಿತವೂ ಮುಖ್ಯವಾಗಿದೆ. ಪ್ರಸಾದ ಯೋಜನೆಯಡಿ ಕಾಂಕ್ರೀಟ್ ಸುರಿದು ದೊಡ್ಡ ದೊಡ್ಡ ಕಟ್ಟಡ ಕಟ್ಟಿದರೆ, ಮೂಲ ನಿವಾಸಿಗಳ ರಕ್ಷಣೆ ಮಾಡಿದಂತಾಗುವುದಿಲ್ಲ. ಕಾಂಕ್ರೀಟ್ ಹಾಗೂ ಟೈಲ್ಸ್‌ನಿಂದ ಬೆಟ್ಟದ ಸೌಂದರ್ಯ ಹೆಚ್ಚಿಸಲು ಸಾಧ್ಯವಿಲ್ಲ. ನೈಸರ್ಗಿಕವಾಗಿ ಬೆಳೆದಿರುವ ಗಿಡ–ಮರಗಳಿಂದ ಕಂಗೊಳಿಸುವ ಬೆಟ್ಟದ ರಕ್ಷಣೆಗೆ ಮೈಸೂರಿಗರು ಪಣ ತೊಡಬೇಕಾಗಿದೆ ಎಂದು ಮನವಿ ಮಾಡಿದರು.

ಸ್ಯಾಂಟ್ರೋ ರವಿ ಬಿಜೆಪಿ ಕಾರ್ಯಕರ್ತ ಹೌದೋ, ಇಲ್ಲವೋ ಪರಿಶೀಲಿಸಲು ಸೂಚನೆ

ಬೆಂಗಳೂರು, ಜ.12(ಕೆಎಂಶಿ)– ಕೆಟ್ಟ ಸಂಸ್ಕೃತಿಯು ರಾಜಕಾರಣ ಪ್ರವೇಶಿಸಲು



ಕಾಂಗ್ರೆಸ್ ಮಹಾದ್ವಾರವಾಗುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ನವರ ಮನೆ ಸ್ವಚ್ಛ ಮಾಡಿಕೊಳ್ಳಲಿ. ಸ್ಯಾಂಟ್ರೋ ರವಿ ಬಿಜೆಪಿ ಕಾರ್ಯಕರ್ತ ಎನ್ನುವ ಬಗ್ಗೆ ಶಾಸಕ ದಿನೇಶ್ ಗುಂಡೂರಾವ್ ಮಾಡಿರುವ ಟ್ವೀಟ್ ಕುರಿತು ಪ್ರತಿಕ್ರಿಯೆ ನೀಡುತ್ತಾ ನಮ್ಮ ಕಾರ್ಯಕರ್ತ ಹೌದೋ ಅಲ್ಲವೋ ಎಂದು ಪರಿಶೀಲಿಸಲು ಸೂಚಿಸಲಾಗಿದೆ ಎಂದರು.

ಕಾಂಗ್ರೆಸ್ ರಾಜಕೀಯವಾಗಿ ದಿವಾಳಿಯಾಗಿದೆ. ಕಾಂಗ್ರೆಸ್‌ನಲ್ಲಿ ಎಂಥವರಿದ್ದಾರೆ ಎಂದು ದಿನೇಶ್‌ಗುಂಡೂರಾವ್ ಅವರಿಗೆ ತಿಳಿದಿದೆ. ನಾನು ಅವರ ಮಟ್ಟಕ್ಕೆ ಇಳಿಯಲಾಗದು. ಮೊದಲು ಅವರ ಮನೆ ಸ್ವಚ್ಛ ಮಾಡಿಕೊಳ್ಳುವುದನ್ನು ಕಲಿಯಲಿ ಎಂದರು.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಉಚಿತ ವಿದ್ಯುತ್ ನೀಡುವುದಾಗಿ ಹೇಳಿಕೆ ನೀಡಿರುವ ಬಗ್ಗೆ ಉತ್ತರಿಸಿ, ಡಿ.ಕೆ.ಶಿವಕುಮಾರ್ ಹತಾಶರಾಗಿ ಈ ರೀತಿ ಹೇಳಿಕೆ ನೀಡುತ್ತಿದ್ದಾರೆ.ಈ ಹೇಳಿಕೆಗಳನ್ನು ಗಮನಿಸಿದರೆ, ಮುಂದೆ ಅನುಷ್ಠಾನ ಮಾಡುವ ಉದ್ದೇಶ ಅವರಿಗಿಲ್ಲ. ಹೇಗಾದರೂ ಮಾಡಿ, ಸುಳ್ಳು ಭರವಸೆ ನೀಡಿ ಚುನಾವಣೆ ಗೆಲ್ಲಬೇಕೆನ್ನುವುದು ಸ್ಪಷ್ಟವಾಗಿದೆ. ಇಷ್ಟು ವರ್ಷ ಆಡಳಿತ ಮಾಡಿದ ಜವಾಬ್ದಾರಿಯುತ ಪಕ್ಷ ಕಾಂಗ್ರೆಸ್, ಹೀಗೆ ಹೇಳುವುದು ಸಲ್ಲದು. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದರೆ ನಡೆಯುತ್ತದೆ. ಅವರಿನ್ನೂ ಹೊಸಬರು. ಕಾಂಗ್ರೆಸ್ ಕಾಲದಲ್ಲಿ 6 ತಾಸು ವಿದ್ಯುತ್ ಸರಿಯಾಗಿ ನೀಡಲಾಗಲಿಲ್ಲ. ಇನ್ನು ಉಚಿತ ವಿದ್ಯುತ್ ಹೇಗೆ ನೀಡಲಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದರು.



ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವತಿಯಿಂದ ಜ.20ರಂದು ಬೃಹತ್ ಕಾಂಗ್ರೆಸ್ ಕಾರ್ಯಕರ್ತರ ಸಭೆ ಹಾಗೂ ಪಕ್ಷ ಸೇರ್ಪಡೆ ಕಾರ್ಯಕ್ರಮ ಆಯೋಜಿಸಿದ್ದು, ಆ ಸಂಬಂಧ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರೊಂದಿಗೆ ಮುಖಂಡರಾದ ಕೆ.ಮರಿಗೌಡ, ಕೂರ್ಗಳ್ಳಿ ಮಹದೇವು, ಅರುಣ್‌ಕುಮಾರ್, ಮೆಲ್ಲಹಳ್ಳಿ ಮಹಾದೇವಸ್ವಾಮಿ, ಕೃಷ್ಣಕುಮಾರ್ ಸಾಗರ್, ಮಾವಿನಹಳ್ಳಿ ಸಿದ್ದೇಗೌಡ, ಬೀರಿಹುಂಡಿ ಬಸವಣ್ಣ, ಮಾದೇಗೌಡ, ಕೆಂಪನಾಯ್ಕ, ಚನ್ನವೀರಪ್ಪ ಇನ್ನಿತರರು ಸಮಾಲೋಚನೆ ನಡೆಸಿದರು.



ಸರ್ ಎಂ ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದಿಂದ ವಿವೇಕಾನಂದರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಅಧ್ಯಕ್ಷ ಮಹೇಶ್, ಕಾರ್ಯದರ್ಶಿ ರವಿಕುಮಾರ್, ಜಂಟಿ ಕಾರ್ಯದರ್ಶಿ ಪಳನಿ, ನಿರ್ದೇಶಕರಾದ ಚಂದ್ರೇಗೌಡ, ಯೋಗೇಶ್, ರುದ್ರಸ್ವಾಮಿ, ಶಿವರಾಜು, ಸಂತೋಷ್ ಕುಮಾರ್, ಯೋಗಣ್ಣ ಉಪಸ್ಥಿತರಿದ್ದರು.

ಜ.18, ಸಾರ್ವಜನಿಕ ಸಮಾಲೋಚನಾ ಸಭೆ

ಮೈಸೂರು: ಹುಣಸೂರು ನಗರಸಭೆ ಕಾರ್ಯಾಲಯದಿಂದ 2023–24ನೇ ಸಾಲಿನ ಅಂದಾಜು ಆಯವ್ಯಯದ ಸಾರ್ವಜನಿಕ ಸಮಾಲೋಚನಾ ಸಭೆಯನ್ನು ಜ.18ರಂದು ಬೆಳಗ್ಗೆ 11.30ಕ್ಕೆ ಕೌನ್ಸಿಲ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.1.2023 ಶುಕ್ರವಾರ, ಮಳೆ ನಕ್ಷತ್ರ: ಉತ್ತರಾಷಾಢ, 11.01.2022ರಿಂದ 23.01.2023
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ,
ತಿಥಿ: ಷಷ್ಠೀ, ನಕ್ಷತ್ರ: ಉತ್ತರಾಷಾಢ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

- **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜೆ, ಲಕ್ಷಾರ್ಚನೆ ಮತ್ತು ವಾರ್ಷಿಕ ಕುಂಭಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನಂ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.
- **ಕುಂಬಾರಕೊಪ್ಪಲು ಮತ್ತು ಹೆಬ್ಬಾಳು ಗ್ರಾಮ:** ಕುಂಬಾರಕೊಪ್ಪಲು ಸ್ಮಶಾನದಲ್ಲಿ ಹೊಸದಾಗಿ ನಿರ್ಮಿಸಿರುವ ಎಲೆಕ್ಟ್ರಿಕಲ್ ಬರ್ನಿಂಗ್ ಮೆಷಿನ್ ಉದ್ಘಾಟನಾ ಸಮಾರಂಭ, ಉಪಸ್ಥಿತರು: ನಗರ ಪಾಲಿಕೆ ಸದಸ್ಯ ಪೈ. ಶ್ರೀನಿವಾಸ್, ನಗರಪಾಲಿಕೆ ಆಯುಕ್ತ ಲಕ್ಷ್ಮಿಕಾಂತರೆಡ್ಡಿ, ಬೆಳಗ್ಗೆ 11ಕ್ಕೆ.
- **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು:** ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಮೈಸೂರು ವಿವಿ ಕುಲಸಚಿವೆ ವಿ.ಆರ್.ಶೈಲಜಾ, ಮುಖ್ಯ ಅತಿಥಿಗಳು: ತಹಸೀಲ್ದಾರ್ ಗಿರೀಶ್, ಅಧ್ಯಕ್ಷತೆ: ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ, ಉಪಸ್ಥಿತರು: ಪ್ರಾಂಶುಪಾಲ ಪ್ರೊ. ವಿಜಯೇಂದ್ರಕುಮಾರ್, ಸ್ಥಳ: ಸುವರ್ಣ ಮಹೋತ್ಸವ ಭವನ, ಬೆಳಗ್ಗೆ 11ಕ್ಕೆ.
- **ಬೇಡನ್ ಪೊವೆಲ್ ಪಬ್ಲಿಕ್ ಸ್ಕೂಲ್ :** ಶಾಲಾ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಅಧ್ಯಕ್ಷತೆ : ಶಾಲೆ ಅಧ್ಯಕ್ಷ ಪಿ. ವಿಶ್ವನಾಥ್, ಸ್ಥಳ: ಕಲಾಮಂದಿರ, ಸಂಜೆ 4ಕ್ಕೆ.
- **ರಾಮಕೃಷ್ಣ ವಿದ್ಯಾಕೇಂದ್ರ ಸಂಯುಕ್ತ ಪದವಿಪೂರ್ವ ಕಾಲೇಜು:** ಕಾಲೇಜು ವಾರ್ಷಿಕೋತ್ಸವ, ಅಧ್ಯಕ್ಷತೆ: ಶ್ರೀರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಮುಖ್ಯ ಅತಿಥಿಗಳು: ಡಿಡಿಪಿಯು ನಾಗಮಲ್ಲೇಶ್, ಲೇಖಿಕ ಹಾಲತಿ ಸೋಮಶೇಖರ್, ಸ್ಥಳ: ಶ್ರೀ ಶಾರದಾ ಸಭಾಂಗಣ, ಸಂಜೆ 4ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ, ಗಾಂಧಿ ಅಧ್ಯಯನ ಕೇಂದ್ರ, ಗಾಂಧಿ ಭವನ, ಪ್ರೊ. ಓ. ಅನಂತರಾಮಯ್ಯನವರ ಒಡನಾಡಿ ಬಳಗ :** ಗಾಂಧಿ ಭವನದ ನಿರ್ದೇಶಕರಾಗಿದ್ದ ಪ್ರೊ. ಓ. ಅನಂತರಾಮಯ್ಯನವರ ಶ್ರದ್ಧಾಂಜಲಿ ಸಭೆ, ಪುಷ್ಪಾರ್ಚನೆ : ಮೈಸೂರು ವಿವಿ ಕುಲಪತಿ ಪ್ರೊ.ಕೆ.ರಾಜಶೇಖರ್, ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ.ಪಿ.ವೆಂಕಟರಾಮಯ್ಯ, ನುಡಿನಮನ: ಪ್ರೊ.ವೈ.ಎಸ್.ಸಿದ್ದೇಗೌಡ, ಪ್ರೊ.ಜೆ.ಸೋಮಶೇಖರ್, ಪ್ರೊ. ಕಾಳಚನ್ನೇಗೌಡ, ಪ್ರೊ.ಗುರುಸಿದ್ದಯ್ಯ, ಪ್ರೊ.ಪದ್ಮಾಶೇಖರ್, ಪ್ರೊ.ಎಂ.ಜಿ.ಬಸವರಾಜು, ಪ್ರೊ.ಬಿ.ಕೆ. ಜಗದೀಶ್, ಪ್ರೊ. ಮೈಲಹಳ್ಳ ರೇವಣ್ಣ, ಸ್ಥಳ: ಗಾಂಧಿ ಸಭಾಂಗಣ, ಗಾಂಧಿ ಭವನ, ಸಂಜೆ 4ಕ್ಕೆ
- **ವಿಶ್ವರತ್ನ ಚಾರಿಟಬಲ್ ಟ್ರಸ್ಟ್, ಹೊನ್ನುಸಿರಿ ವಿವಿಧೋದ್ದೇಶ ಸಹಕಾರ ಸಂಘ:** ದಿವಂಗತ ಎಂ. ಚೇನತ ಅವರ ಸವಿನೆನಪಿನ ಕಾರ್ಯಕ್ರಮ, ಉದ್ಘಾಟನೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ: ಟ್ರಸ್ಟ್ ಅಧ್ಯಕ್ಷ ಡಾ.ಎಚ್.ಬಿ.ಸೋಮಶೇಖರ್, ಮುಖ್ಯ ಅತಿಥಿಗಳು: ಹೊನ್ನುಸಿರಿ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಎಚ್.ಎಂ. ಮಹದೇವಪ್ರಸಾದ್, ಶ್ರೀಕಂಠ, ಅಜೀತ್‌ರವಿ, ಮಂಜುನಾಥ್, ಬಿ.ವಿ. ಶಿವರುದ್ರಯ್ಯ, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಕನ್ನಡದ ಅನನ್ಯ ಲೇಖಕಿಯರು, ಲೇಖನ–ಪ್ರೊ.ಹೇಮಲತಾ ಎಚ್.ಎಂ., 6.40 ಅರಿವಿನ ಶಿಖರ, ಗಾಯನ–ಪಿ.ಎಸ್.ರಂಜನಿ, ಜಿ.ಪುಷ್ಪಲತಾ ವ್ಯಾಖ್ಯಾನ–ಡಾ.ಬಿ.ವಿ.ವಸಂತಕುಮಾರ್, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ಶಿಕ್ಷಣ ಸಂಚಲನ", 9.30 ಗಾಂಧೀ ಸ್ಮೃತಿ 10.00 ಮೈಸೂರು ಎಸ್. ರಾಜಲಕ್ಷ್ಮಿ ಅವರ ನಿರ್ದೇಶನದಲ್ಲಿ ಸಪ್ತವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಭಾವಗೀತೆ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 3.00 ಅವಧರಿಸು ಬಾ ಅಮರ ನಾರೇಯಣ– ಕಾರ್ಯಕ್ರಮ ಸರಣಿ, ಸಂಶೋಧನೆ, ಆಲೇಖ ಮತ್ತು ಸಂಗೀತ ನಿರ್ದೇಶನ– ಟಿ.ಎಸ್. ವಸಂತಮಾಧವಿ ಪರಿಕಲ್ಪನೆ ಮತ್ತು ನಿರೂಪಣೆ –ಡಾ.ಎನ್.ರಘು, 4.00 ಮಹಿಳಾರಂಗ–ಸಂಕ್ರಾಂತಿ ವಿಶೇಷ ಕಾರ್ಯಕ್ರಮ–ಶ್ರೀಕರ ಹರಿದಾಸ ಭಜನಾ ಮಂಡಳಿಯ ಸದಸ್ಯೆಯರು, 4.30 ವೃತ್ತಿ ಮಾಗದರ್ಶನ–ಜಾನಪದ ಅಧ್ಯಯನ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಅಂಬಳಿಕೆ ಹಿರಿಯಣ್ಣ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ, 8.00 ಕನ್ನಡ ಭಾರತಿ 'ಲಲಿತ ಪ್ರಬಂಧ' ಕೆ.ಬಿ.ಮೀನಾಕ್ಷಿ ಅವರಿಂದ ವಿನೋದ ಭಾಷಣ 'ಸೆಲ್ಫಿ ತಗೊಳ್ಳೋಣ ಬನ್ನಿ' ಪ್ರವೀಣ್ ಕುಮಾರ್ ಮಾವಿನ ಕಾಡು, 9.15 ಜನಪದಸಂಗೀತ–ಜವರಯ್ಯ ಮತ್ತು ತಂಡ, 10.00 ವಾದ್ಯವೃಂದ, ನಿರ್ದೇಶನ–ಕೆ.ಪಿ.ಉಪಾಧ್ಯಾಯ.

- **ಗಾನಭಾರತೀ :** ಶ್ರೀಮತಿ ಲಲಿತಾ ರಾಘವನ್ ಸಂಸ್ಮರಣಾ ಕಾರ್ಯಕ್ರಮ, ವಿದುಷಿ ಎಂ.ಆರ್. ಸುಧಾ ಅವರಿಂದ ಗಾಯನ, ವಿದುಷಿ ಅದಿತಿ ಕೃಷ್ಣಪ್ರಕಾಶ್–ವಯೋಲಿನ್, ವಿದ್ವಾನ್ ಜಿ.ಎಸ್. ರಾಮಾನುಜನ್–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಮೋರ್ಚಿಂಗ್, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ
- **ಶ್ರೀ ಅಂಡಾಳ್ ಮಂದಿರ :** ಧನುರ್ಮಾಸ ಪೂಜೆ, ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಅಂಡಾಳ್ ಮಂದಿರಂ ಆವರಣ, ವಿ.ವಿ.ಮೊಹಲ್ಲಾ, ಸಂಜೆ 6ರಿಂದ 7.30 ರವರೆಗೆ.
- **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ವಿದುಷಿ ಬಿ.ಕೆ. ಸೀತಾಲಕ್ಷ್ಮೀ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6 ಗಂಟೆಗೆ.
- **ಸಂಚಲನ ಮೈಸೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು :** ರಾಜ್ಯ ಮಟ್ಟದ ಸಂಚಲನ, ಮಕ್ಕಳ ನಾಟಕೋತ್ಸವ ಮತ್ತು ಜಾನಪದ ಉತ್ಸವದ ಸಮಾರೋಪ ಸಮಾರಂಭ, ಉಪಸ್ಥಿತರು : ಮುಡಾ ಅಧ್ಯಕ್ಷ ಯಶಸ್ವಿ ಎಸ್. ಸೋಮಶೇಖರ್, ಅಪರ ಜಿಲ್ಲಾಧಿಕಾರಿ ಡಾ. ಬಿ.ಎಸ್. ಮಂಜುನಾಥಸ್ವಾಮಿ, ಸಮಾಜ ಸೇವಕ ಕೆ. ಹರೀಶ್‌ಗೌಡ, ಪಾಲಿಕೆ ಸದಸ್ಯ ಜೆ. ಗೋಪಿ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇ ಅರಸ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ರೋಟರಿ ಮೈಸೂರು ಉತ್ತರ ಅಧ್ಯಕ್ಷ ಎಸ್.ಹೆಚ್. ಜಗದೀಶ್, ಬಿ.ಎಂ. ದೀಕ್ಷಿತ್ ಆರಾಧ್ಯ ಅವರಿಂದ ಕೀಬೋರ್ಡ್ ವಾದನ, ನಟನ ರಂಗ ಶಾಲೆಯ ಮಕ್ಕಳಿಂದ ನಾಯಿಮರಿ ನಾಟಕ ಪ್ರದರ್ಶನ, ರಚನೆ : ವೈದೇಹಿ, ಸಂಗೀತ : ಮೇಸಮೀರ, ದಿಶಾರಮೇಶ್, ನಿರ್ದೇಶನ : ಹರಿಸಿಂಗ್, ಸ್ಥಳ: ಕಿರು ರಂಗಮಂದಿರ, ಸಂಜೆ 6ಕ್ಕೆ.
- **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್. ವನಂ:** ಡಾ.ಎನ್.ಕೆ.ರಾಮಶೇಷನ್ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಡಾ. ಕಮಲರಾಮನ್ ಅವರ ಮಂದಿರ, ಡಾ.ಅಂಬೇಡ್ಕರ್ ರಸ್ತೆ, ಸಂಜೆ 6.15 ರಿಂದ.
- **ಕದಂಬ ರಂಗ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ನಾಟಕ ಕದಂಬ ಉತ್ಸವ, ಬೆಂಗಳೂರಿನ ಅಂತರಂಗ ಬಹಿರಂಗ ತಂಡದಿಂದ ಹಿಂಗ್ ಮಾಡಿದ್ರೆ ಹೆಂಗೆ ನಾಟಕ ಪ್ರದರ್ಶನ, ರಚನೆ : ನಾಗವೇಣಿ ರಂಗನ್, ನಿರ್ದೇಶನ : ಬಾಷ್ ರಾಘವೇಂದ್ರ, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

ಆರ್‌ಟಿಸಿ, ಎಂಆರ್ ಶುಲ್ಕ ಹೆಚ್ಚಳ: ರೈತರ ಆಕ್ರೋಶ

ಬಡ ರೈತರ ಗಾಯದ ಮೇಲೆ ಬರೆ ಎಳೆದಿರುವ ಸರ್ಕಾರ


ಸಂಗ್ರಹ ಚಿತ್ರ

ಮೈಸೂರು, ಜ.12(ಎಸ್‌ಬಿಡಿ)– ರಾಜ್ಯ ಸರ್ಕಾರ ಪಹಣಿ (ಆರ್‌ಟಿಸಿ) ಹಾಗೂ ಮ್ಯೂಟೇಶನ್ ರಿಜಿಸ್ಟರ್ (ಎಂ.ಆರ್) ಪ್ರತಿಗೆ ಶುಲ್ಕ ಹೆಚ್ಚಿಸುವ ಮೂಲಕ ಬಡ ರೈತರ ಗಾಯದ ಮೇಲೆ ಬರೆ ಎಳೆದಿದೆ ಎಂದು ರೈತ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಭೂಮಾಪನ ಕಂದಾಯ ವ್ಯವಸ್ಥೆ ಹಾಗೂ ಭೂ ದಾಖಲೆಗಳ ಇಲಾಖೆ ಪ್ರಸ್ತಾವನೆಯಂತೆ ಆರ್‌ಟಿಸಿ ಹಾಗೂ ಎಂಆರ್ ಶುಲ್ಕವನ್ನು 15 ರೂ.ಗಳಿಂದ 25 ರೂ.ಗೆ ಹೆಚ್ಚಿಸಿ ರಾಜ್ಯ ಸರ್ಕಾರ ಇತ್ತೀಚೆಗೆ ಆದೇಶ ಹೊರಡಿಸಿದ್ದು, ಈಗಾಗಲೇ ಪರಿಷ್ಕೃತ ಶುಲ್ಕ ಜಾರಿಯಲ್ಲಿದೆ. ರೈತರಿಗೆ ಅತ್ಯಗತ್ಯವಾದ ಈ ದಾಖಲೆ ಪ್ರತಿಯ ಶುಲ್ಕವನ್ನು ಏಕಾಏಕಿ 10 ರೂ. ಹೆಚ್ಚಿಸಿರುವುದು ಸರಿಯಲ್ಲ. ರೈತರ ಹಿತಾಸಕ್ತಿ ಬದಿಗೊತ್ತಿ, ಕಾರ್ಪೊರೇಟ್ ಕಂಪನಿಗಳಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಈ ರೀತಿ ಶುಲ್ಕ ಪರಿಷ್ಕರಿಸಲಾಗಿದೆ ಎಂಬ ಆರೋಪ ಕೇಳಿಬರುತ್ತಿದೆ.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಮೈಸೂರು–ಚಾಮರಾಜನಗರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್ ಈ ಬಗ್ಗೆ ಪ್ರತಿಕ್ರಿಯಿಸಿ, ಆರ್‌ಟಿಸಿ ಹಾಗೂ ಎಂಆರ್ ಶುಲ್ಕ ಹೆಚ್ಚಿಸಿರುವುದು ಖಂಡನೀಯ. ಮೊದಲೇ ಆರ್ಥಿಕ ಸಂಕಷ್ಟದಲ್ಲಿರುವ ರೈತರಿಗೆ ಇದರಿಂದ ಮತ್ತಷ್ಟು ಹೊರೆಯಾಗಲಿದೆ. ಈ ಹಿಂದಿನ 15 ರೂ.ಗಳಿಗಿಂತ ಕಡಿಮೆ ಮಾಡಬೇಕೆಂಬುದು ರೈತರ ಒತ್ತಾಯವಾಗಿತ್ತು. ಆದರೆ ಸರ್ಕಾರ ಏಕಾಏಕಿ 10 ರೂ. ಏರಿಕೆ ಮಾಡುವ ಮೂಲಕ ರೈತರ ಮನವಿಯನ್ನು ನಿರ್ಲಕ್ಷಿಸಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಬ್ಯಾಂಕುಗಳಲ್ಲಿ ಬೆಳೆ ಸಾಲ ನವೀಕರಣ, ಬೆಳೆ ನಷ್ಟ ಪರಿಹಾರ, ನ್ಯಾಯಾಲಯಕ್ಕೆ ಜಾಮೀನು, ಕೃಷಿ ಇಲಾಖೆ ಸಬ್ಸಿಡಿ, ಖಾತೆ ವರ್ಗಾವಣೆ ಸೇರಿದಂತೆ ಕಂದಾಯ ಇಲಾಖೆಗೆ ಸಂಬಂಧಿಸಿದ ಹಲವು ಪ್ರಕ್ರಿಯೆಗಳಿಗೆ ರೈತರು ಕಡ್ಡಾಯವಾಗಿ ಆರ್‌ಟಿಸಿ ಒದಗಿಸಬೇಕು. ಹಾಗಾಗಿ ವರ್ಷದಲ್ಲಿ 15ರಿಂದ 20 ಬಾರಿ ಆರ್‌ಟಿಸಿ ಪಡೆಯಬೇಕಾಗುತ್ತದೆ. ನಾಡಕಚೇರಿ, ತಾಲೂಕು ಕಚೇರಿ, ಡಿಸಿ ಕಚೇರಿ ಹೀಗೆ ಸರ್ಕಾರಿ ಕಚೇರಿಗಳ ಕೇಂದ್ರಗಳು ಮಾತ್ರವಲ್ಲದೆ ಸೈಬರ್ ಕೇಂದ್ರಗಳಲ್ಲೂ ಆರ್‌ಟಿಸಿ ಹಾಗೂ ಎಂಆರ್ ಪಡೆಯಬಹುದು. ಆದರೆ ಹೊರಗಡೆ ಇನ್ನೂ 5 ರೂ. ಹೆಚ್ಚಿಗೆ ಕೊಡಬೇಕಾಗುತ್ತದೆ. ಈ ಕಾರಣದಿಂದಲೇ ಸರ್ಕಾರಿ ಕಚೇರಿ ಕೇಂದ್ರಗಳಲ್ಲಿ ಸರ್ವರ್ ಇಲ್ಲ, ಅಪ್ಲೋಡ್ ಆಗುತ್ತಿಲ್ಲ ಎಂದು ನೆಪ ಹೇಳಿ ಕಚೇರಿ ಹೊರಗಿರುವ ಸೈಬರ್ ಸೆಂಟರ್‌ಗಳಿಗೆ ಹೋಗುವಂತೆ ಮಾಡುತ್ತಾರೆ ಎಂದು ಆರೋಪಿಸಿದ್ದಾರೆ.

ಸರ್ಕಾರಿ ಕಚೇರಿಗಳ ಕೇಂದ್ರಗಳಲ್ಲೂ ಏಜೆನ್ಸಿ ಮೂಲಕ ದಾಖಲೆಗಳ ವಿತರಿಸಲಾಗುತ್ತದೆ. ಸರ್ಕಾರ ಶುಲ್ಕ ಪರಿಷ್ಕರಣೆ ಮಾಡಿರುವುದರಲ್ಲೂ ಅವರ ಹಿತಾಸಕ್ತಿಗೆ ಆದ್ಯತೆ ನೀಡಿದೆ. 25 ರೂ.ಗಳಲ್ಲಿ 10 ರೂ. ಮಾತ್ರ ಕಂದಾಯ ಇಲಾಖೆಗೆ ಸಂದಾಯವಾಗಲಿದ್ದು, ಉಳಿದ 15 ರೂ. ಏಜೆನ್ಸಿ ಪಾಲಾಗುತ್ತದೆ. ಕೃಷಿ ಇಲಾಖೆಯಿಂದ ಔಷಧಿ, ಗೊಬ್ಬರಕ್ಕೆ ಸಬ್ಸಿಡಿ ನೀಡಲಾಗುತ್ತದೆ. ಅದಕ್ಕೂ ರೈತ ಸಂಪರ್ಕ ಕೇಂದ್ರಗಳಿಗೆ ಆರ್‌ಟಿಸಿ ಕೊಡಬೇಕು. 25 ರೂ. ಆರ್‌ಟಿಸಿಗೆ, ಅದನ್ನು ಪಡೆಯಲು ಹಾಗೂ ಅದನ್ನು ರೈತ ಸಂಪರ್ಕ ಕೇಂದ್ರಕ್ಕೆ ತಲುಪಿಸಲು ಹೋಗಿ ಬರುವ ವೆಚ್ಚ ಭರಿಸುವ ರೈತನಿಗೆ 30–40 ರೂ. ಸಬ್ಸಿಡಿ ಸಿಗುತ್ತದೆ. ರೈತರಿಗೆ ಬರೀ ನಷ್ಟವೇ ಆಗುತ್ತಿದೆ. ಮೊಬೈಲ್‌ನಲ್ಲೇ ದಾಖಲೆ ಹುಡುಕಿ ಡೌನ್ಲೋಡ್ ಮಾಡಿಕೊಂಡು ಪ್ರಿಂಟ್ ತೆಗೆದುಕೊಳ್ಳುವ ಅವಕಾಶವಿರಬಹುದು. ಆದರೆ ಅದು ಎಲ್ಲರಿಂದಲೂ ಸಾಧ್ಯವಾಗದು. ಕೆಲವರು ಸೈಬರ್ ಸೆಂಟರ್‌ನಲ್ಲಿ ಪಡೆಯುವ ಪ್ರತಿಗೆ ಹಾಲೋಗ್ರಾಮ್ ಇರುವುದಿಲ್ಲ ಎಂಬ ಕಾರಣಕ್ಕೆ ತಿರಸ್ಕರಿಸಬಹುದು. ಹಾಗಾಗಿ ದಾಖಲೆ ಪಡೆಯಲು ದಿನವೆಲ್ಲಾ ಸರತಿಯಲ್ಲಿ ನಿಲ್ಲಬೇಕಾಗುತ್ತದೆ ಎಂದು ತಿಳಿಸಿದರು.

ಪೇಪರ್‌ಲೆಸ್ ಏನಾಯ್ತು?: ಎಲ್ಲದಕ್ಕೂ ಆಧಾರ್ ಲಿಂಕ್ ಮಾಡಿಸಿದರೆ ಪೇಪರ್‌ಲೆಸ್ ವ್ಯವಹಾರ ಸಾಧ್ಯ. ಸಾರ್ವಜನಿಕರ ಅಲೆದಾಟವೂ ತಪ್ಪುತ್ತದೆ ಎಂದೆಲ್ಲಾ ಹೇಳಿದರು. ಅದರಂತೆ ರೈತರೂ ಕೂಡ ಆಯಾಯ ಇಲಾಖೆ ಸೂಚನೆಯಂತೆ ಆಧಾರ್ ಲಿಂಕ್ ಮಾಡಿಸಿದ್ದಾರೆ. ಆದರೂ ಬ್ಯಾಂಕ್‌ಗಳು, ಕೃಷಿ, ಕಂದಾಯ ಇಲಾಖೆಗಳಲ್ಲೂ ಆರ್‌ಟಿಸಿ ಪ್ರತಿ ಬೇಕೆ ಬೇಕು ಎನ್ನುತ್ತಾರೆ. ಆಧಾರ್ ಲಿಂಕ್ ಆಗಿರುವುದರಿಂದ ಅಗತ್ಯವಾದ ದಾಖಲೆಗಳ ಮಾಹಿತಿಯನ್ನು ಆನ್‌ಲೈನ್‌ನಲ್ಲೇ ಪಡೆಯಬಹುದಿತ್ತಲ್ಲವೇ. ಹಾಗಾದರೆ ರೈತರು ಅಲೆದಾಡುವುದು ತಪ್ಪುವುದರ ಜೊತೆಗೆ ಸಮಯ ಹಾಗೂ ಹಣ ಉಳಿತಾಯವೂ ಆಗುತ್ತದೆ ಎಂದರು.

10 ರೂ.ಗೆ ಇಳಿಕೆ ಮಾಡಿ

ಕೊರೊನಾ ಸಂಕಷ್ಟ ಹಾಗೂ ಬೆಲೆ ಏರಿಕೆಯಿಂದ ರೈತರು ತೀವ್ರ ತೊಂದರೆಯಲ್ಲಿದ್ದಾರೆ. ರೈತರಿಗೆ 10 ರೂ. ದೊಡ್ಡ ಮೊತ್ತವೇ. ಹಾಗಾಗಿ ಆರ್‌ಟಿಸಿ ಹಾಗೂ ಎಂಆರ್ ಶುಲ್ಕವನ್ನು 25ರೂ.ಗೆ ಏರಿಕೆ ಮಾಡಿರುವುದು ಸರಿಯಲ್ಲ. ಇದರಿಂದ ಗುತ್ತಿಗೆದಾರರಿಗೆ ಅನುಕೂಲವಾಗುತ್ತದೆಯೇ ಹೊರತು ರೈತರು ಹಾಗೂ ಸರ್ಕಾರಕ್ಕೆ ನಷ್ಟವೇ. ಒಂದು ಪ್ರತಿಗೆ 5 ರೂ. ವೆಚ್ಚವಾಗಬಹುದು. ಹಾಗಾಗಿ ಕೂಡಲೇ ಸರ್ಕಾರ ಆರ್‌ಟಿಸಿ ಹಾಗೂ ಎಂಆರ್ ಶುಲ್ಕ ಪರಿಷ್ಕರಣೆ ಮಾಡಿ 10 ರೂ.ಗೆ ಇಳಿಸುವ ಮೂಲಕ ರೈತರಿಗೆ ನೆರವಾಗಬೇಕೆಂಬುದು ರೈತ ಮುಖಂಡರ ಆಗ್ರಹವಾಗಿದೆ.

ಮುಂದುವರೆದ ಮೈಸೂರು ವಿವಿ ಹಾಸ್ಟೆಲ್ ಅಡುಗೆ ಸಿಬ್ಬಂದಿ, ಸ್ವಚ್ಛತಾ ನೌಕರರ ಪ್ರತಿಭಟನೆ



ಮೈಸೂರು,ಜ.12(ಪಿಎಂ)–ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮೈಸೂರು ವಿವಿ ಹಾಸ್ಟೆಲ್ ಅಡುಗೆ ಸಿಬ್ಬಂದಿ ಮತ್ತು ಸ್ವಚ್ಛತಾ ಕಾರ್ಯ ನೌಕರರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಅಹೋರಾತ್ರಿ ಪ್ರತಿಭಟನೆ ಗುರುವಾರವೂ ಮುಂದುವರೆಯಿತು.

ಮೈಸೂರಿನ ಬೋಗಾದಿ ರಸ್ತೆಯಲ್ಲಿರುವ ಮಾನಸಗಂಗೋತ್ರಿಯ ವಿವಿ ಮುಖ್ಯದ್ವಾರದ ಆವರಣದಲ್ಲಿ (ಕುವೆಂಪು ದ್ವಾರ) ಬುಧವಾರ ತಮ್ಮ ಹೋರಾಟ ಆರಂಭಿಸಿದ ನೌಕರರು, ಇಂದೂ ಮುಂದುವರೆಸಿದರು. ಕರ್ನಾಟಕ ರಾಜ್ಯ ಸಂಯುಕ್ತ ವಸತಿ ನಿಲಯ ಕಾರ್ಮಿಕರ ಸಂಘದ (ಎಐಯುಟಿಯುಸಿ) ನೇತೃತ್ವದಲ್ಲಿ ವಿವಿಯ ಅಡುಗೆ ಸಿಬ್ಬಂದಿ ವಿದ್ಯಾರ್ಥಿಗಳಿಗೆ ಊಟದ ತೊಂದರೆಯಾಗದಂತೆ ಪಾಳಿಯಲ್ಲಿ ಕೆಲಸ ಮಾಡಿಕೊಂಡು ಹೋರಾಟ ನಡೆಸುತ್ತಿದ್ದಾರೆ. ಕರ್ನಾಟಕ ರಾಜ್ಯ ಸಂಯುಕ್ತ ವಿಶ್ವವಿದ್ಯಾನಿಲಯ ಸ್ವಚ್ಛತಾ ಕಾರ್ಯ ನೌಕರರ ಸಂಘದ (ಎಐಯುಟಿಯುಸಿ) ನೇತೃತ್ವದಲ್ಲಿ ವಿವಿ ಸ್ವಚ್ಛತಾ ನೌಕರರು, ಸ್ವಚ್ಛತಾ ಕೆಲಸ ಸಂಪೂರ್ಣ ಸ್ಥಗಿತಗೊಳಿಸಿ, ಹೋರಾಟದಲ್ಲಿ ನಿರತರಾಗಿದ್ದಾರೆ. ಗುತ್ತಿಗೆದಾರರು ನಮಗೆ ನೇಮಕಾತಿ ಪತ್ರ, ವೇತನ ಚೀಟಿ, ಸಮವಸ್ತ್ರ, ವಾರದ ರಜೆ, ರಾಷ್ಟ್ರೀಯ ಹಬ್ಬಗಳ ರಜೆ, ಇಎಸ್‌ಐ ಕಾರ್ಡ್ ನೀಡುತ್ತಿಲ್ಲ. ಒಪ್ಪಂದದ ಪ್ರಕಾರ 144 ಕಾರ್ಮಿಕರನ್ನು ನೇಮಕ ಮಾಡಿಕೊಳ್ಳದೇ ಕೇವಲ 120 ಮಂದಿ ನೇಮಕ ಮಾಡಿಕೊಳ್ಳುವ ಮೂಲಕ ತೀವ್ರವಾದ ಕೆಲಸದ ಒತ್ತಡ ಹೆಚ್ಚಾಗುವಂತೆ ಮಾಡಲಾಗಿದೆ ಎಂದು ಅಡುಗೆ ಸಿಬ್ಬಂದಿ ಆರೋಪಿಸಿದರು.

ರಜೆ ದಿನಗಳ ಕರ್ತವ್ಯಕ್ಕೆ ಓಟಿ ನೀಡಬೇಕು. ಪ್ರತಿ ತಿಂಗಳು ಎರಡು ಗಳಿಕೆ ರಜೆ ನೀಡಬೇಕು. ರಜೆ ಪಡೆದುಕೊಳ್ಳದಿದ್ದರೆ ರಜೆಗಳ ನಗದೀಕರಣಕ್ಕೆ ಅವಕಾಶ ನೀಡಬೇಕು. ಪನೋರಮಾ ಎಂಟರ್‌ಪ್ರೈಸಸ್ ಗುತ್ತಿಗೆದಾರರಿಂದ ಬಾಕಿ ಪಿಎಫ್ ಹಣವನ್ನು ಕಾರ್ಮಿಕರ ಖಾತೆಗೆ ಪಾವತಿಸಬೇಕು. ಮೊದಲನೇ ಲಾಕ್‌ಡೌನ್ ಅವಧಿಯ (ಏಪ್ರಿಲ್–ಮೇ 2020) ವೇತನವನ್ನು ಕೂಡಲೇ ಪಾವತಿಸಬೇಕು ಎಂಬುದು ಸೇರಿದಂತೆ ತಮ್ಮ ಮೊದಲಾದ ಬೇಡಿಕೆಗಳನ್ನು ಈಡೇರಿಸಬೇಕೆಂದು ಅಡುಗೆ ಸಿಬ್ಬಂದಿ ಆಗ್ರಹಿಸಿದರು.

ನಮಗೆ ಕನಿಷ್ಠ ವೇತನ ಜಾರಿಗೊಳಿಸಬೇಕು. ಹಿಂಬಾಕಿ ವೇತನ ಪಾವತಿಸಬೇಕು ಮತ್ತು ಸಮವಸ್ತ್ರದೊಂದಿಗೆ ಸುರಕ್ಷತಾ ಪರಿಕರಗಳನ್ನು ನೀಡಬೇಕೆಂದು ವಿವಿ ಸ್ವಚ್ಛತಾ ನೌಕರರು ಒತ್ತಾಯಿಸಿದರು. ಮೈಸೂರು ವಿವಿಯಲ್ಲಿ 220ಕ್ಕೂ ಹೆಚ್ಚು ಮಂದಿ ಸ್ವಚ್ಛತಾ ನೌಕರರಾಗಿ ಕಾರ್ಯನಿರ್ವಹಿಸಿದ್ದೇವೆ. ಈ ಪೈಕಿ 150 ನೌಕರರ ಸಂಬಂಧ 1.04 ಕೋಟಿ ರೂ. (ಆಗಸ್ಟ್ 2003ರಿಂದ ಫೆಬ್ರವರಿ 2015ರ ಅವಧಿ) ಭವಿಷ್ಯ ನಿಧಿಯು ವಿವಿಯಿಂದ ಭವಿಷ್ಯ ನಿಧಿ ಸಂಸ್ಥೆಗೆ ವರ್ಗಾವಣೆಗೊಂಡಿದೆ. ಆದರೆ ವಿವಿಯ ನಿರ್ಲಕ್ಷ್ಯದಿಂದ ಹಣವು ಕಾರ್ಮಿಕರ ಖಾತೆಗೆ ಜಮೆಯಾಗಿಲ್ಲ ಎಂದು ದೂರಿದರು.

ಪೌರಕಾರ್ಮಿಕರ ಮುಖಂಡ ಹಾಗೂ ಮಾಜಿ ಮೇಯರ್ ನಾರಾಯಣ್, ಸ್ವರಾಜ್ ಇಂಡಿಯಾ ಮುಖಂಡ ಉಗ್ರನರಸಿಂಹೇಗೌಡ, ಕಾರ್ಮಿಕ ಮುಖಂಡ ಚಂದ್ರಶೇಖರ್ ಮೇಟಿ ಹಾಗೂ ವಿವಿಯ ಕಲೆ ವಿದ್ಯಾರ್ಥಿಗಳು ಕೆಲಕಾಲ ಪ್ರತಿಭಟನೆಯಲ್ಲಿ ಪಾಲ್ಗೊಂಡು ಬೆಂಬಲ ಸೂಚಿಸಿದರು.

ಕಾರ್ಮಿಕರ ಖಾತೆಗೆ ಹಣ ಜಮೆಯಾಗಲು ಭವಿಷ್ಯನಿಧಿ ಸಂಸ್ಥೆಗೆ 3ಎ ಮತ್ತು 6ಎ ನಮೂನೆಗಳಲ್ಲಿ ಕಾರ್ಮಿಕರ ವಿವರಗಳನ್ನು ಸಲ್ಲಿಸುವಂತೆ ಕಳೆದ ನಾಲ್ಕು ವರ್ಷಗಳಿಂದ ಮನವಿ ಮಾಡುತ್ತಿದ್ದರೂ ವಿವಿ ನಿರ್ಲಕ್ಷ್ಯ ತಾಳಿದೆ. ಪ್ರತಿಯೊಬ್ಬ ನೌಕರರಿಗೂ ವರ್ಷಕ್ಕೆ 18 ಗಳಿಕೆ (ಇಎಲ್), 12 ಸಾಂದರ್ಭಿಕ ರಜೆ (ಸಿಎಲ್) ಮತ್ತು 12 ಅನಾರೋಗ್ಯ (ಎಸ್‌ಎಲ್) ರಜೆಗಳನ್ನು ನೀಡಬೇಕು. ವೇತನ ಚೀಟಿಯಲ್ಲಿ ರಜೆಗಳು ಲಭ್ಯವಿರುವ ಬಗ್ಗೆ ಮಾಹಿತಿ ನಮೂದಿಸಬೇಕು. **–ಪ್ರತಿಭಟನಾಕಾರರು.**

ಚಿತ್ರಕಲಾ ಸ್ಪರ್ಧೆ ವಿಜೇತ ಮಕ್ಕಳಿಗೆ ಬಹುಮಾನ ವಿತರಣೆ



ಮೈಸೂರು, ಜ.12(ಎಂಕೆ)– ಮೈಸೂರಿನ ಯಾದವಗಿರಿಯ ಚೆಲುವಾಂಬ ಉದ್ಯಾನವನದಲ್ಲಿರುವ ಸ್ವಾಮಿ ವಿವೇಕಾನಂದರ ಪ್ರತಿಮೆ ಎದುರು ರಾಷ್ಟ್ರೀಯ ಯುವ ದಿನಾಚರಣೆ ಹಾಗೂ ಸ್ವಾಮಿ ವಿವೇಕಾನಂದರ 160ನೇ ಜಯಂತಿ ಅಂಗವಾಗಿ ಟೀಂ ಮೈಸೂರು ವತಿಯಿಂದ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

ಚಿತ್ರಕಲಾ ಸ್ಪರ್ಧೆಯಲ್ಲಿ 131 ಮಕ್ಕಳು ಭಾಗವಹಿಸಿದ್ದು, 8 ರಿಂದ 12 ವರ್ಷದ ವಿಭಾಗದಲ್ಲಿ ಸೆಂಟ್ ಜೋಸೆಫ್ ಶಾಲೆಯ ವೇದಶ್ರೀ ಪ್ರಥಮ, ಮದ್ದೂರಿನ ಸರ್ಕಾರಿ ಶಾಲೆಯ ಹೆಚ್.ಪಿ. ವಿಷ್ಣುಪ್ರಸಾದ್ ದ್ವಿತೀಯ ಹಾಗೂ ಸೆಂಟ್ ಜೋಸೆಫ್ ಶಾಲೆಯ ಕಿಷ್ಟೆ ಎಸ್.ಪಟೇಲ್ ತೃತೀಯ ಬಹುಮಾನ ಗೆದ್ದರು. ಹಾಗೆಯೇ 12ರಿಂದ 18 ವರ್ಷದೊಳಗಿನ ವಿಭಾಗದಲ್ಲಿ ಸೆಂಟ್ ಜೋಸೆಫ್ ಶಾಲೆಯ ಲಿತೇಶ್ ವಿ.ಗೌಡ ಪ್ರಥಮ, ಜ್ಞಾನೋದಯ ಶಾಲೆಯ ಗ್ರಿಷ್ಮಾ ವಿ.ಗೌಡ ದ್ವಿತೀಯ ಹಾಗೂ ಮೋಸಿನ್ ಕುರೈನ್ ಬುಶ್ರಾ ತೃತೀಯ ಬಹುಮಾನ ಪಡೆದುಕೊಂಡರು. ಹಲವು ಮಕ್ಕಳಿಗೆ ಸಮಾಧಾನಕರ ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು.

ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ಮಾತನಾಡಿ, ಸ್ವಾಮಿ ವಿವೇಕಾನಂದರು ಆಧ್ಯಾತ್ಮಿಕವಾಗಿ ಭಾರತವನ್ನು ಪ್ರಪಂಚಕ್ಕೆ ಪರಿಚಯಿಸಿದ ವೀರಸನ್ಯಾಸಿ. ಇವರ ಆದರ್ಶಗಳನ್ನು ನಾವೆಲ್ಲರೂ ಮೈಗೂಡಿಸಿಕೊಳ್ಳಬೇಕು. ವಿಶೇಷವಾಗಿ ಭಾರತದ ಮುಂದಿನ ಪ್ರಜೆಗಳಾದ ಮಕ್ಕಳು ಅಳವಡಿಸಿಕೊಳ್ಳಿ ಎಂದರು. ಪತ್ರಕರ್ತ ಸಿ.ಕೆ.ಮಹೇಂದ್ರ, ಡಾ.ಮಂಜುನಾಥ್ ಶೆಟ್ಟಿ, ಚಿತ್ರ ಕಲಾವಿದ ಸುರೇಶ್, ಪಾಲಿಕೆ ಸದಸ್ಯ ಚಿಕ್ಕವೆಂಕಟ್, ಬಿಜೆಪಿ ಮುಖಂಡ ಸೋಮಶೇಖರ್ ರಾಜು, ಟೀಂ ಮೈಸೂರು ಸಂಚಾಲಕ ಗೋಕುಲ್ ಗೋವರ್ಧನ್, ಮುರಳಿ, ಹರೀಶ್‌ಬಾಬು, ಹಿರಿಯಣ್ಣ, ಲಿಂಗರಾಜು, ಅನಿಲ್ ಜೈನ್, ಮನೋಹರ್, ಸುಮಂತ್, ಯತೀಶ್, ಅಮರ್, ಬಸವರಾಜ್, ಹೇಮಂತ್, ಗಣೇಶ್, ಅಭಿಷೇಕ್, ಸಹನ, ದೀಪು, ಕಾವೇರಿ, ಪಲ್ಲವಿ ಮತ್ತಿತರರಿದ್ದರು.



ಮೈಸೂರು ನಗರ ಸಶಸ್ತ್ರ ಮೀಸಲು ಪಡೆ ಪ್ರಭಾರ ಉಪ ಪೊಲೀಸ್ ಆಯುಕ್ತರಾಗಿ ಎ.ಮಾರುತಿ ಅಧಿಕಾರ ವಹಿಸಿಕೊಂಡರು. ನಿರ್ಗಮಿತ ಡಿಸಿಪಿ ಶಿವರಾಜು ಕೆಎಆರ್‌ಪಿ ಮೌಂಟೆಡ್ ಕಂಪನಿ ಕಮಾಂಡೆಂಟ್ ಆಗಿ ವರ್ಗಾವಣೆಗೊಂಡಿದ್ದಾರೆ.

ಪಿಹೆಚ್.ಡಿ ಪದವಿ



ಮೈಸೂರು: ಡಾ.ಬಿ.ಎಂ.ಕೃಷ್ಣ ಅವರ ಮಾರ್ಗದರ್ಶನದಲ್ಲಿ ಎಂ.ಭರತ್ ಪರಿಸರ ಇಂಜಿನಿಯರಿಂಗ್ ವಿಷಯದಲ್ಲಿ ಮಂಡಿಸಿದ ಮಹಾಪ್ರಬಂಧಕ್ಕೆ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು ಪಿಎಚ್.ಡಿ ಪದವಿ ನೀಡಿದೆ.

ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ವಜಾಕ್ಕೆ ಆಗ್ರಹ

ಮೈಸೂರು,ಜ.12(ಎಂಟಿವೈ)– ಸಮಾಜದಲ್ಲಿ ಕೋಮು ಭಾವನೆ ಕೆರಳಿಸುವ ಪ್ರಯತ್ನ ಮಾಡುತ್ತಿರುವ ರಂಗಾಯಣದ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರನ್ನು ವಜಾಗೊಳಿಸದಿದ್ದರೆ, ಉಗ್ರ ಹೋರಾಟ ನಡೆಸುವುದಾಗಿ ಅಹಿಂದ ಬ್ರಿಗೇಡ್ ಕರ್ನಾಟಕದ ಮೈಸೂರು ವಿಭಾಗದ ಪ್ರಧಾನ ಕಾರ್ಯದರ್ಶಿ ಮನೋಜ್ ಸಾಮ್ರಾಟ್ ಎಚ್ಚರಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಂಗಭೂಮಿಯಂತಹ ತನ್ನದೇ ಆದ ಮಹತ್ವ ಪಡೆದಿರುವ ರಂಗಾಯಣದ ಮೂಲಕ ಕೋಮು ಸೌಹಾರ್ದತೆ ಕದಡುವ ಸಂಚು ನಡೆಸುತ್ತಿದ್ದಾರೆ. ಟಿಪ್ಪು ನಿಜಕನಸು ಪುಸ್ತಕ ಹಾಗೂ ನಾಟಕದಿಂದ ಕೋಮು ಸೌಹಾರ್ದತೆ ಕದಡುವ ಹುನ್ನಾರ ನಡೆಸಿದ್ದರು. ಇದೀಗ ಸಾಂಬಶಿವ ಪ್ರಹಸನ ನಾಟಕದಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಅನ್ನಭಾಗ್ಯ ಯೋಜನೆಯನ್ನು ಅಪಹಾಸ್ಯ ಮಾಡಿದ್ದಾರೆ. ಇದರಿಂದ ಮತ್ತೊಮ್ಮೆ ಉದ್ಧಟತನ ಪ್ರದರ್ಶಿಸಿದ್ದಾರೆ. ರಂಗಾಯಣದ ನಿರ್ದೇಶಕರ ವರ್ತನೆಯಿಂದ ಜಾತಿ–ಜನರ ನಡುವೆ ಸಂಘರ್ಷ ಏರ್ಪಡಲು ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಅವರನ್ನು ರಂಗಾಯಣ ನಿರ್ದೇಶಕರ ಸ್ಥಾನದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಅಹಿಂದ ಬ್ರಿಗೇಡ್ ಕರ್ನಾಟಕ ಸಂಘಟನೆ ಸದಸ್ಯರಾದ ನಟರಾಜು ಕಿರುಗುಂದ, ಚಿಕ್ಕಮಲ್ಲೇಶ್, ಸಂತೋಷ್ ಇದ್ದರು.

ನಕ್ಕರೆ ಅದೇ ಸ್ವರ್ಗ

ರೋಗಿ : ಡಾಕ್ಟರ್, ನಿಜವಾಗಿ ಈ ಔಷಧಿ ಸೀಸೆ ನನ್ನ ನೆಗಡಿಯನ್ನು ವಾಸಿ ಮಾಡುತ್ತದೆಯೇ?

ಡಾಕ್ಟರ್ : ಅಲ್ಲದೆ ಏನು? ಇದುವರೆಗೂ ಯಾರೂ ಎರಡನೇ ಬಾಟಲ್‌ಗಾಗಿ ಬಂದಿಲ್ಲ!

ಮೈಸೂರು ಮಿತ್ರ

ಶುಕ್ರವಾರ, 13 ಜನವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........


ಮೌನ ಆವರಿಸುವವರೆಗೆ ಬುದ್ಧಿವಂತನಾದವನು ಮಾತನಾಡಲು ಮುಂದಾಗುವುದಿಲ್ಲ. – ಬಸವರಾಜ ಕಟ್ಟೀಮನಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಧಾನ್ಯ ಹೆಚ್ಚಿದವನಿಗೆ ಮಾನ್ಯ ಹೆಚ್ಚು

ನಿಮ್ಮ ಪತ್ರಗಳು

ಆಸ್ಕರ್ ರೇಸ್‌ನಲ್ಲಿ ಕಾಂತಾರದ ಚಮತ್ಕಾರ

ಮಾನ್ಯರೆ,



ಒಂದು ಕಾಲದಲ್ಲಿ ಬಾಲಿವುಡ್ ಸಿನಿಮಾಗಳಿಗೆ ಆಸ್ಕರ್ ರೇಸ್‌ನಲ್ಲಿ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತಿತ್ತು. ಆದರೆ ಪ್ರಸ್ತುತ ಸ್ಯಾಂಡಲ್‌ವುಡ್‌ನ ಕನ್ನಡದ ಸಿನಿಮಾಗಳು ಕೂಡ ಅಂತರರಾಷ್ಟ್ರೀಯ ಮಟ್ಟದಲ್ಲೂ ಪೈಪೋಟಿ ನೀಡುತ್ತಿರುವುದು ಖುಷಿಯ ವಿಚಾರ. ರಿಷಬ್ ಶೆಟ್ಟಿ ನಟನೆಯ 'ಕಾಂತಾರ' ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಸದ್ದು ಮಾಡಿತ್ತು ಮತ್ತು ಇತ್ತೀಚೆಗಷ್ಟೇ 'ಕಾಂತಾರ' ಸಿನಿಮಾ 100 ದಿನ ಪೂರೈಸಿತ್ತು.

ಕನ್ನಡದ ಸಿನಿಮಾಗಳು ಭಾರತದಲ್ಲಿ ಮಾತ್ರವಲ್ಲ ದೇಶ, ವಿದೇಶದಲ್ಲೂ ಸದ್ದು ಮಾಡುತ್ತಿವೆ. ಕೆಜಿಎಫ್: ಚಾಪ್ಟರ್ 1 & 2, ವಿಕ್ರಾಂತ್ ರೋಣ, 777 ಚಾರ್ಲಿ, ಕಾಂತಾರ ಕನ್ನಡದ ಸಿನಿಮಾಗಳು ಬಾಕ್ಸ್ ಆಫೀಸ್ ಜೊತೆಗೆ ಜನರ ಮನಸ್ಸನ್ನು ಗೆದ್ದಿವೆ. ಸಿನಿಮಾ ರಂಗದಲ್ಲಿ ಮತ್ತೆ ಸ್ಯಾಂಡಲ್‌ವುಡ್‌ನತ್ತ ತಿರುಗಿ ನೋಡುವಂತೆ ಕನ್ನಡದ ಸಿನಿಮಾಗಳು ಅದ್ಭುತ ಸಾಧನೆ ಮಾಡುತ್ತಿದ್ದು, ಕನ್ನಡಿಗರಿಗೆ ಸಂತಸದ ವಿಚಾರ. 'ಕಾಂತಾರ' ಸಿನಿಮಾ ಈಗ ಹೊಸ ಮೈಲಿಗಲ್ಲು ಸ್ಥಾಪಿಸುವ ಸೂಚನೆ ನೀಡಿದೆ. ಈ ಚಿತ್ರ ಈಗ ಆಸ್ಕರ್ ರೇಸ್‌ಗೆ ಎಂಟ್ರಿ ಕೊಟ್ಟಿದೆ. ಅತ್ಯುತ್ತಮ ಚಿತ್ರ ಹಾಗೂ ಅತ್ಯುತ್ತಮ ನಟ ವಿಭಾಗದಲ್ಲಿ 'ಕಾಂತಾರ' ಅರ್ಹತೆ ಸುತ್ತನ್ನು ಪಾಸ್ ಮಾಡಿದೆ. ಆಸ್ಕರ್ ರೇಸ್‌ನಲ್ಲಿ ಕನ್ನಡದ ಕಾಂತಾರ ಸಿನಿಮಾಗೆ ಆಸ್ಕರ್ ಪ್ರಶಸ್ತಿಯು ದೊರೆತು ಚಮತ್ಕಾರವಾಗಲಿ ಎಂಬುದು ಪ್ರತಿಯೊಬ್ಬ ಕನ್ನಡಿಗನ ಆಶಯ.

–ಆನಂದ ಜೇವೂರ್, ಕಲಬುರಗಿ

ವಿದ್ಯುತ್ ನಿರ್ವಹಣೆ ಸಮರ್ಪಕವಾಗಿರಲಿ!

ಮಾನ್ಯರೆ,

ನಮ್ಮ ರಾಜ್ಯದಲ್ಲಿ ವಿದ್ಯುತ್ ಸಮಸ್ಯೆ ಸಾಕಷ್ಟಿದೆ. ಅದರಲ್ಲೂ ಬೇಸಿಗೆ ಕಾಲ ಬಂತೆಂದರೆ ವಿದ್ಯುತ್ ಕ್ಷಾಮ ಉಲ್ಬಣಿಸುತ್ತದೆ. ಪರಿಸ್ಥಿತಿ ಹೀಗಿದ್ದರೂ ನಮ್ಮ ರಾಜ್ಯದ ಕೆಲ ಪ್ರದೇಶಗಳಲ್ಲಿ ವಿದ್ಯುತ್ ನಿರ್ವಹಣೆ ಹೇಗಿದೆಯೆಂದರೆ, ನಗರ ಹಾಗೂ ಗ್ರಾಮದ ಕೆಲ ವಿದ್ಯುತ್ ಕಂಬಗಳಲ್ಲಿ ಹಗಲು ಹೊತ್ತಿನಲ್ಲೂ ವಿದ್ಯುತ್ ದೀಪ ಉರಿಯುತ್ತಿರುತ್ತವೆ!

ರಾತ್ರಿ ವೇಳೆ ವಿದ್ಯುತ್ ಕಂಬಗಳಿಗೆ ಅಳವಡಿಸಿರುವ ಸಾರ್ವಜನಿಕ ವಿದ್ಯುತ್ ದೀಪ ಬಳಸಿ, ಬೆಳಗಿನ ವೇಳೆ ಅದನ್ನು ಆರಿಸುವ ಸಮರ್ಪಕ ವ್ಯವಸ್ಥೆ ರಾಜ್ಯದ ಬಹುತೇಕ ನಗರ ಹಾಗೂ ಹಳ್ಳಿಗಳಲ್ಲಿ ಇಲ್ಲವಾಗಿದೆ. ಹೀಗಾಗಿ ಹಗಲು ಹೊತ್ತಿನಲ್ಲೂ ಸಾರ್ವಜನಿಕ ವಿದ್ಯುತ್ ದೀಪಗಳು ಉರಿದು ವಿದ್ಯುತ್ ಪೋಲಾಗುತ್ತಿದೆ. ಇದರಿಂದ ವಿದ್ಯುತ್ ಸಮಸ್ಯೆ ಇನ್ನಷ್ಟು ಹೆಚ್ಚಾಗುವುದರಿಂದ ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗಳು ಇದನ್ನರಿತು ರಾತ್ರಿ ವೇಳೆ ಮಾತ್ರ ವಿದ್ಯುತ್ ಕಂಬಗಳಲ್ಲಿ ಅಳವಡಿಸಿರುವ ಸಾರ್ವಜನಿಕ ವಿದ್ಯುತ್ ದೀಪಗಳನ್ನು ಬೆಳಗಿಸಿ, ಹಗಲು ವೇಳೆ ಕಡ್ಡಾಯವಾಗಿ ಆಫ್ ಮಾಡುವ ವ್ಯವಸ್ಥೆಯನ್ನು ರಾಜ್ಯದಲ್ಲೆಡೆ ಕಟ್ಟುನಿಟ್ಟಾಗಿ ಜಾರಿಗೆ ತಂದು ವಿದ್ಯುತ್ ಉಳಿತಾಯದ ಕಡೆ ಹೆಚ್ಚು ಗಮನ ಕೊಡುವುದು ಅನಿವಾರ್ಯ ಹಾಗೂ ಅವಶ್ಯಕವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಅಡ್ಡಂಡ ಕಾರ್ಯಪ್ಪ ಅಧಿಕಾರದಲ್ಲಿ ಮುಂದುವರೆಯಲಿ


ಮಾನ್ಯರೆ,

ನಾವು ನಿರೀಕ್ಷಿಸಿದಂತೆ ರಂಗಾಯಣದ ನಿರ್ದೇಶಕರಾದ ಅಡ್ಡಂಡ ಕಾರ್ಯಪ್ಪನವರನ್ನು ಎತ್ತಂಗಡಿ ಮಾಡುವ ಪ್ರಹಸನ ಆರಂಭವಾಗಿದೆ. ಸರ್ಕಾರದ ಅನುದಾನ ಪಡೆದು ಎಡಪಂಕ್ತಿಯರ ಕೈಯಲ್ಲಿ ಇದ್ದ ರಂಗಾಯಣ ಕಾರ್ಯಪ್ಪನವರು ಬಂದ ನಂತರ ನಿಜವಾದ ರಂಗಾಯಣದ ಉನ್ನತಿ ಆರಂಭವಾಯಿತು. ರಂಗಾಯಣದ ಸುತ್ತಲೂ ಮರಗಳಿಂದ ನಿತ್ಯ ಹಸಿರಿನಿಂದ ಕೂಡಿದ್ದು, ರಂಗಾಯಣವು ನಳನಳಿಸುವಂತೆ ಮಾಡಿದ್ದಾರೆ. ಈ ಹಿಂದೆ ಇಲ್ಲಿನ ಆರ್ಥಿಕ ವ್ಯವಸ್ಥೆ ಕುಸಿದಾಗ ಕಾರ್ಯಪ್ಪನವರು ಸರಿಯಾದ ವ್ಯವಸ್ಥೆ ಮಾಡಿರುತ್ತಾರೆ. ಒಬ್ಬ ನಿಷ್ಠಾವಂತ ಹಾಗೂ ರಂಗಾಸಕ್ತ ಅಡ್ಡಂಡ ಕಾರ್ಯಪ್ಪನವರ ಸೇವೆ ಇನ್ನೂ 3 ವರುಷ ರಂಗಾಯಣದಲ್ಲಿ ಮುಂದುವರೆಸಬೇಕು. ಸರ್ಕಾರ ಯಾವುದೇ ವಿಧವಾದ ಪ್ರತಿಭಟನೆಗೆ ಬಗ್ಗಬಾರದು. ಪ್ರತಿ ಭಾನುವಾರ, ಶನಿವಾರ ರಂಗಾಯಣವು ರಂಗಾಸಕ್ತರಿಂದ ಮತ್ತು ನಾಟಕ ಪ್ರಿಯರಿಂದ ತುಂಬಿರುತ್ತದೆ. ಟಿಪ್ಪುವಿನ ನಿಜ ಕನಸುಗಳು ನಾಟಕ ಪ್ರಸಿದ್ಧವಾದಾಗಲೇ ಅಡ್ಡಂಡ ಕಾರ್ಯಪ್ಪನವರನ್ನು ಎತ್ತಂಗಡಿ ಮಾಡುವ ಹುನ್ನಾರ ನಡೆದಿತ್ತು. ಒಬ್ಬ ಧೈರ್ಯವಂತರಾದ ಕಾರ್ಯಪ್ಪನವರು ಇದಕ್ಕೆ ಜಗ್ಗಲಿಲ್ಲ. ಅಡ್ಡಂಡ ಕಾರ್ಯಪ್ಪನವರ ವಿರುದ್ಧ ಹೇಳಿಕೆಗಳು ಸಹಜ. ಇದಕ್ಕೆ ಯಾರೂ ಸೊಪ್ಪು ಹಾಕಬಾರದು. ಕಾರ್ಯಪ್ಪನವರ ಪರವಾಗಿ ಮೈಸೂರಿನ ರಂಗಾಸಕ್ತರು ಇದ್ದಾರೆ. ರಂಗ ಕಲೆಗೆ ರಂಗಾಯಣಕ್ಕೆ ಜಯವಾಗಲಿ.

– ಮೈಸೂರಿನ ರಂಗಾಸಕ್ತರು.

ಮೈಸೂರು–ಬೆಂಗಳೂರು ಹೆದ್ದಾರಿಗೆ ಸರ್ ಎಂ. ವಿಶ್ವೇಶ್ವರಯ್ಯ ಹೆಸರು ಸೂಕ್ತ

ಮಾನ್ಯರೆ,



ಇನ್ನೇನು ಉದ್ಘಾಟನಾ ಹಂತದಲ್ಲಿರುವ "ಮೈಸೂರು–ಬೆಂಗಳೂರು" ದಶಪಥ ರಸ್ತೆಗೆ ಕೆಲವರು ಮೈಸೂರು ಸಂಸ್ಥಾನದ ಒಡೆಯರ್ ಮತ್ತೆ ಕೆಲವರು 'ಕಾವೇರಿ' ಹೆಸರೇ ಸೂಕ್ತ ಎಂದು ಹೇಳುತ್ತಿದ್ದಾರೆ.

ಆದರೆ ಈ ಎಕ್ಸ್‌ಪ್ರೆಸ್ ರಸ್ತೆಗೆ ಸೂಕ್ತವಾದ ಹೆಸರೆಂದರೆ ಮೈಸೂರು ಸಂಸ್ಥಾನದಲ್ಲಿ ದಿವಾನರಾಗಿದ್ದ ಕಾವೇರಿ ನದಿಗೆ ಅಡ್ಡಲಾಗಿ ಕೆಆರ್‌ಎಸ್ ಅಣೆಕಟ್ಟು ನಿರ್ಮಾಣ ಮಾಡಿ ಮೈಸೂರು–ಬೆಂಗಳೂರಿನ ನಾಗರಿಕರಿಗೆ ಕುಡಿಯಲು ನೀರು ಕೊಟ್ಟ, ಮಂಡ್ಯ ಜಿಲ್ಲೆಯ ಲಕ್ಷಾಂತರ ಬಡ ರೈತರ ಬಾಳಿಗೆ ಬೆಳಕಾದ ನಿಜವಾದ ಭಗೀರಥ, ದಾರ್ಶನಿಕ, ವಿಶ್ವ ಕಂಡ ಅತ್ಯಂತ ಶ್ರೇಷ್ಠ ಎಂಜಿನಿಯರ್ 'ಸರ್. ಎಂ.ವಿಶ್ವೇಶ್ವರಯ್ಯ' ನವರ ಹೆಸರನ್ನು ನಾಮಕರಣ ಮಾಡಿ, ಎಲ್ಲಾ ಗೊಂದಲಗಳಿಗೂ ತೆರೆ ಎಳೆಯಲಿ. ಇವರ ಹೆಸರಿನಲ್ಲಿ ಕಾವೇರಿ ಮತ್ತು ಒಡೆಯರ್ ಇರುವುದರಿಂದ ಸರ್. ಎಂ.ವಿಶ್ವೇಶ್ವರಯ್ಯ ಹೆಸರ ನಾಮಕರಣ ಮಾಡಲು ಯಾವುದೇ ಕಾರಣಕ್ಕೂ ಯಾರ ವಿರೋಧವೂ ಇರುವುದಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಮೈಸೂರು, ಮಂಡ್ಯ, ರಾಮನಗರ ಮತ್ತು ಬೆಂಗಳೂರಿನ ಜಿಲ್ಲೆಯ ಜನರು ಇವರ ಋಣ ತೀರಿಸಿದಂತಾಗುತ್ತದೆ.

ವಿಶ್ವೇಶ್ವರಯ್ಯನವರ ಪ್ರಮುಖ ಸಾಧನೆಗಳಲ್ಲಿ ಒಂದಾದ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ರಾಜ್ಯದ ಎಲ್ಲಾ ಬ್ಯಾಂಕ್ ಶಾಖೆಗಳಲ್ಲಿ ವಿಶ್ವೇಶ್ವರಯ್ಯನವರ ಭಾವಚಿತ್ರ ಇತ್ತು. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಹೋದ ಮೇಲೆ (ಈಗ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ) ಅವರ ಭಾವಚಿತ್ರವನ್ನು ತೆಗೆದು ಹಾಕಿದ್ದಾರೆ. ಇದೊಂದು ವಿಶ್ವೇಶ್ವರಯ್ಯನವರಿಗೆ ಮಾಡಿದ ಅವಮಾನವೇ. ಈಗ ಇವರ ಹೆಸರನ್ನು ನಾಮಕರಣ ಮಾಡಿದರೆ ಇವರ ಹೆಸರು ಅಜರಾಮರವಾಗುವುದು.

ರಾಜ್ಯಕ್ಕೆ ಕೊಟ್ಟ ಪ್ರಮುಖ ಕೊಡುಗೆಗಳಾದ ಶಿಂಷಾ ಜಲ ವಿದ್ಯುತ್ ಉತ್ಪಾದನಾ ಯೋಜನೆ, ಮೈಸೂರು ಸಾಬೂನು ಕಾರ್ಖಾನೆ, ಸಾರ್ವಜನಿಕ ಗ್ರಂಥಾಲಯ... ಈ ಎಲ್ಲಾ ಸಾರ್ವಜನಿಕ ಕೆಲಸಗಳನ್ನು ಜ್ಞಾಪಿಸಿದಂತಾಗುತ್ತದೆ. ಈ ಬಗ್ಗೆ ಕೇಂದ್ರ ಸರ್ಕಾರ ಸೂಕ್ತ ನಿರ್ಧಾರ ತೆಗೆದುಕೊಳ್ಳುವಂತಾಗಲಿ.

–ಬೂಕನಕೆರೆ ವಿಜೇಂದ್ರ, ಮೈಸೂರು.



ಗ.ನಾ.ಭಟ್ಟ
ಸಂಸ್ಕೃತ ವಿದ್ವಾಂಸ
ಮೊ: 9019376365

ಸತ್ಯ ನಿತ್ಯ

ನಮಗೊಂದು ಸಕಾರಾತ್ಮಕ ಇಮೇಜ್ ಇರಲೇಬೇಕು...!

ನಮ್ಮಲ್ಲಿ ಬಹಳ ಮಂದಿ ಮನಃಸಾಕ್ಷಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ. ಸುಳ್ಳು ಹೇಳುತ್ತಿರುತ್ತಾರೆ. ಮಾಡಿದ ತಪ್ಪುಗಳನ್ನೇ ಮಾಡುತ್ತಿರುತ್ತಾರೆ. ಬೇರೆಯವರಿಗೆ ನೋವಾಗುತ್ತದೆ ಅಂತಲೋ ಅಥವಾ ಔದಾಸೀನ್ಯದಿಂದಲೋ ಹೇಳಲೇಬೇಕಾದ ವಿಚಾರವನ್ನೂ ಹೇಳುವುದಿಲ್ಲ. ನೀಡಲೇಬೇಕಾದ ಮಾಹಿತಿಯನ್ನೂ ನೀಡುವುದಿಲ್ಲ. ಅಂಥಹವರಿಂದ ಆಗುವ ಅಪಾಯ ಅನಾಹುತ ಹೇಳತೀರದು. ಇಂತಹ ವರ್ತನೆಗೆ 'ದಾಕ್ಷಿಣ್ಯಧರ್ಮ' ಎಂದು ಹೇಳುತ್ತಾರೆ. ಎಲ್ಲರಲ್ಲೂ ತಾನು ಒಳ್ಳೆಯವ ಎಂದು ಹೇಳಿಸಿಕೊಳ್ಳುವ ತವಕದಿಂದ ಹುಟ್ಟಿದ ಆತ್ಮವಂಚನೆಯ ಮನೋವೃತ್ತಿ ಇದು.

ಹುಟ್ಟಿದ ಪ್ರತಿಯೊಬ್ಬ ವ್ಯಕ್ತಿಗೂ ಒಂದಲ್ಲ ಒಂದು ಇಮೇಜ್ ಇದ್ದೇ ಇರುತ್ತದೆ. ಅದು ಆರೋಪಿತವೂ ಆಗಿರಬಹುದು; ನಿಜದ್ದೂ ಆಗಿರಬಹುದು; ಸುಳ್ಳೂ ಆಗಿರಬಹುದು; ನಕಾರಾತ್ಮಕದ್ದೂ ಆಗಿರಬಹುದು. ಜನಸಾಮಾನ್ಯರಿಂದ ಹಿಡಿದು ಗಣ್ಯವ್ಯಕ್ತಿಗಳವರೆಗೂ ಅದು ಇರುತ್ತದೆ. ಈ ಇಮೇಜ್ ಎಷ್ಟು ಅನುಕೂಲವೋ, ಎಷ್ಟು ಲಾಭದಾಯಕವೋ, ಅಷ್ಟೇ ಅನಾನುಕೂಲವೂ, ಅಷ್ಟೇ ಹಾನಿಕಾರಕವೂ, ಅಷ್ಟೇ ಅಪಾಯಕಾರಿಯೂ ಹೌದು. ಒಬ್ಬ ವ್ಯಕ್ತಿ ತಿಳಿದೋ, ತಿಳಿಯದೆಯೋ ಒಂದು ತಪ್ಪು ಮಾಡಿದ ಅನ್ನಿ; ಎಡವಟ್ಟು ಮಾಡಿಕೊಂಡ ಅನ್ನಿ. ಅದೇನಾದರೂ ಜನರ ಮಧ್ಯದಲ್ಲಿ ಪ್ರಚಾರಗಿಟ್ಟಿಸಿಕೊಂಡು, ಸ್ಥಿರವಾಗಿಬಿಟ್ಟರೆ ಅದರಿಂದ ಅವನಿಗೆ ಹೊರಗೆ ಬರುವುದಕ್ಕೇ ಆಗುವುದಿಲ್ಲ. ಸಮಾಜ ಬಿಡುವುದಿಲ್ಲ. ಕ್ರಮೇಣ ಆತ ತನ್ನ ತಪ್ಪನ್ನು ತಿದ್ದಿಕೊಂಡು, ಆ ಕೆಟ್ಟ ಇಮೇಜಿನಿಂದ ಹೊರಬಂದು, ಒಂದು ಘನ ವ್ಯಕ್ತಿತ್ವವನ್ನು ಸಂಪಾದಿಸಿ, ಒಂದು ಹೊಸ ಇಮೇಜನ್ನು ಸೃಷ್ಟಿಕೊಂಡರೂ ಆ ಹಳೇ ಇಮೇಜು ಅವನನ್ನು ಬಿಟ್ಟಿರುವುದಿಲ್ಲ. ಅವನನ್ನು ಅದೇ ದೃಷ್ಟಿಯಿಂದ ನೋಡುತ್ತಿರುತ್ತದೆ. ಅದರ ಕ್ರೌರ್ಯ, ಹಿಂಸೆ, ವೇದನೆ ಅಮಾನುಷವಾದುದು; ಭಯಂಕರವಾದುದು; ಘೋರವಾದುದು. ಅವನು ತನ್ನ ತಪ್ಪಿಗೆ ಪಶ್ಚಾತ್ತಾಪಪಟ್ಟಿರಬಹುದು; ಪೂರ್ಣ ತಿದ್ದಿಕೊಂಡಿರಬಹುದು; ಹಳೆಯದು ಮರೆತೇ ಹೋಗುವಂತಹ ಒಂದು ರೋಚಕ, ಆಕರ್ಷಕ, ಪ್ಲೀಸಿಂಗ್ ವ್ಯಕ್ತಿತ್ವವನ್ನೇ ಆತ ಸಂಪಾದಿಸಿಕೊಂಡಿರಬಹುದು. ಆದರೆ ಜಗತ್ತು ಕೇಳುವುದಿಲ್ಲ. ಒಂದು ಲೇಬಲ್ ಅಂಟಿಕೊಂಡರೆ ಮುಗಿದುಹೋಯಿತು. ಅವನು ನಾಶವಾದಂತೆ. ಅದಕ್ಕಾಗಿಯೇ ಕೆಲವರು ತಮ್ಮ ಇಮೇಜನ್ನು ಬಲು ಸೂಕ್ಷ್ಮವಾಗಿ ಕಟ್ಟಿಕೊಳ್ಳುತ್ತಿರುತ್ತಾರೆ. ಅದಕ್ಕೆ ಸ್ವಲ್ಪವೂ ಧಕ್ಕೆಯಾಗದಂತೆ ನೋಡಿಕೊಳ್ಳುತ್ತಾರೆ. ಅದು ಮುಕ್ಕಾಗದಂತೆ ಲೆಕ್ಕವಿಲ್ಲದಷ್ಟು ಜಾಗ್ರತೆ ವಹಿಸುತ್ತಾರೆ.

ಒಬ್ಬ ವ್ಯಕ್ತಿಗಿರುವಂತೆ ಒಂದು ದೇಶಕ್ಕೂ, ಒಂದು ಕಂಪೆನಿಗೂ, ಒಂದು ಆಡಳಿತ ಮಂಡಳಿಗೂ, ಶಾಲಾ–ಕಾಲೇಜುಗಳಿಗೂ, ಒಂದು ಸಂಸ್ಥೆಗೂ, ಒಂದು ಹೋಟೆಲ್ಲಿಗೂ, ರಾಜಕಾರಣಿಗೂ, ಒಂದು ರಾಜಕೀಯ ಪಕ್ಷಕ್ಕೂ ಒಂದು Good Image ಅಥವಾ Bad Image ಅಂತ ಇರುತ್ತದೆ. ಪ್ರಸ್ತುತ ಒಂದು ದೇಶಕ್ಕೆ ಅಂತ ನೋಡುವುದಾದರೆ ಫ್ರಾನ್ಸ್, ಇಂಗ್ಲೆಂಡ್ ಮತ್ತು ಭಾರತವನ್ನು ತೆಗೆದುಕೊಳ್ಳೋಣ. ರಾಜಕೀಯ ಅಧಿಕಾರ ಸ್ವಾತಂತ್ರ್ಯವು ಫ್ರೆಂಚರ ರಾಷ್ಟ್ರೀಯ ಸ್ವಭಾವದ ಬೆನ್ನೆಲುಬು. ಅದು ಅವರ ಇಮೇಜ್. ಫ್ರೆಂಚರು ಮಿಕ್ಕೆಲ್ಲ ದಬ್ಬಾಳಿಕೆಯನ್ನೂ ಸಹಿಸಿಯಾರು! ಅವರ ಮೇಲೆ ಎಷ್ಟೇ ಕರಭಾರ ಹೇರಿ. ಅದರ ಬಗ್ಗೆ ಚಕಾರ ಎತ್ತುವುದಿಲ್ಲ. ಅವರ ಇಡೀ ಜನತೆಯನ್ನು ಕಡ್ಡಾಯವಾಗಿ ಸೇನೆಗೆ ಭರ್ತಿ ಮಾಡಿ. ಅದಕ್ಕವರು ತಕರಾರು ಎತ್ತುವುದಿಲ್ಲ. ಆದರೆ ಅವರ ರಾಜಕೀಯ ಅಧಿಕಾರ ಸ್ವಾತಂತ್ರ್ಯಕ್ಕೆ ಕೈಹಾಕಿದರೆ ರಾಷ್ಟ್ರಕ್ಕೆ ರಾಷ್ಟ್ರವೇ ಕೆರಳಿ ನಿಲ್ಲುತ್ತದೆ. ಇದು ಅವರು ಬೆಳೆಸಿಕೊಂಡ ರಾಷ್ಟ್ರೀಯ ಇಮೇಜು.

ಅದೇ ಇಂಗ್ಲೆಂಡ್ ದೇಶದಲ್ಲಿ 'ಕೊಡಕೊಳ್ಳುವ ವ್ಯಾಪಾರೀ ಸೂತ್ರ'ವೇ ಅವರ ಪ್ರಮುಖ ಇಮೇಜ್. ಇಂಗ್ಲಿಷರಿಗೆ ಆರ್ಥಿಕ ಅಧಿಕಾರದಲ್ಲಿ ಸಮಾನ ಪಾಲು ಹಾಗೂ ನ್ಯಾಯ ಬಹುಮುಖ್ಯ. ಒಬ್ಬ ಇಂಗ್ಲಿಷಿನವ ರಾಜನಿಗೆ ವಿನಯದಿಂದ ತಲೆಬಾಗಿಯಾನು! ಆದರೆ ತನ್ನ ಕಿಸೆಯಿಂದ ಒಬ್ಬನಿಗೆ ಒಂದು ಕಾಸು ಕೊಡಬೇಕಾಗಿ ಬಂದರೂ ಅವನು ಲೆಕ್ಕ ಕೇಳದೇ ಬಿಡುವುದಿಲ್ಲ. ರಾಜನೇ ದುಡ್ಡು ಕೇಳಿದರೂ ಯಾಕೆ, ಏನು, ಅಂತ ಕೇಳದೇ ಇರುವುದಿಲ್ಲ. ಇದು ಅವರು ಬೆಳೆಸಿಕೊಂಡ ಕೊಡಕೊಳ್ಳು ಸೂತ್ರದ ಇಮೇಜು.

ಅದೇ ಭಾರತದ ಇಮೇಜು ಗೊಂದಲಮಯವಾದದ್ದು; ಕೆಲವೊಮ್ಮೆ ಧನಾತ್ಮಕವಾದುದು; ಮತ್ತೆ ಕೆಲವೊಮ್ಮೆ ಋಣಾತ್ಮಕವಾದುದು. ಅದನ್ನು ಅರ್ಥೈಸಿಕೊಳ್ಳುವುದೇ ಕಷ್ಟ! ಅದರಲ್ಲಿ ಕೆಲವು ಆರೋಪಿತವಾದುದು; ಇನ್ನು ಕೆಲವು ಸುಳ್ಳು ಸೃಷ್ಟಿಯಿಂದ, ತಪ್ಪು ಕಲ್ಪನೆಯಿಂದ ನಿರ್ಮಾಣಗೊಂಡಿದ್ದು. ನಮ್ಮ ಇಮೇಜ್ ಏನು ಅನ್ನುವುದರ ಬಗ್ಗೆ ಸರಿಯಾದ ಪರಾಮರ್ಶೆಯಿಲ್ಲದೆ ಸತ್ಯ ಮರೆಮಾಚಿಹೋಗಿರುವುದು ಇನ್ನೊಂದು ದುರಂತ. ಹೀಗೆ ನೂರಾರು ಕಾರಣಗಳಿಂದ ಭಾರತದ ನೈಜ ಚಿತ್ರ–ಪ್ರತಿಮೆ–ಇಮೇಜ್ ಮಸುಕಾಗಿ ಹೋಗಿದೆ.

ಜಾಕೋಬಿ, ಬ್ಲೂಮ್‌ಫೀಲ್ಡ್, ಕೀತ್ ಮೊದಲಾದ ಪಾಶ್ಚಾತ್ಯ ವಿದ್ವಾಂಸರು ನಮ್ಮ ಸಂಸ್ಕೃತಿಯ ಬಗ್ಗೆ, ನಮ್ಮ ಧರ್ಮದ ಬಗ್ಗೆ ಇಲ್ಲಸಲ್ಲದ ಆರೋಪ ಮಾಡಿದರು–"ನಮ್ಮ ತತ್ತ್ವವೆಲ್ಲ ಪಾರಲೌಕಿಕವೆಂದೂ, ಅಲ್ಲಿ ಲೌಕಿಕತೆಯೇ ಇಲ್ಲವೆಂದೂ, ಮಾನವನ ನಿಷ್ಕ್ರಿಯತೆಯನ್ನು ಸಾರುವ ಕರ್ಮಸಿದ್ಧಾಂತ ನಮ್ಮ ಪ್ರಧಾನ ದೋಷವೆಂದೂ, ಅದರ ಇನ್ನೊಂದು ದೋಷ ವರ್ಣಾಶ್ರಮ ಪದ್ಧತಿಯೆಂದೂ, ನಮ್ಮ ವೇದ ಲೌಕಿಕ ವಿಚಾರವನ್ನು ಬಿಟ್ಟು ಕೇವಲ ಮೋಕ್ಷವನ್ನೇ ಬೋಧಿಸುತ್ತದೆಯೆಂದೂ, ನಮ್ಮ ಪುರಾಣಗಳೆಲ್ಲವೂ ಭಾವನಾಮಯ ಹಾಡುಗಳೆಂದೂ, ಅದರಲ್ಲಿ ಯಾವ ತತ್ತ್ವಶಾಸ್ತ್ರದ ಲಕ್ಷಣವೂ ಇಲ್ಲವೆಂದೂ" ಹೀಗಳೆದರು. ಅವರ ಈ ಅಜ್ಞಾನಮೂಲದ ಹೇಳಿಕೆಯನ್ನೇ ಸತ್ಯವೆಂದು ನಂಬಿದ ನಮ್ಮ ಕೆಲವು ಸಂಸ್ಕೃತ ಪಂಡಿತರೂ, ವಿಶ್ವವಿದ್ಯಾಲಯದ ಪ್ರಾಧ್ಯಾಪಕರೂ ಅದನ್ನೇ ಅಮೃತವೆಂಬಂತೆ ಇತರರಿಗೆ ಉಣಬಡಿಸಿದರು. ಇದೊಂದು ಭಾರತಕ್ಕೆ ತಗುಲಿದ ಆರೋಪಿತ ಇಮೇಜು.

ಭಾರತದ ಕುರಿತಾದ ಇನ್ನೊಂದು ಇಮೇಜು. ಅದು ತುಂಬಾ ಪ್ರಸಿದ್ಧವಾದುದು. ಅದು ಸ್ವಲ್ಪ ಸತ್ಯವೂ ಹೌದು; ಸುಳ್ಳೂ ಹೌದು. ಅದನ್ನು ಹೇಳಿದವನು ಪ್ರತಿಷ್ಠಿತ ಇಂಗ್ಲಿಷ್ ಕಾದಂಬರಿಕಾರ ಸಾಮರ್‌ಸೆಟ್ ಮಾಮ್. ಆತ ಇಡೀ ಭಾರತವನ್ನು ಸಂದರ್ಶಿಸಿ ಇಂಗ್ಲೆಂಡಿಗೆ ಮರಳುತ್ತಿದ್ದನಂತೆ. ಆಗ ಕೆಲವು ಪತ್ರಕರ್ತರು ಅವನನ್ನು ಕುರಿತು "ಭಾರತದಲ್ಲಿ ನಿಮ್ಮ ಮನಸ್ಸನ್ನು ಹಿಡಿದು ಅಲುಗಿಸಿದ ಚಿತ್ರ ಯಾವುದು" ಅಂತ ಕೇಳಿದರಂತೆ. ಅದಕ್ಕೆ ಅವನು–"ತಿರುವನಂತಪುರದ ಸುಂದರವಾದ ಸಮುದ್ರತೀರವನ್ನು ಕಂಡು ಅವನ ಮನಸ್ಸು ಉಲ್ಲಾಸಿತಗೊಂಡಿದ್ದನ್ನೋ, ತಾಜ್‌ಮಹಲ್ ಕಟ್ಟಡದ ಶಿಲ್ಪವು ಅವನನ್ನು ಚಮತ್ಕಾರಗೊಳಿಸಿದ್ದನ್ನೋ, ಹಿಮಾಲಯದ ಗಿರಿಶಿಖರಗಳು ಅವನ ಮನಸ್ಸನ್ನು ಚಕಿತಗೊಳಿಸಿದ್ದನ್ನೋ, ಗಾಂಧಿಯವರನ್ನು ಕಂಡು ಆತ ಪ್ರಭಾವಿತಗೊಂಡಿದ್ದನ್ನೋ" ಹೇಳಬಹುದೆಂದು ಪತ್ರಕರ್ತರು ನಿರೀಕ್ಷಿಸಿದ್ದರಂತೆ.

ಆದರೆ ಸಾಮರ್‌ಸೆಟ್ ಮಾಮ್ ಹೇಳಿದ್ದೇ ಬೇರೆ. "ನಾನು ತಿರುವನಂತಪುರದ ರಮಣೀಯವಾದ ಸಮುದ್ರ ತೀರವನ್ನು ಕಂಡು, ತಾಜ್‌ಮಹಲಿನ ಶಿಲ್ಪ ವೈಭವವನ್ನು ನೋಡಿ, ಹಿಮಾಲಯದ ನಯನ ಮನೋಹರ, ರುದ್ರಭೀಷಣ ಗಿರಿಶ್ರೇಣಿಗಳನ್ನು ವೀಕ್ಷಿಸಿ ಅಥವಾ ಗಾಂಧಿಯವರ ದರ್ಶನ ಪಡೆದು ಪ್ರಭಾವಗೊಳ್ಳಲಿಲ್ಲ. ನನ್ನ ಮನಸ್ಸನ್ನು ಅಲುಗಿಸಿದ ಚಿತ್ರ ಬೇರೆಯೇ ಇದೆ. ಅದು ಯಾವುದು ಅಂತ ಕೇಳಿದರೆ–"ಭಾರತ, ಅದರ ದಕ್ಷಿಣ, ಉತ್ತರ, ಪೂರ್ವ ಮತ್ತು ಪಶ್ಚಿಮದಲ್ಲಿ ಒಂದೇ ತೆರನಾಗಿದೆ. ಹಿಂದಿನ ಐದು ಸಾವಿರ ವರ್ಷಗಳಿಂದಲೂ ಆ ಚಿತ್ರ (ಇಮೇಜ್) ಬದಲಾಗದೇ ಹಾಗೆಯೇ ಉಳಿದುಕೊಂಡಿದೆ. ಅದು– ತನ್ನ ಹೊಟ್ಟೆಯನ್ನು ಬೆನ್ನಿಗೆ ಕಟ್ಟಿಕೊಂಡು, ಬೆಳಗಿನಿಂದ ಬೈಗಿನವರೆಗೆ, ಬಾರುಕೋಲ ನೆತ್ತಿ, ತನ್ನ ಎತ್ತುಗಳೊಂದಿಗೆ ನೆಲವನ್ನು ಉಳುತ್ತಿರುವ ಭಾರತದ ಬಡರೈತನ ಚಿತ್ರ ನನ್ನ ಮನಸ್ಸನ್ನು ತಲ್ಲಣಗೊಳಿಸಿತು" ಎಂದನಂತೆ. ಅವನು ಹೇಳಿದ್ದರಲ್ಲಿ ಸತ್ಯವಿಲ್ಲದೇ ಇಲ್ಲ. ಆದರೆ ಅದು ಪೂರ್ಣ ಸತ್ಯವಲ್ಲ. ಭಾರತ ಇಂದು ಕೃಷಿಕ್ಷೇತ್ರ ಅಷ್ಟೇ ಅಲ್ಲ. ವಿಜ್ಞಾನ–ತಂತ್ರಜ್ಞಾನದಲ್ಲೂ ಬಹಳ ಸುಧಾರಿಸಿದೆ. ಅದೇನೇ ಇರಲಿ. ಇದೂ ಒಂದು ಇಮೇಜ್ ಹೌದು. ಆದರೆ ಇದು ಅರ್ಧ ಸತ್ಯ, ಅರ್ಧ ಸುಳ್ಳಿನ ಇಮೇಜು. ಹಾಗಾದರೆ ಭಾರತದ ನಿಜವಾದ ಇಮೇಜು ಏನು.

ಭಾರತದ ನಿಜವಾದ ಇಮೇಜ್–ಅಧ್ಯಾತ್ಮ, ಧರ್ಮ, ಮತ, ಪಂಥ, ದರ್ಶನ, ಸ್ಮೃತಿಗಳು. ವೈವಿಧ್ಯತೆಯಲ್ಲಿ ಏಕತೆ. ಭಾರತದ ಆತ್ಮ ಇರುವುದೇ ವೇದೋಪನಿಷತ್ತುಗಳಲ್ಲಿ, ರಾಮಾಯಣ–ಮಹಾಭಾರತದಂತಹ ಮಹಾಕಾವ್ಯಗಳಲ್ಲಿ, ಹದಿನೆಂಟು ಪುರಾಣಗಳಲ್ಲಿ. ಅವನು ವೈದಿಕನಿರಲಿ, ಜೈನನಿರಲಿ, ಬೌದ್ಧನಿರಲಿ, ಅದ್ವೈತಿಯಿರಲಿ, ದ್ವೈತಿಯಿರಲಿ, ಶೈವನಿರಲಿ. ಅವರು ಅಕ್ಕಪಕ್ಕದಲ್ಲೇ ವಾಸಿಸುತ್ತಿದ್ದರೂ ಒಬ್ಬರ ಮೇಲೊಬ್ಬರು ದ್ವೇಷ ಸಾಧಿಸುವುದಿಲ್ಲ. ತನ್ನ ಮತವೇ ಶ್ರೇಷ್ಠವೆಂದು ಜಗಳ ಕಾಯುವುದಿಲ್ಲ. ಒಬ್ಬರಿಗೊಬ್ಬರು ಪ್ರೀತಿ, ಸ್ನೇಹ, ಸೌಹಾರ್ದತೆಯಿಂದ ಬಾಳುತ್ತಾರೆ. ಇದೇ ಭಾರತದ ವೈಶಿಷ್ಟ್ಯತೆ.

ಇದೇನೋ ದೇಶ–ವಿದೇಶಗಳ ಕುರಿತಾದ ಇಮೇಜಿನ ಸಂಗತಿಯಾಯಿತು. ಆದರೆ ಮನುಷ್ಯ ತನ್ನ ಇಮೇಜನ್ನು ಸೃಷ್ಟಿಸಿಕೊಳ್ಳುವುದು ಹೇಗೆ. ಅದು ತಾನಾಗಿಯೇ ಬರುತ್ತದೆಯೇ ಅಥವಾ ಅವನ ಪ್ರಯತ್ನ ಬೇಕೇ. ಅದಕ್ಕೆ ಉತ್ತರವಾಗಿ–ನಮ್ಮ ಮನೆತನದ ಚರಿತ್ರೆಯಿಂದ, ನಮ್ಮ ಜಾಯಮಾನದಿಂದ, ನಮ್ಮ ಅದೃಷ್ಟದಿಂದ, ನಮ್ಮ ವಿದ್ಯೆ, ಬುದ್ಧಿ, ಪ್ರತಿಭೆ, ಸಂಸ್ಕಾರ, ನಡವಳಿಕೆಗಳಿಂದ ಸಮಾಜದಲ್ಲಿ ನಮಗೊಂದು ಇಮೇಜ್ ಅಥವಾ ಸ್ಥಾನಮಾನ ಕಲ್ಪಿತವಾಗಿರುತ್ತದೆ. ಅದಕ್ಕೆ ತಕ್ಕಂತೆ ನಾವು ನಡೆದುಕೊಳ್ಳಬೇಕು. ಅದಕ್ಕಿಂತ ಮೇಲ್ಪಟ್ಟಾಗಲೀ ಅಥವಾ ಕೆಳಮಟ್ಟದಲ್ಲಾಗಲೀ ನಡೆದುಕೊಳ್ಳಬಾರದು. ಹಾಗೇನಾದರೂ ನಡೆದುಕೊಂಡರೆ ಸಮಾಜ ಅದನ್ನು ಥಟ್ಟನೆ ಗುರುತಿಸುತ್ತದೆ.

ಉದಾಹರಣೆಗೆ– ಮಹಾಭಾರತ ಯುದ್ಧದಲ್ಲಿ ಶಲ್ಯ ಒಬ್ಬ ಸೇನಾಪತಿಯಾಗಿ ಬರಬೇಕಿತ್ತು. ಸ್ವತಃ ಆತನೇ ಹಾಗೆ ನಿರೀಕ್ಷಿಸಿಯೂ ಇದ್ದ. ಆದರೆ ಅವನ ದುರದೃಷ್ಟಕ್ಕೆ ಆತ ಕರ್ಣನಿಗೆ ಸಾರಥಿಯಾಗಿ ಬರಬೇಕಾಯಿತು. (ಅರ್ಧ ದಿನ ಆತ ಸೇನಾಪತಿಯೂ ಆಗಿದ್ದ. ಅದು ಬೇರೆ ಪ್ರಶ್ನೆ.) ಇದ್ದಕ್ಕಿದ್ದಂತೆ ಆತನ ಇಮೇಜು ಬದಲಾಗಿ ಹೋಯಿತು. ಕೃಷ್ಣ ಕೇಳಿಯೂ ಬಿಟ್ಟ, **"ಏನಯ್ಯ ಶಲ್ಯಭೂಪ । ನಿನ್ನಂಗವಿ । ದೇನಯ್ಯ ಮದನರೂಪ । ಭೂನಾಥ ನಿನಗೆಯೀ ಸಾರಥಿತನವಿದು । ಹೀನವೃತ್ತಿಗಳೇಕಯ್ಯ । ಪೇಳಯ್ಯ ॥ ಧರ್ಮವಲ್ಲರಸರಿಗೆ । ನೋಡಿಂಥ ದು । ಷ್ಕರ್ಮವ್ಯಾತಕೋ ನಿನಗೆ ॥ ಚಮ್ಮಟಿಕೆಯ ಪಿಡಿದಶ್ವವ ನಡೆಸುವ । ಮರ್ಮವಾದರು ಬಲ್ಲೆಯ । ಪೇಳಯ್ಯ ॥"** ಎಂದು ಕೇಳಿಬಿಡುತ್ತಾನೆ.

ಕೃಷ್ಣನ ಆ ಪ್ರಶ್ನೆಗೆ ಶಲ್ಯನಿಗೆ ಉತ್ತರ ಕೊಡುವುದು ಬಹಳ ಕಷ್ಟವಾಗುತ್ತದೆ. ಕಾರಣ ಇಷ್ಟೇ. ಸಮಾಜದಲ್ಲಿ ಆತನಿಗೆ ಒಂದು ಪ್ರತಿಷ್ಠೆ ಇತ್ತು. ಒಂದು ಸ್ಥಾನ–ಮಾನ ಅಂತ ಇತ್ತು. ಮುಖ್ಯವಾಗಿ ಆತ ಮಾಡಿದ ತಪ್ಪು –ತನ್ನ ಸ್ವಂತ ಸೋದರಿ ಮಾದ್ರಿಯ ಮಕ್ಕಳಾದ ನಕುಲ ಸಹದೇವರಿಗೆ ಅಂದರೆ ಪಾಂಡವರಿಗೆ ಸಹಾಯ ಮಾಡುವುದನ್ನು ಬಿಟ್ಟು ದುಷ್ಟ ಪಾಳಯದ ಕೌರವನ ಪಕ್ಷ ಸೇರಿಕೊಂಡ. ಪಕ್ಷಾಂತರ ರಾಜಕಾರಣಕ್ಕೆ ಅಂದು ಅವನು ಸಾಕ್ಷಿಯಾಗಿ ಹೋದ. ಇದರಿಂದಾಗಿ ಅವನ ಇಮೇಜೇ ಸರ್ವನಾಶವಾಗಿ ಹೋಯಿತು. ಕೃಷ್ಣ ಅದನ್ನು ಬಯಲುಮಾಡಿದ.

ಹಾಗಾಗಿ ನಾವು ನಮ್ಮ 'ಇಮೇಜ್ ಬಿಲ್ಡಿಂಗ್' ಬಗ್ಗೆ ತುಂಬಾ ಜಾಗರೂಕರಾಗಿರಬೇಕು. ಒಮ್ಮೆ ನಮ್ಮ ಇಮೇಜ್ ಮುಕ್ಕಾಗಿ ಹೋಯಿತೆಂದರೆ ಅದನ್ನು ಮರಳಿ ಪಡೆಯುವುದು ಸುಲಭವಲ್ಲ. ಆದರೆ ಒಂದು– ನಾವು ನಮ್ಮ ನಡವಳಿಕೆಯಲ್ಲಿ ಪ್ರಾಮಾಣಿಕವಾಗಿದ್ದರೆ, ಸತ್ಯವಂತರಾಗಿದ್ದರೆ, ನುಡಿದಂತೆ ನಡೆದುಕೊಂಡರೆ, ನಾವು ಮಾಡುವ ಯಾವುದೇ ಕೆಲಸಕ್ಕೆ ಒಂದು ಬದ್ಧತೆ ಅಂತ ಇದ್ದರೆ, ಆತ್ಮೀಯರಲ್ಲಿ ವಿಷಯ ಮುಚ್ಚಿಡದಿದ್ದರೆ, ಮಾಡುವ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿದರೆ, ಲಂಚ ತಿನ್ನದಿದ್ದರೆ, ಮಾತು, ಯೋಚನೆ ಮತ್ತು ಮಾಡುವ ಕೆಲಸ ಒಂದೇ ಆಗಿದ್ದರೆ, ನಮ್ಮ ಮಾತಿನಲ್ಲಿ ಸ್ಪಷ್ಟತೆ, ಖಚಿತತೆ ಇದ್ದರೆ ಖಂಡಿತಕ್ಕೂ ನಮಗೊಂದು ಸಕಾರಾತ್ಮಕ, ಸಂತೋಷಕರ ಇಮೇಜ್ ಸೃಷ್ಟಿಯಾಗುತ್ತದೆ.

ಕೆಲವರಿರುತ್ತಾರೆ– ಹೇಳುವುದೊಂದು ಮಾಡುವುದೊಂದು, ಹೇಳುವ ವಿಷಯದಲ್ಲಿ ಅರ್ಧ ಮಾತ್ರ ಸತ್ಯ. ಇನ್ನರ್ಧವನ್ನು ಮುಚ್ಚಿಡುವುದು ಮಾಡುತ್ತಿರುತ್ತಾರೆ. ಸಿಕ್ಕಿದಾಗ ಎದುರಿಗೆ ಹೊಗಳುವುದು, ಅವರು ಹೋದ ಮೇಲೆ ಅವರನ್ನು ತೆಗಳುವುದು, ಬೇರೆಯವರನ್ನು ಸದಾ ನಕಾರಾತ್ಮಕವಾಗಿಯೇ ಕಾಣುವುದು, ಅಸೂಯೆಪಡುವುದು, ಯಾವುದನ್ನೂ ಅಥವಾ ಯಾರ ಬಗ್ಗೆಯೂ ಸ್ವಾನುಭವದಿಂದ ತಿಳಿದುಕೊಳ್ಳದೆ, ಅವರ ಬಗ್ಗೆ ಸ್ವತಂತ್ರವಾಗಿ ಯೋಚಿಸದೇ, ಬೇರೆಯವರು ಹೇಳಿದ್ದರ ಮೇಲೆ ತೀರ್ಮಾನ ತೆಗೆದುಕೊಳ್ಳುವುದು, ಮಾಡಿದ ಉಪಕಾರವನ್ನು ಸ್ಮರಿಸಿಕೊಳ್ಳದಿರುವುದು– ಇಂಥವನ್ನೆಲ್ಲಾ ಮಾಡುತ್ತಿರುತ್ತಾರೆ. ಅಂಥಹವರ ಬಗ್ಗೆ ಖಂಡಿತಕ್ಕೂ ಒಂದು ನಕಾರಾತ್ಮಕ ಇಮೇಜ್ ಸೃಷ್ಟಿಯಾಗಿಬಿಡುತ್ತದೆ.


ನಮ್ಮಲ್ಲಿ ಕೆಲವರು ಮನುಷ್ಯ ಸಂಬಂಧವನ್ನು ನೇರ್ಪುಗೊಳಿಸಿಕೊಳ್ಳುವಲ್ಲಿ, ಅದನ್ನು ಸುಮಧುರವಾಗಿಸಿಕೊಳ್ಳುವುದರಲ್ಲಿ ಯಾವ ಪ್ರಯತ್ನವನ್ನೂ ಮಾಡುವುದಿಲ್ಲ. ಒಂದು ಫೋನ್ ಕಾಲ್ ಬಂದರೆ ಅಟೆಂಡ್ ಮಾಡುವುದಿಲ್ಲ. ಮೆಸೇಜಿಗೆ ಉತ್ತರಿಸುವುದಿಲ್ಲ. ಎಲ್ಲೋ ಒಮ್ಮೆ ಅವರು ಸಿಕ್ಕಾಗ "ನಾನು ಫೋನ್ ಮಾಡಿದ್ದೆ. ನೀವು ಯಾಕೆ ರಿಸೀವ್ ಮಾಡಲಿಲ್ಲ?" ಅಂತ ಕೇಳಿದರೆ– "ಓ, ಅದು ನಿಮ್ಮ ಕಾಲ್ ಆಗಿತ್ತಾ? ನಾನು ನಿಮ್ಮ ಹೆಸರನ್ನು ಸೇವ್ ಮಾಡಿಕೊಂಡಿರಲಿಲ್ಲ. ನಾನು ಗೊತ್ತಿಲ್ಲದವರ ನಂಬರನ್ನು ಎತ್ತುವುದಿಲ್ಲ" ಅಂತ ಹೇಳುತ್ತಾರೆ. ಹಾಗೆ ಹೇಳುತ್ತಲೇ ಆಗಲೂ ಕೂಡ ಅವರು ನಮ್ಮ ನಂಬರನ್ನು ದಾಖಲಿಸಿಕೊಳ್ಳುವುದಿಲ್ಲ. ಇಂತಹ ಉಡಾಫೆಯವರೂ, ವಿಚಿತ್ರದವರೂ ನಮ್ಮ ಮುಂದೆ ಸದಾ ವಿರಾಜಿಸುತ್ತಿರುತ್ತಾರೆ. ಅಂತಹವರ ಬಗ್ಗೆ ಎಂತಹ ಇಮೇಜ್ ಬರಲು ಸಾಧ್ಯ!

ಇನ್ನು ಕೆಲವರು ಇರುತ್ತಾರೆ. ನಾವು ಮಾಡಿದ ಮೆಸೇಜನ್ನು ನೋಡಿಯೂ ನೋಡದವರಂತಿರುತ್ತಾರೆ ಅಥವಾ ಯಾವಾಗಲೋ ನೋಡುತ್ತಾರೆ. ಅದಕ್ಕೆ ಉತ್ತರಿಸುವುದೂ ಇಲ್ಲ. ಅಂಥಹವರನ್ನು ಉದಾಸೀನ ಮಾಡಿ ನಾವು ಮಾಡಬಹುದಾದುದು ಇಷ್ಟೇ! ಬೇರೆಯವರ ಫೋನ್ ಬಂದಾಗ ನಮಗೆ ಅಟೆಂಡ್ ಮಾಡಲಾಗದಿದ್ದರೆ, ಸಮಯ ಸಿಕ್ಕಾಗ ನಾವೇ ಕಾಲ್ ಮಾಡಿ ವಿಚಾರಿಸುವುದು, ಮೆಸೇಜಿಗೆ ಉತ್ತರಿಸುವುದು, ಅವರೇನಾದರೂ ಹಬ್ಬಹುಣ್ಣಿಮೆಗೆ, ಹುಟ್ಟುಹಬ್ಬಕ್ಕೆ ಶುಭಾಶಯ ಕೋರಿದ್ದರೆ, ನಮ್ಮ ಸಾಧನೆಗೆ ಅಭಿನಂದನೆ ಸಲ್ಲಿಸಿದ್ದರೆ, ಕೂಡಲೇ ನಾವು ಪ್ರತಿಕ್ರಿಯಿಸಬೇಕು. ಅಂತಹ ಸ್ವಭಾವ ಇಲ್ಲದಿದ್ದರೆ ನಾವದನ್ನು ರೂಢಿಸಿಕೊಳ್ಳಬೇಕು. ಧನ್ಯವಾದಗಳು ಅಂತಲೋ, ಕೃತಜ್ಞತೆಗಳು ಅಂತಲೋ, ಒಂದು ಚೆಂದದ ವಾಕ್ಯ ಬರೆದು ಕಳುಹಿಸಿದರೆ ಖಂಡಿತಕ್ಕೂ ನಮಗೊಂದು ಅದ್ಭುತ ಇಮೇಜ್ ಸೃಷ್ಟಿಯಾಗುತ್ತದೆ. ಆಗ ಜನ ನಮ್ಮನ್ನು ಪ್ರೀತಿಸತೊಡಗುತ್ತಾರೆ.

ನಮ್ಮಲ್ಲಿ ಬಹಳ ಮಂದಿ ಮನಃಸಾಕ್ಷಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ. ಸುಳ್ಳು ಹೇಳುತ್ತಿರುತ್ತಾರೆ. ಮಾಡಿದ ತಪ್ಪುಗಳನ್ನೇ ಮಾಡುತ್ತಿರುತ್ತಾರೆ. ಬೇರೆಯವರಿಗೆ ನೋವಾಗುತ್ತದೆ ಅಂತಲೋ ಅಥವಾ ಔದಾಸೀನ್ಯದಿಂದಲೋ ಹೇಳಲೇ ಬೇಕಾದ ವಿಚಾರವನ್ನೂ ಹೇಳುವುದಿಲ್ಲ. ನೀಡಲೇಬೇಕಾದ ಮಾಹಿತಿಯನ್ನೂ ನೀಡುವುದಿಲ್ಲ. ಅಂಥಹವರಿಂದ ಆಗುವ ಅಪಾಯ ಅನಾಹುತ ಹೇಳತೀರದು. ಇಂತಹ ವರ್ತನೆಗೆ 'ದಾಕ್ಷಿಣ್ಯಧರ್ಮ' ಎಂದು ಹೇಳುತ್ತಾರೆ. ಎಲ್ಲರಲ್ಲೂ ತಾನು ಒಳ್ಳೆಯವ ಎಂದು ಹೇಳಿಸಿಕೊಳ್ಳುವ ತವಕದಿಂದ ಹುಟ್ಟಿದ ಆತ್ಮವಂಚನೆಯ ಮನೋವೃತ್ತಿ ಇದು. ಮಹಾಭಾರತದಲ್ಲಿ ಇದನ್ನು ನಾವು ಧರ್ಮರಾಜನಲ್ಲಿ ಕಾಣುತ್ತೇವೆ. ಆತ ಆತ್ಮವಂಚನೆ ಮಾಡಿಕೊಳ್ಳದಿದ್ದರೂ ಅವನು ಅನುಸರಿಸಿದ 'ದಾಕ್ಷಿಣ್ಯಧರ್ಮ' ಅನೇಕ ಅನಾಹುತಗಳಿಗೆ ಕಾರಣವಾಯಿತು. ಇದಕ್ಕೆ ಪ್ರತಿಯಾದದ್ದು 'ನಿಷ್ಠುರಧರ್ಮ'. ಇದನ್ನು ನಾವು ಶ್ರೀಕೃಷ್ಣ, ವಿದುರ, ಮತ್ತು ಭೀಮನಲ್ಲಿ ಕಾಣಬಹುದು. ಅದು ಲೋಕಹಿತನವನ್ನು ಸಾಧಿಸಿತು.

ಇಂದು ನಮಗೆ ಬೇಕಾದುದು ಇಂತಹ 'ನಿಷ್ಠುರಧರ್ಮ'. ಇದನ್ನು ನಾವು ರಾಜಕಾರಣದಲ್ಲಿ ಕಾಣುವುದಾದರೆ ನಮ್ಮ ಹೆಮ್ಮೆಯ ಪ್ರಧಾನಮಂತ್ರಿ ನರೇಂದ್ರ ಮೋದಿಯವರಲ್ಲಿ ಕಾಣಬಹುದು. ಇತ್ತೀಚೆಗೆ ನಿಧನರಾದ ಅವರ ತಾಯಿಯ ಶವಸಂಸ್ಕಾರದ ಸಂದರ್ಭದಲ್ಲಿ ಅದನ್ನು ಸಾರ್ವಜನಿಕವಾಗಿಸದೇ ಅದನ್ನು ಒಂದು ಖಾಸಗಿ ಸಂಗತಿಯೆಂದು ಪರಿಗಣಿಸಿ ಅದರಂತೆ ಅವರು ನಡೆದುಕೊಂಡಿದ್ದು ಅವರಿಗಿದ್ದ ಹಾಲಿ ಇಮೇಜನ್ನು ಮತ್ತಷ್ಟು ಗಟ್ಟಿಗೊಳಿಸಿತು. ಅವರು ಧರಿಸುವ ತರಹೇವಾರಿ ಐಷಾರಾಮೀ ಡ್ರೆಸ್ಸುಗಳ ಮಧ್ಯೆ, ಒಬ್ಬ ವಿರಕ್ತ ಇದ್ದಾನೆ, ಒಬ್ಬ ಸನ್ಯಾಸಿ ಇದ್ದಾನೆ, ಒಬ್ಬ ಪ್ರಾಮಾಣಿಕ ಮನುಷ್ಯನಿದ್ದಾನೆ, ಒಬ್ಬ ರಾಷ್ಟ್ರಭಕ್ತ ಇದ್ದಾನೆ, ಒಬ್ಬ ಧೈರ್ಯಶಾಲಿ ಇದ್ದಾನೆ, ಒಬ್ಬ ರಾಜತಾಂತ್ರಿಕ ಮುತ್ಸದ್ದಿ ಇದ್ದಾನೆ, ಆಡಳಿತ ಕುಶಲೀ ಇದ್ದಾನೆ ಅನ್ನುವುದೇ ಒಂದು ದೊಡ್ಡ ಇಮೇಜ್ ಅವರದ್ದು. ಅದು ಕೂತಾಗ, ನಿಂತಾಗ ಬಂದದ್ದಲ್ಲ. ಪರಿಶ್ರಮದಿಂದ ಬಂದದ್ದು. ನಮಗೆ ಬೇಕಾದುದು ಅಂತಹ ಇಮೇಜ್. ಅದು ಸಾಧ್ಯವೇ? ಪ್ರಯತ್ನಿಸೋಣ.


ಜ.29ರಂದು ಮುಖ್ಯಮಂತ್ರಿಗಳಿಂದ ಡಾ.ವಿಷ್ಣುವರ್ಧನ್ ಸ್ಮಾರಕ ಉದ್ಘಾಟನೆ



ಮೈಸೂರು, ಜ.12(ಆರ್‌ಕೆ)–ಮೈಸೂರಿನ ಹೆಚ್.ಡಿ.ಕೋಟೆ ರಸ್ತೆಯ ಉದ್ಬೂರು ಗೇಟ್ ಎದುರು ಹಾಲಾಳು ಬಳಿ ನಿರ್ಮಿಸಿರುವ ದಿವಂಗತ ಡಾ. ವಿಷ್ಣುವರ್ಧನ್ ಸ್ಮಾರಕವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜನವರಿ 29ರಂದು ಉದ್ಘಾಟಿಸುವರು.

ಕನ್ನಡದ ಮೇರುನಟ ಡಾ. ವಿಷ್ಣುವರ್ಧನ್ ನಿಧನರಾಗಿ 13 ವರ್ಷದ ಬಳಿಕ ಇದೀಗ ಕಡೆಗೂ ಸ್ಮಾರಕದ ಉದ್ಘಾಟನೆಗೆ ಮುಹೂರ್ತ ನಿಗದಿಯಾಗಿದೆ ಎಂದು ಅವರ ಅಳಿಯ ಹಾಗೂ ಚಲನಚಿತ್ರ ನಟ ಅನಿರುದ್ಧ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.


ಜನವರಿ 29ರಂದು ಬೆಳಗ್ಗೆ 11 ಗಂಟೆಗೆ ಹಾಲಾಳು ಬಳಿ ನಿರ್ಮಾಣವಾಗಿರುವ ಡಾ. ವಿಷ್ಣು ಸ್ಮಾರಕವನ್ನು ಉದ್ಘಾಟಿಸಲು ಮುಖ್ಯಮಂತ್ರಿಗಳು ಸಮ್ಮತಿಸಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕ ಜಿ.ಟಿ.ದೇವೇಗೌಡ, ಸಂಸದ ಪ್ರತಾಪ್ ಸಿಂಹ, ಮೇಯರ್ ಶಿವಕುಮಾರ್, ಡಾ. ವಿಷ್ಣುವರ್ಧನ್ ಪತ್ನಿ ಶ್ರೀಮತಿ ಡಾ. ಭಾರತಿ ವಿಷ್ಣುವರ್ಧನ್ ಸೇರಿದಂತೆ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸುವರು ಎಂದು ತಿಳಿಸಿದರು.



ಹಾಲಾಳು ಬಳಿ 5 ಎಕರೆ ಪ್ರದೇಶದಲ್ಲಿ 11 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಡಾ.ವಿಷ್ಣುವರ್ಧನ್ ಸ್ಮಾರಕದಲ್ಲಿ ಅವರ ಸಮಾಧಿ, 20 ಅಡಿ ಎತ್ತರದ ಪ್ರತಿಮೆ, ಅವರ ಸಿನೆಮಾ ಪಯಣದ ಗ್ಯಾಲರಿ, ಅವರ ಜೀವನ ಚರಿತ್ರೆಯ ಕೃತಿಗಳು, ಧರಿಸುತ್ತಿದ್ದ ಟೋಪಿ, ಕೈ–ಕಡಗ, ಸಿನೆಮಾ ತರಬೇತಿ ಕೇಂದ್ರ, ಸಭಾಂಗಣ, ಉದ್ಯಾನ ಸೇರಿದಂತೆ ಹಲವು ವೈವಿಧ್ಯತೆಯ ತಾಣವನ್ನು ನಿರ್ಮಿಸಲಾಗಿದೆ. ಸ್ಮಾರಕ ನಿರ್ಮಾಣದಿಂದಾಗಿ ಡಾ. ವಿಷ್ಣುವರ್ಧನ್ ಅವರ ಅಸಂಖ್ಯಾತ ಅಭಿಮಾನಿಗಳಲ್ಲಿ ಸಂತಸ ಮೂಡಿದ್ದು, ಅದೊಂದು ಪ್ರವಾಸಿ ತಾಣವಾಗಿಯೂ ಹೊರ ಹೊಮ್ಮಲಿದೆ. ಮೈಸೂರು ಜಿಲ್ಲಾಡಳಿತ, ವಾರ್ತಾ ಮತ್ತು ಪ್ರಸಾರ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆಯು ಈ ಯೋಜನೆಯನ್ನು ಸಾಕಾರಗೊಳಿಸಿರುವುದಕ್ಕೆ ಡಾ.ವಿಷ್ಣು ಕುಟುಂಬದವರು ಧನ್ಯವಾದ ಸಮರ್ಪಿಸಿರುವುದಾಗಿಯೂ ನಟ ಅನಿರುದ್ಧ ತಿಳಿಸಿದ್ದಾರೆ.

ಶ್ರೀ ಸಿದ್ದೇಶ್ವರ ಸ್ವಾಮೀಜಿಗಳಿಗೆ ಶ್ರದ್ಧಾಂಜಲಿ

ಮೈಸೂರು,ಜ.12(ಎಸ್‌ಪಿಎನ್)–ಸರಳ ಜೀವಿ, ನಿರ್ಮೋಹಿ ವಿಜಯಪುರ ಶ್ರೀ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮೀಜಿ ಅವರಿಗೆ ರಾಮಕೃಷ್ಣನಗರ ಬಸವ ಸಮಿತಿ ಸದಸ್ಯರಿಂದ ರಾಮಕೃಷ್ಣನಗರ ವೃತ್ತದ ಬಳಿ ಶ್ರದ್ಧಾಂಜಲಿ ಅರ್ಪಿಸಲಾಯಿತು.



ರಾಮಕೃಷ್ಣನಗರದ ಬಸವೇಶ್ವರ ಸೇವಾ ಸಮಿತಿ ಅಧ್ಯಕ್ಷ ಲೋಕೇಶಪ್ಪ ಮಾತನಾಡಿ, ಸರಳತೆಯ ಸಾಕಾರ ಮೂರ್ತಿ ಶ್ರೀ ಸಿದ್ದೇಶ್ವರ ಸ್ವಾಮೀಜಿ ಅವರು ಜೀವಿಸಿದ್ದ ಕಾಲದಲ್ಲಿ ನಾವು–ನೀವೆಲ್ಲಾ ಬದುಕುತ್ತಿದ್ದೇವೆ ಎಂಬುದೇ ನಮ್ಮ ಪುಣ್ಯ. ಅಲ್ಲದೆ, ಭಕ್ತರೊಬ್ಬರು ಸಿದ್ದೇಶ್ವರ ಸ್ವಾಮೀಜಿ ಓಡಾಡಲು ದೊಡ್ಡ ಮೊತ್ತದ ಕಾರೊಂದನ್ನು ಆಶ್ರಮಕ್ಕೆ ಉಡುಗೊರೆ ಕೊಡಲು ತಂದಿದ್ದರು. ಆದರೆ, ಆ ಕಾರಿನಲ್ಲಿ ಒಂದು ಸುತ್ತು ಹಾಕಿ, ವಾಪಸ್ಸು ಕಳುಹಿಸಿದ್ದ ಪ್ರಸಂಗವನ್ನು ತಿಳಿಸಿದರು.

ಶ್ರೀ ಸಿದ್ದೇಶ್ವರ ಸ್ವಾಮೀಜಿಯವರು ಸಾರ್ವಜನಿಕವಾಗಿ ನೀಡಿದ್ದ ಪ್ರವಚನಗಳು ಹಲವರ ಪರಿವರ್ತನೆಗೂ ನಾಂದಿಯಾಗಿದೆ. ಹಾಗಾಗಿ ಅವರ ಆದರ್ಶಗಳನ್ನು ಇಂದಿನ ಪೀಳಿಗೆ ಮೈಗೂಡಿಸಿಕೊಳ್ಳಬೇಕು ಎಂದರು. ಈ ವೇಳೆ ರಾಮಕೃಷ್ಣನಗರ ಬಸವೇಶ್ವರ ಸೇವಾ ಸಮಿತಿ ಸದಸ್ಯರಾದ ಸುರೇಶ್, ಪ್ರಸನ್ನಕುಮಾರ್, ನಂಜಪ್ಪ, ರತ್ನ ಹಾಲಪ್ಪಗೌಡ, ರೇಖಾ, ದಾಕ್ಷಾಯಿಣಿ, ಅಮೃತೇಶ್, ಸಿದ್ದೇಶ್, ಮುಖಂಡ ಚೆನ್ನಪ್ಪ ಸೇರಿದಂತೆ ಇತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ದೊಡ್ಡಹಟ್ಟಿ ಬೋರೇಗೌಡ ಚಿತ್ರದಲ್ಲಿ ಶಿವಣ್ಣ ಬೀರನಹುಂಡಿ



ವೈರಂ

ಚಿತ್ರದ ಟೀಸರ್ ಬಿಡುಗಡೆ

ಒಬ್ಬ ಆ್ಯಂಗ್ರಿ ಯಂಗ್‌ಮ್ಯಾನ್ ಸುತ್ತ ಹೆಣೆಯಲಾದ ಕಥಾಹಂದರ ಹೊಂದಿರುವ ಚಿತ್ರ ವೈರಂ. ಹಿರಿಯನಟ ದೇವರಾಜ್ ಪುತ್ರ ಪ್ರಣಾಮ್ ದೇವರಾಜ್ ಅಭಿನಯದ ದ್ವಿತೀಯ ಚಿತ್ರವೂ ಇದಾಗಿದ್ದು, ಈ ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಗಿದೆ. ನಟ ದೇವರಾಜ್, ಚಂದ್ರಕಲಾ ದೇವರಾಜ್ ಹಾಗೂ ರಾಗಿಣಿ ಪ್ರಜ್ವಲ್ ಟೀಸರ್ ಬಿಡುಗಡೆ ಸಮಾರಂಭದಲ್ಲಿ ಉಪಸ್ಥಿತರಿದ್ದರು. ನಟ ದೇವರಾಜ್ ಮಾತನಾಡುತ್ತಾ, ಕನ್ನಡ ಚಿತ್ರರಂಗ ಈಗ ಮತ್ತೆ ಬ್ಯುಸಿಯಾಗಿದೆ. ಇಂತಹ ಟೈಮಲ್ಲೇ ನನ್ನ ಮಗನ 2ನೇ ಸಿನಿಮಾ ಬಿಡುಗಡೆಯಾಗುತ್ತಿದೆ. ನಿರ್ದೇಶಕ ಸಾಯಿಶಿವನ್ ಅವರು ಒಳ್ಳೆಯ ಸಿನಿಮಾ ಮಾಡಿದ್ದಾರೆ. ಚಿತ್ರದ ಹಾಡುಗಳನ್ನು ಕೇಳಿದ್ದೇನೆ. ತುಂಬಾ ಚೆನ್ನಾಗಿ ಬಂದಿವೆ ಎಂದು ಹೇಳಿದರು.

ನನ್ನ ಹಿಂದಿನ ಚಿತ್ರದಲ್ಲಿ ಚಾಕೊಲೇಟ್ ಬಾಯ್ ಆಗಿದ್ದೆ. ಈ ಸಿನಿಮಾದಲ್ಲಿ ಆ್ಯಕ್ಷನ್ ಹೀರೋ ಆಗಿದ್ದೇನೆ. ನಿರ್ಮಾಪಕರಾಗಿ ಮಲ್ಲಿಕಾರ್ಜುನ ಹಾಗೂ ವೇಮಾರೆಡ್ಡಿ ಅವರು ಚಿತ್ರವನ್ನು ಅದ್ಧೂರಿಯಾಗಿ ನಿರ್ಮಿಸಿದ್ದಾರೆ. ಒಬ್ಬ ಹೀರೋ ಗುರುತಿಸಿಕೊಳ್ಳೋದು ಅವನೆದುರು ಸ್ಟ್ರಾಂಗ್ ವಿಲನ್ ಇದ್ದಾಗ, ನನಗೆ ಎರಡನೇ ಚಿತ್ರದಲ್ಲೇ ಗರುಡ ರಾಮ್‌ರಂಥ ಖಳನಟರೆದುರು ಅಭಿನಯಿಸುವ ಅವಕಾಶ ಸಿಕ್ಕಿತು. ಶಂಕರ್ ಅಶ್ವಥ್ ಹಾಗೂ ವೀಣಾ ಸುಂದರ್ ನನ್ನ ತಂದೆ, ತಾಯಿ ಪಾತ್ರ ಮಾಡಿದ್ದಾರೆ. ಚಿತ್ರದಲ್ಲಿ 4 ಹಾಡುಗಳಿದ್ದು, ಕವಿರಾಜ್, ನಾಗೇಂದ್ರ ಪ್ರಸಾದ್, ರಾಮ್‌ನಾರಾಯಣ್ ಸಾಹಿತ್ಯ ಬರೆದಿದ್ದಾರೆ ಎಂದು ನಾಯಕ ಪ್ರಣಾವ್ ದೇವರಾಜ್ ತಿಳಿಸಿದರು.

ಚಿತ್ರದ ನಾಯಕಿ ಮೋನಾಲ್ ಮಾತನಾಡುತ್ತಾ, ಇದು ನನ್ನ ಮೊದಲ ಕನ್ನಡ ಚಿತ್ರವಾಗಿದ್ದು, ಒಂದೊಳ್ಳೆ ಲವ್‌ಸ್ಟೋರಿ ಇದರಲ್ಲಿದೆ. ಒಬ್ಬ ಕ್ರಿಶ್ಚಿಯನ್ ಹುಡುಗಿಯಾಗಿ ಚಿತ್ರದಲ್ಲಿ ಕಾಣಿಸಿಕೊಂಡಿದ್ದೇನೆ ಎಂದರು. ಚಿತ್ರದಲ್ಲಿ ಜನರಿಗೆ ಒಂದು ಯೂನಿವರ್ಸಲ್ ಮೆಸೇಜ್ ಇದೆ. ಜನ ಬದಲಾಗಬೇಕು ಎಂದು ಈ ಮೂಲಕ ಹೇಳಲಾಗಿದೆ. ಪ್ರೇಕ್ಷಕರು ಸಪೋರ್ಟ್ ಮಾಡುತ್ತಾರೆಂಬ ನಂಬಿಕೆಯಿದೆ ಎಂದರು ಖಳನಾಯಕ ಗರುಡಾರಾಮ್.

ಚಿತ್ರದಲ್ಲಿ ಹೀರೋ ಡೆಡಿಕೇಶನ್, ಇನ್ವಾಲ್ವ್‌ಮೆಂಟ್ ತುಂಬಾ ಚೆನ್ನಾಗಿತ್ತು. ಆತ ಸಿಂಗಲ್‌ಟೇಕ್ ಆರ್ಟಿಸ್ಟ್ ಎಂದು ನಿರ್ದೇಶಕ ಸಾಯಿಶಿವನ್, ಪ್ರಣಾಮ್ ದೇವರಾಜ್ ಅವರನ್ನು ಹೊಗಳಿದರು. ನಿರ್ಮಾಪಕರಾದ ಜೆ.ಮಲ್ಲಿಕಾರ್ಜುನ ಹಾಗೂ ವೇಮಾರೆಡ್ಡಿ ಅವರು ಚಿತ್ರದ ಬಗ್ಗೆ ಮಾತನಾಡಿದರು. ಗೋಪಿನಾಥ್ ಅವರ ಛಾಯಾಗ್ರಹಣ ಹಾಗೂ ಮಹತಿ ಸ್ವರಸಾಗರ್ ಅವರ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ದೊಡ್ಡಹಟ್ಟಿ ಬೋರೇಗೌಡನ ಟ್ರೈಲರ್

ಮಂಡ್ಯ ಗ್ರಾಮೀಣ ಸೊಗಡಿನ ಕಥಾಹಂದರ ಹೊಂದಿರುವ ಚಿತ್ರ ದೊಡ್ಡಹಟ್ಟಿ ಬೋರೇಗೌಡ, ಈ ಚಿತ್ರದ ಟ್ರೈಲರ್ ಇತ್ತೀಚೆಗೆ ಬಿಡುಗಡೆಯಾಯಿತು. ಕೆ.ಎಂ. ರಘು ಅವರ ನಿರ್ದೇಶನವಿರುವ ಈ ಚಿತ್ರದಲ್ಲಿ ಬಡ ರೈತನೊಬ್ಬ ತನಗೆ ಮಂಜೂರಾದ ಮನೆಯನ್ನು ಪಡೆದುಕೊಳ್ಳಲು ಎಷ್ಟೆಲ್ಲಾ ಪರದಾಟ ನಡೆಸಬೇಕಾಯಿತು ಎಂಬುದನ್ನು ಸದ್ಯದ ನೈಜಸ್ಥಿತಿಯ ಹಿನ್ನೆಲೆಯಲ್ಲಿ ಹೇಳುವ ಪ್ರಯತ್ನ ನಡೆದಿದೆ. ರಾಜರಾಜೇಶ್ವರಿ ಕಂಬೈನ್ಸ್ ಲಾಂಛನದಲ್ಲಿ ಈ ಚಿತ್ರ ನಿರ್ಮಾಣವಾಗಿದೆ.

ಚಿತ್ರದ ಬಗ್ಗೆ ಮಾತನಾಡಿದ ನಿರ್ದೇಶಕ ಕೆ.ಎಂ. ರಘು, ಹಿಂದೆ ತರ್ಲೆವಿಲೇಜ್, ಪರಸಂಗ ಸಿನಿಮಾ ಮಾಡಿದ್ದೆ. ಗ್ರಾಮೀಣ ಸೊಗಡಿನ ಮತ್ತೊಂದು ಕಥೆ ಇಟ್ಟುಕೊಂಡು ದೊಡ್ಡಹಟ್ಟಿ ಬೋರೇಗೌಡ ಚಿತ್ರವನ್ನು ನಿರ್ದೇಶಿಸಿದ್ದೇನೆ. ಇದೊಂದು ಕಮರ್ಷಿಯಲ್ ಚಿತ್ರವಾಗಿದ್ದು, ಮನರಂಜನೆ ನೀಡುವ ಜೊತೆಗೆ ನೋಡುಗರ ಮನದಲ್ಲಿ ಉಳಿಯುತ್ತದೆ. ಮನೆಯ ಎಲ್ಲರೂ ಇಷ್ಟಪಡುವ ಕಾನ್ಸೆಪ್ಟ್, ಹಳ್ಳಿಯಲ್ಲಿ ಬಡವರಿಗೆ ಸರ್ಕಾರದಿಂದ ನೀಡುವ ಆಶ್ರಯ ಯೋಜನೆಯ ಮನೆಯನ್ನು ಬಡ ವ್ಯಕ್ತಿಯೊಬ್ಬ ಗ್ರಾಮ ಪಂಚಾಯ್ತಿಯಿಂದ ಪಡೆದುಕೊಳ್ಳಲು ಯಾವ ರೀತಿ ಕಷ್ಟಪಡುತ್ತಾನೆ, ಏನೇನೆಲ್ಲ ಸಂದರ್ಭಗಳನ್ನು ಎದುರಿಸುತ್ತಾನೆ ಎನ್ನುವುದೇ ಈ ಚಿತ್ರದ ಕಾನ್ಸೆಪ್ಟ್, ಚಿತ್ರದ ಶೂಟಿಂಗ್‌ಗಾಗಿ ನಿಜವಾದ ಮನೆಯನ್ನೇ ಕಟ್ಟಿಸಿ, ಅದನ್ನು ಈಗ ಒಬ್ಬರಿಗೆ ಕೊಟ್ಟಿದ್ದೇವೆ, ನಮ್ಮ ಚಿತ್ರಕ್ಕೆ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರಥಮ ಅತ್ಯುತ್ತಮ ಚಿತ್ರ ಪ್ರಶಸ್ತಿ ದೊರೆತಿದೆ. ನನ್ನ ಪ್ರಕಾರ ಆರರಿಂದ ಅರವತ್ತು ವರ್ಷಗಳವರೆಗೆ ಎಲ್ಲರಿಗೂ ಹಿಡಿಸುವ ಚಿತ್ರಗಳು ಕಮರ್ಷಿಯಲ್ ಚಿತ್ರಗಳೇ. ಈ ಚಿತ್ರದಲ್ಲಿ ಹೆಚ್ಚಾಗಿ ಗ್ರಾಮೀಣ ಪ್ರತಿಭೆಗಳೇ ಅಭಿನಯಿಸಿರುವುದು ವಿಶೇಷ. ಮೂರು ತಿಂಗಳ ಕಾಲ ಎಲ್ಲರಿಗೂ ತರಬೇತಿ ನೀಡಿ ನಂತರ ಬಣ್ಣ ಹಚ್ಚಿಸಿದ್ದೇನೆ ಎಂದರು.

ಚಿತ್ರದ ನಾಯಕ ಶಿವಣ್ಣ ಬೀರನಹುಂಡಿ ಮಾತನಾಡುತ್ತಾ, ನಾನು ಮೈಸೂರಿನ ಬಳಿಯ ಬೀರನಹುಂಡಿಯವನು. ಗ್ರಾಮ ಪಂಚಾಯತಿ ಸದಸ್ಯನೂ ಹೌದು. ರಂಗಭೂಮಿಯಲ್ಲಿ ಹಲವಾರು ವರ್ಷ ಕೆಲಸಮಾಡಿದ ನಂತರ ಮೊದಲ ಬಾರಿಗೆ ಈ ಚಿತ್ರದಲ್ಲಿ ಬೋರೇಗೌಡನ ಪಾತ್ರ ನಿರ್ವಹಿಸಿದ್ದೇನೆ ಎಂದು ಹೇಳಿದರು.

ಇನ್ನು ಈ ಚಿತ್ರದಲ್ಲಿ ಅಭಿನಯಿಸಿರುವ ಗೀತಾ, ಲಾವಣ್ಯ, ಕಲಾರತಿ ಮಹದೇವ್, ಕಾತ್ಯಾಯಿನಿ, ಯೋಗೇಶ್ ಮುಂತಾದ ಕಲಾವಿದರು ತಮ್ಮ ಅನುಭವಗಳನ್ನು ಹಂಚಿಕೊಂಡರು. ಹಾಡುಗಳ ಬಗ್ಗೆ ಹರ್ಷವರ್ಧನ್‌ರಾಜ್ ಮಾಹಿತಿ ನೀಡಿದರು. ನಿರ್ಮಾಪಕರಾದ ಶಶಿಕುಮಾರ್ ಬಿ.ಸಿ.ಲೋಕೇಶ್ ಕೆ.ಎಂ. ಹಾಗೂ ಚಿತ್ರ ಬಿಡುಗಡೆ ಹಂತದಲ್ಲಿ ಸಹಕಾರ ನೀಡಿರುವ ವೆಂಕಟೇಶ್ ಮತ್ತು ಶ್ರೀಮತಿ ಜಿ.ಅನ್ನಪೂರ್ಣ ಅವರುಗಳು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಹೊಸಬರ ಒಂದೊಳ್ಳೆ ಲವ್ ಸ್ಟೋರಿ

ಹೊಸ ಪ್ರತಿಭೆಗಳು ಸೇರಿಕೊಂಡು ಸಿದ್ಧಪಡಿಸಿರುವ 'ಒಂದೊಳ್ಳೆ ಲವ್ ಸ್ಟೋರಿ' ಚಿತ್ರದ ಟ್ರೇಲರ್ ಹಾಗೂ ಹಾಡುಗಳ ಬಿಡುಗಡೆ ಕಾರ್ಯಕ್ರಮ ಎಸ್‌ಆರ್‌ವಿ ಪ್ರಿವ್ಯೂ ಚಿತ್ರಮಂದಿರದಲ್ಲಿ ನಡೆಯಿತು.

ಅನಿವಾಸಿ ಭಾರತೀಯ ಮೈಸೂರಿನ ನಿರಂಜನ್ ಬಾಬು ಪಿನಕಿನ್ ಸಿನಿಮಾಸ್ ಬ್ಯಾನರ್‌ನಡಿಯಲ್ಲಿ ನಿರ್ಮಾಣ ಮಾಡಿ, ನಾಯಕನ ತಂದೆ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ಇವರು ಅಮೇರಿಕಾದಲ್ಲಿದ್ದರೂ ಕನ್ನಡ ಭಾಷೆಯ ಅಭಿಮಾನದಿಂದ ಹಲವಾರು ಸಮಾಜ ಸೇವೆಗಳನ್ನು ಮಾಡುತ್ತಾ, ಇಂದು ಅಮೆಜಾನ್‌ದಲ್ಲಿ ಕನ್ನಡ ಚಿತ್ರಗಳು ಪ್ರಸಾರಗೊಳ್ಳಲು ಮೂಲ ಕಾರಣಕರ್ತರಾಗಿರುತ್ತಾರೆ. ಈಗಾಗಲೇ ಶಿವರಾಜ್‌ಕುಮಾರ್, ಸುದೀಪ್, ರಮೇಶ್ ಅರವಿಂದ್ ಚಿತ್ರದ ಕುರಿತಂತೆ ಮೆಚ್ಚುಗೆ ವ್ಯಕ್ತಪಡಿಸಿ ಶುಭ ಹಾರೈಸಿದ್ದಾರೆ. ಪ್ರವೀಣ್‌ಸುತರ್ ನಿರ್ದೇಶನವಿದೆ.


ಕಥೆ, ಚಿತ್ರಕಥೆ ಬರೆದು ನಾಯಕನಾಗಿ ಅಭಿನಯಿಸಿರುವುದು ಅಶ್ವಿನ್. ಸಾಮಾಜಿಕ ಜಾಲತಾಣದಲ್ಲಿ ಹೆಸರು ಮಾಡಿ, ಬಿಗ್‌ಬಾಸ್ ಮನೆಗೆ ಹೋಗಿ ಬಂದಿರುವ ಧನುಶ್ರೀ ನಾಯಕಿ. ಗೆಳೆಯನಾಗಿ ಕೈಲಾಸ್‌ಪಾಲ್, ಗೆಳತಿಯಾಗಿ ನಿಶಾಹೆಗಡೆ ಉಳಿದಂತೆ ಕೆಎಸ್‌ಜಿ ವೆಂಕಟೇಶ್, ವಿಂಧುಜ, ಮಲ್ಲು ಜಮಖಂಡಿ, ಮಮತಾ ಮುಂತಾದವರು ಅಭಿನಯಿಸಿದ್ದಾರೆ.

ಯೌವನಕ್ಕೆ ಬಂದು ಬದುಕು ಏನು ಎಂಬುದನ್ನು ಅರಿತುಕೊಳ್ಳುವಾಗ ಪ್ರೀತಿ ಹುಟ್ಟಿಕೊಳ್ಳುತ್ತದೆ. ಅಲ್ಲಿಂದ ನಮ್ಮ ಪಯಣ ಏನು ಬೇಕಾದರೂ ಆಗಬಹುದು. ಕೊನೆಗೆ ವಿಷಯಗಳನ್ನು ತಿಳಿದುಕೊಂಡಾಗ ಪ್ರತಿಯೊಬ್ಬರಿಗೂ ಹೌದು ಅನಿಸುತ್ತದೆ. ಹಾಗೆಯೇ ಎಲ್ಲರ ಮನಸ್ಸನ್ನು ಗೆಲ್ಲುತ್ತದೆ. ಅವನು ಪ್ರೀತಿಯಲ್ಲಿ ಮೋಸ ಹೋದರೆ, ಅವಳು ಜೀವನದಲ್ಲಿ ನಂಬಿಕೆಯನ್ನು ಕಳೆದುಕೊಂಡಿರುತ್ತಾಳೆ. ಇಬ್ಬರು ವಿಚಿತ್ರ ಸಂದರ್ಭದಲ್ಲಿ ಭೇಟಿಯಾಗುತ್ತಾರೆ. ಇಂತಹ ಆಸಕ್ತಿಕರ ಅಂಶಗಳು ಸಿನಿಮಾದಲ್ಲಿದೆ. ಏಳು ಹಾಡುಗಳಿಗೆ ಆಕಾಶ್ ಜಾದವ್ ಸಂಗೀತ ಸಂಯೋಜಿಸಿದ್ದಾರೆ. ಛಾಯಾಗ್ರಹಣ ವಿನೋದ್ ಮಂಡ್ಯ, ಸಂಭಾಷಣೆ ವಿಜಿಯೇಂದ್ರ ಜೋಡಿದಾರ್, ಸಂಕಲನ ರಾಜ್‌ಶಿವು ಅವರದಾಗಿದೆ. ಚಿಕ್ಕಮಗಳೂರು, ಮಂಗಳೂರು, ಕೇರಳ ಕಡೆಗಳಲ್ಲಿ ಚಿತ್ರೀಕರಣ ನಡೆದಿದೆ. ಸಚಿತ್ ಫಿಲಿಂ ಮುಖಾಂತರ ಸಿನಿಮಾವು ಫೆಬ್ರವರಿಯಲ್ಲಿ ತೆರೆಗೆ ಬರುವ ಸಾಧ್ಯತೆ ಇದೆ.



ಸಿನಿಪದಬಂಧ-457

ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______________
ವಿಳಾಸ ______________
____
ದೂರವಾಣಿ ಸಂಖ್ಯೆ ______________

ಎಡದಿಂದ ಬಲಕ್ಕೆ

1.ರವಿ,ರಾಧಾಳಿಗಾಗಿ ಹುಸಿ ನುಡಿಯಲು ಬಿ.ಸುಬ್ಬರಾವ್ ನಿರ್ದೇಶಕ 5
3.ರಾಘವನೊಂದಿಗೆ ಇವರಿಬ್ಬರೂ ಪ್ರತ್ಯಕ್ಷ! 4
7.ದೇವಕಿ ಕಂದ 'ಪುನೀತ್' ಧರೆಗಿಳಿದ ದೈವ 9
8.ಕಾಡಿನ ರಾಜ ಚಿತ್ರದ ನಾಯಕಿ 2
9.ರವಿಚಂದ್ರನ್ ಅವರಿಗಿರುವ "ಆತ್ಮಗೌರವ" 4
10.ರಾಶಿಗಳೊಳಗೆ ನಟಿಯೊಬ್ಬಳು ಸಿಗುತ್ತಾಳೆ 2
12. _ _ ಬಾಟಮ್ 2
14.ಪಾಂಡವ – ಕೌರವರ ನಡುವಿನ ರಣರಂಗ 4
16. ಹೆಂಡತಿಯೊಳಗೆ ಅಡಗಿರುವುದು ಮತ್ತೇರಿಸಿದೆ 2
17.ಬೆವರ ಹನಿ ಬಿದ್ದಾಗ ಮುತ್ತಾದ ಭೂಮಿ 9
19.ರಾಜ್ ಕುಮಾರ್ ಅವರ ವಂಶದ ಮರ್ಯಾದೆ 5
20.ಬೆಟ್ಟದಲ್ಲಿ ಅರಳಿದ ಪುಷ್ಪ 5

ವಿಜೇತರು: ಬಿ.ಹೆಚ್.ಶ್ರೀನಿವಾಸ ಮೂರ್ತಿ, #967, ಹೆಬ್ಬಾಳ್ 2ನೇ ಹಂತ, ಮಯೂರ ಸರ್ಕಲ್ ಹತ್ತಿರ, ಹೆಬ್ಬಾಳ್, ಮೈಸೂರು-17

ಸಿನಿ ಪದಬಂಧ 456ರ ಸರಿ ಉತ್ತರ

ಪ	ದ	ವಿ	ಪೂ	ರ್ವ		ನ	ರ	ಹಂ	ತ	ಕ
ದ			ಜಾ		ಅ		ಕ್ತ			ವ
ವಿ		ಕ	ರಿ	ಮ	ಲೆ	ಯ	ಕ	ಗ್ಗ	ತ್ತ	ಲು
ಧ	ಣಿ				ಮಾ		ಣ್ಣೀ			ದಾ
ರ		ರ	ಣ	ಭೇ	ರಿ		ರು		ಗೌ	ರಿ
		ಮ್ಯಾ						ಚಿ		
ಕ	ರ್ಪೂ		ಬ		ಕಾ	ಮ	ಸೂ	ತ್ರ		ಶ್ವೇ
ಪ್ಪು			ಳ್ಳಾ		ದಂ				ಸಂ	ತ
ಬಿ	ಳಿ	ಗಿ	ರಿ	ಯ	ಬ	ನ	ದ	ಲ್ಲಿ		ಗು
ಳು			ನಾ		ರಿ		ಲ್ಲಾ			ಲಾ
ಪು	ಳಿ	ಯೋ	ಗ	ರೆ		ಬಿ	ಳಿ	ಗು	ಲಾ	ಬಿ

ಮೇಲಿನಿಂದ ಕೆಳಕ್ಕೆ

1.ವೀರಪ್ಪ ಮೊಯ್ಲಿ ಕಥೆ ಆಧರಿಸಿ ಉರಿದ ಹಣತೆ 5
2.ಮಕ್ಕಳ ಸೈನ್ಯದ ನಾಯಕಿ ಇಲ್ಲಿ ಅಸ್ತವ್ಯಸ್ತ 3
4.ಗರುಡ ಧ್ವಜ ಚಿತ್ರದ ನಿರ್ದೇಶಕ 5
5.ಈ ಚಿತ್ರ ಮೃಚ್ಛಕಟಿಕ ಸಂಸ್ಕೃತ ನಾಟಕ ಆಧರಿಸಿದೆ 5
6.ವಿಷ್ಣುವರ್ಧನ್ – ಜಯಪ್ರದಾ ನಂಟು ಮಧುರವಾಗಿದೆ. 4
9.ಶಶಿಕುಮಾರ್ – ಸುಧಾರಾಣಿ ಅಭಿನಯದಿ ಮುತ್ತಿನ ಮಳೆ ಸುರಿಸಿದ ನಕ್ಷತ್ರ 2
11.ಆಪ್ತ "ಗೆಳೆಯ" 2
12.ರಜತ ಪ್ರಭೆ ಇರುವ ಪುಟ ನಿಮ್ಮ ಕೈಯಲ್ಲಿದೆ 5
13.ಬಿರುದಾಂಕಿತ ಕವಿಯೋರ್ವರ ಹತ್ತಿರ ಭಾರ್ಗವನೊಂದಿಗೆ ಸಮುದ್ರವಿದೆ 5
14. ತರೀಕೆರೆ ಏರಿ ಮೇಲೆ ಮೂರು ಕರಿ _ _ _ _ ಮೆಯಿತಿತ್ತು. 4
15.ದುನಿಯಾ ಸೂರಿಯ ಹೂವಿನ ಹೆಸರಿನಲ್ಲಿ ಮಾತ್ರ ಬಿಸಿ ಇದೆ 5
18.ಗೋರಿ ಕಟ್ಟಿ ಆಡಿದ ದೇಶೀಯ ಆಟ 3

ಸ್ನೇಹಿತರಿಂದ ಸ್ನೇಹಿತರಿಗಾಗಿ ಮಧುಪಾನದ ಹೊಸಪಾಠ!

ಅವರೆಲ್ಲಾ ಸುಮಾರು ಇಪ್ಪತ್ತು ವರ್ಷಗಳಿಂದಲೂ ಆತ್ಮೀಯ ಸ್ನೇಹಿತರು. ಅಂತಹ ಸ್ನೇಹವೃಂದದಿಂದ ಮಧುಪಾನದ ಹೊಸಪಾಠ ಎಂಬ ಪಾರ್ಟಿಸಾಂಗ್ ಹೊಸ ವರ್ಷದ ಸಂದರ್ಭದಲ್ಲಿಯೇ ಬಿಡುಗಡೆಯಾಗಿದೆ. ಈ ಆಲ್ಬಂ ಹಾಡಿನ ವಿಶೇಷತೆ ಕುರಿತಂತೆ ತಂಡದ ಸದಸ್ಯರು ಮಾಧ್ಯಮದ ಮುಂದೆ ಮಾಹಿತಿ ನೀಡಿದರು.

ನನಗೆ ಹಲವು ವರ್ಷಗಳಿಂದ ರ್‍ಯಾಪ್ ಸಿಂಗರ್ ಆಗಬೇಕೆಂದು ಕನಸಿತ್ತು. ಎಷ್ಟೋ ಜನ ಈ ಕ್ಷೇತ್ರದಲ್ಲೇ ದೊಡ್ಡ ಹೆಸರು ಮಾಡಿದ್ದಾರೆ. ಅವರೆಲ್ಲ ನನಗೆ ಸ್ಫೂರ್ತಿ. ಇಪ್ಪತ್ತು ವರ್ಷಗಳಾದರೂ ನಾನು ಒಂದು ಆಲ್ಬಂಸಾಂಗ್ ಬಿಡುಗಡೆ ಮಾಡಲು ಆಗಿರಲಿಲ್ಲ. ಆನಂತರ ನನ್ನ ಗೆಳೆಯ ದಕ್ಷಿಣಮೂರ್ತಿ ಅವರು ಸಿಕ್ಕಾಗ ಈ ಥರ ಒಂದು ಆಲ್ಬಂಸಾಂಗ್ ಮಾಡುತ್ತಿರುವ ವಿಚಾರವನ್ನು ತಿಳಿಸಿದರು. ಆಗ ಮಧುಪಾನದ ಹೊಸಪಾಠ ಎನ್ನುವ ಆಲ್ಬಂ ಹಾಡು ನಿರ್ಮಾಣವಾಗುತ್ತದೆ ಎಂದು ಈ ಹಾಡನ್ನು ಬರೆದು ಜೊತೆಗೆ ಅದಕ್ಕೆ ದನಿಯಾಗಿರುವ, ಅಲ್ಲದೆ ಅಭಿನಯವನ್ನೂ ಸಹ ಮಾಡಿರುವ ಕಂಗ್ಲೀಷ್‌ಡ್ಯಾಡಿ ಚಿಕ್ಕು ಎಂದೇ ಹೆಸರಾದ ಚಿಕ್ಕ ವೆಂಕಟರಾಮು ಅವರು ಈ ಆಲ್ಬಂ ಹಾಡು ಹೇಗೆ ತಯಾರಾಯಿತು ಎಂಬ ಬಗ್ಗೆ ಚಿಕ್ಕ ವಿವರಣೆ ನೀಡಿದರು. ನಿರ್ಮಾಪಕ ಹಾಗೂ ನಟ ದಕ್ಷಿಣಮೂರ್ತಿ ಮಾತನಾಡುತ್ತಾ, ನನಗೆ ಮೊದಲಿನಿಂದಲೂ ಒಬ್ಬ ಕಲಾವಿದನಾಗಬೇಕೆಂಬ ಕನಸಿತ್ತು. ಅದು ಈವರೆಗೆ ಆಗಿರಲಿಲ್ಲ. ಚಿಕ್ಕು ಅವರು ಈ ಹಾಡಿನ ಬಗ್ಗೆ ನನಗೆ ಹೇಳಿದರು. ಆ ಹಾಡು ನನಗೂ ತುಂಬಾ ಇಷ್ಟವಾಯಿತು, ಹೇಗಾದರೂ ಆಗಲಿ ಅಂತ ನಿರ್ಮಾಣ ಮಾಡಿದೆ.

ಮೈಸೂರು ಮಿತ್ರ ಶುಕ್ರವಾರ 13 ಜನವರಿ 2023

ಸ್ವಾಮಿ ವಿವೇಕಾನಂದರ ತತ್ವಗಳು ಚಿರಸ್ಥಾಯಿ: ಡಿಸಿ



ಮಂಡ್ಯ, ಜ.12– ಸ್ವಾಮಿ ವಿವೇಕಾನಂದರ ತತ್ವಗಳು ಭೂಮಂಡಲ ಇರುವವರೆಗೂ ಚಿರಸ್ಥಾಯಿಯಾಗಿರುತ್ತವೆ ಎಂದು ಜಿಲ್ಲಾಧಿಕಾರಿ ಡಾ.ಹೆಚ್.ಎನ್. ಗೋಪಾಲಕೃಷ್ಣ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಜಿಲ್ಲಾಡಳಿತ, ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೆಹರು ಯುವ ಕೇಂದ್ರ, ಎನ್‌ಎಸ್‌ಎಸ್ ಘಟಕದಿಂದ ಗುರುವಾರ ನಡೆದ ಸ್ವಾಮಿ ವಿವೇಕಾನಂದ ಜನ್ಮ ದಿನಾಚರಣೆ ಹಾಗೂ ರಾಷ್ಟ್ರೀಯ ಯುವ ದಿನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿವೇಕಾನಂದರ ತತ್ವಗಳು ಯುವ ಜನರ ಮನಸ್ಸಿಗೆ ನಾಟಬೇಕು. ಯುವಕರು ಕಲೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಹೆಚ್ಚಾಗಿ ಪಾಲ್ಗೊಂಡು ರಾಜ್ಯ, ರಾಷ್ಟ್ರಕ್ಕೆ ಕೀರ್ತಿ ತರಬೇಕು ಎಂದರು. ವಿದ್ಯಾರ್ಥಿಗಳು ಉತ್ತಮವಾಗಿ ವಿದ್ಯಾಭ್ಯಾಸ ಪಡೆದು ಸ್ವಯಂ ಉದ್ಯೋಗ ಮಾಡಬೇಕು. ಕ್ರೀಡೆಯಲ್ಲಿ ಭಾಗವಹಿಸಿ ಸಾಧನೆ ಮಾಡಬೇಕು. ಡ್ರಗ್ಸ್ ಮತ್ತು ಮಾದಕ ವಸ್ತುಗಳಿಂದ ದೂರವಿದ್ದು ಪ್ರಜ್ಞಾವಂತ ನಾಗರಿಕರಾಗಬೇಕು ಎಂದರು.

15 ರಿಂದ 29 ವರ್ಷದೊಳಗಿನ ಗ್ರಾಮೀಣ ಯುವಕ ಯುವತಿಯರಿಗೆ ಮಾರ್ಗದರ್ಶನ ನೀಡಲು ಕರ್ನಾಟಕ ಸರ್ಕಾರ ಸ್ವಾಮಿ ವಿವೇಕಾನಂದ ಯುವ ಶಕ್ತಿ ಎಂಬ ಯೋಜನೆ ಜಾರಿಗೆ ತಂದಿದೆ. ಈ ಯೋಜನೆಯಡಿ ಕೌಶಲ್ಯಾಭಿವೃದ್ಧಿ, ಆರ್ಥಿಕ ಸಹಾಯ ಲಭ್ಯವಿದ್ದು ಇದನ್ನು ಸದುಪಯೋಗಪಡಿಸಿಕೊಳ್ಳಿ ಎಂದರು.

ರಾಷ್ಟ್ರೀಯ ಯುವ ದಿನ ಪ್ರಯುಕ್ತ ಇಂದು ಹುಬ್ಬಳ್ಳಿ–ಧಾರವಾಡದಲ್ಲಿ ರಾಷ್ಟ್ರೀಯ ಯುವಜನೋತ್ಸವ ನಡೆಯುತ್ತಿದೆ. ಈ ಹಿಂದೆ ನಾನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತನಾಗಿದ್ದಾಗ ಯುವಜನೋತ್ಸವ ಕರ್ನಾಟಕದಲ್ಲಿ ನಡೆಯಬೇಕು ಎಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೆ. ಅದರಂತೆ ರಾಜ್ಯದಲ್ಲಿ ನಡೆಯುತ್ತಿರುವುದು ವೈಯಕ್ತಿಕವಾಗಿ ನನಗೆ ಬಹಳ ಸಂತೋಷವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಓಂಪ್ರಕಾಶ್ ಜಿ, ನೆಹರು ಯುವ ಕೇಂದ್ರದ ಚಿನ್ನಗಿರಿಗೌಡ, ಅರುಣಕುಮಾರಿ, ಅನುಪಮ ಸೇರಿದಂತೆ ಇತರರಿದ್ದರು.

ಧರ್ಮಸ್ಥಳ ಸಂಸ್ಥೆಯಿಂದ ಮಹಿಳಾ ಸಬಲೀಕರಣ

ಜಿಪಂ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸಿ.ಅಶೋಕ್



ಪಾಂಡವಪುರ, ಜ.12– ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ಮಹಿಳಾ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡಿದೆ ಎಂದು ಜಿಪಂ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸಿ.ಅಶೋಕ್ ತಿಳಿಸಿದರು.

ತಾಲೂಕಿನ ಜಕ್ಕನಹಳ್ಳಿ ನಾ.ಚ.ಭವನದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಾಮೂಹಿಕ ಶ್ರೀಸತ್ಯನಾರಾಯಣಸ್ವಾಮಿ ಪೂಜಾ ಧಾರ್ಮಿಕ ಸಭಾ ಹಾಗೂ ಒಕ್ಕೂಟಗಳ ಪದಗ್ರಹಣ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹೆಚ್.ಡಿ.ದೇವೇಗೌಡರು ಪ್ರಧಾನಿಯಾಗಿದ್ದ ವೇಳೆ ಮಹಿಳೆಯರಿಗೆ ಶೇ.30 ರಷ್ಟು ರಾಜಕೀಯ ಮೀಸಲಾತಿ ನೀಡಿದರು. ಅದೇ ರೀತಿ ಮಹಿಳೆಯರ ಆರ್ಥಿಕ ಸಬಲೀಕರಣ ವಿಚಾರದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀವೀರೇಂದ್ರ ಹೆಗ್ಗಡೆ, ಅವರ ಪತ್ನಿ ಹೇಮಾವತಿ ಹೆಗ್ಗಡೆ ಅವರ ಮಾರ್ಗದರ್ಶನದಲ್ಲಿ ಧರ್ಮಸ್ಥಳ ಸಂಸ್ಥೆ ಪ್ರಮುಖ ಪಾತ್ರ ನಿರ್ವಹಿಸುತ್ತಿದೆ ಎಂದರು.

ಜಿಲ್ಲಾ ನಿರ್ದೇಶಕ ಹೆಚ್.ಎಲ್.ಮುರುಳೀಧರ್ ಮಾತನಾಡಿ, ಜನರ ಸಮಸ್ಯೆಗೆ ಸ್ಪಂದಿಸಬೇಕು ಎನ್ನುವ ಉದ್ದೇಶದಿಂದ ಡಾ.ವೀರೇಂದ್ರ ಹೆಗ್ಗಡೆ ಅವರು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಆರಂಭಿಸಿದ್ದಾರೆ ಎಂದರು. 40 ವರ್ಷಗಳ ಹಿಂದೆ ಆರಂಭಗೊಂಡ ಧರ್ಮಸ್ಥಳ ಸಂಸ್ಥೆ 9 ವರ್ಷಗಳಿಂದೀಚೆಗೆ ಈ ಭಾಗದಲ್ಲಿ ಕೆಲಸ ಮಾಡುತ್ತಿದೆ. ಪ್ರಸ್ತುತ 4800 ಸ್ವಸಹಾಯ ಸಂಘಗಳಿದ್ದು, 10 ರೂ. ನಂತೆ ಜನರು ಉಳಿತಾಯ ಮಾಡಿರುವ ಹಣ 19 ಕೋಟಿಯಾಗಿದೆ. ಸಂಘಗಳಿಗೆ ಅಂದಾಜು 800 ಕೋಟಿಗೂ ಅಧಿಕ ಸಾಲವನ್ನು ಬ್ಯಾಂಕ್‌ಗಳ ಮೂಲಕ ನೀಡಲಾಗಿದೆ. ಬ್ಯಾಂಕ್ ಹಾಗೂ ಜನರ ವ್ಯವಹಾರದ ಮಧ್ಯೆ ಡಾ.ವೀರೇಂದ್ರ ಹೆಗ್ಗಡೆ ಅವರು ಜಾಮೀನುದಾರರಾಗಿ ನಿಂತಿದ್ದಾರೆ. ಆದರೆ, ಇತ್ತೀಚಿನ ದಿನಗಳಲ್ಲಿ ಧರ್ಮಸ್ಥಳ ಸಂಸ್ಥೆಯಿಂದ ಪಡೆದ ಸಾಲವನ್ನು ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಕೆಲವರು ಇಲ್ಲಿ ಕಡಿಮೆ ಬಡ್ಡಿಗೆ ಸಾಲ ಪಡೆದು ಅಧಿಕ ಬಡ್ಡಿಗೆ ಸಾಲ ನೀಡುತ್ತಿದ್ದಾರೆ ಎನ್ನುವ ಆರೋಪವಿದೆ. ಸಂಸ್ಥೆಯೂ ಜನರಿಗೆ ನೆರವಾಗುವ ಉದ್ದೇಶದಿಂದ ಕೆಲಸ ಮಾಡುತ್ತಿದೆ. ಇದರ ಆಶಯಕ್ಕೆ ಯಾರೂ ಧಕ್ಕೆ ತರುವ ಕೆಲಸ ಮಾಡಬಾರದು ಎಂದು ಮನವಿ ಮಾಡಿದರು.

ಈ ವೇಳೆ ಧರ್ಮಸ್ಥಳ ಸಂಸ್ಥೆ ಯೋಜನಾಧಿಕಾರಿ ಸರೋಜಾ, ಮೇಲ್ವಿಚಾರಕಿ ಪವಿತ್ರ, ಪುಷ್ಪಾವತಿ, ಗ್ರಾಪಂ ಅಧ್ಯಕ್ಷೆ ನಿಂಗಮ್ಮ, ಸೋಮಶೇಖರ್, ಜಯರಾಮು, ಮಾಜಿ ಉಪಾಧ್ಯಕ್ಷ ಲೋಕೇಶ್, ನಾ.ಚ.ಭವನ ಮಾಲೀಕರಾದ ಕನಕಲಕ್ಷ್ಮಿ, ಜಿಲ್ಲಾ ಜನ ಜಾಗೃತಿ ವೇದಿಕೆ ಉಪಾಧ್ಯಕ್ಷ ಅಶ್ವಥ್ ಕುಮಾರೇಗೌಡ, ಸದಸ್ಯರಾದ ಕೋ.ಪು.ಗುಣಶೇಖರ್, ರಾಜ್‌ಕುಮಾರ್, ಜೆ.ಪಿ.ಶಿವಶಂಕರ್, ಉದ್ಯಮಿ ಎಸ್‌ಎನ್‌ಟಿ ಸೋಮಶೇಖರ್, ಮುಖಂಡರಾದ ಆನಂದ್, ಗಿಣಿ ಬೋರೇಗೌಡ, ಪುಟ್ಟಸ್ವಾಮಿ ಸೇರಿದಂತೆ ಇತರರಿದ್ದರು.

ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿಸಿ

ಕೆ.ಆರ್.ಪೇಟೆ, ಜ.12– ರೈತರು ಮತ್ತು ಬಡವರ ಉಳಿವಿಗಾಗಿ ಜೆಡಿಎಸ್ ಅಧಿಕಾರಕ್ಕೆ ಬರಬೇಕಿದೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಪಕ್ಷ ಬೆಂಬಲಿಸುವಂತೆ ಮನ್‌ಮಲ್ ಮಾಜಿ ಅಧ್ಯಕ್ಷ ಎಂ.ಬಿ. ಹರೀಶ್ ಮತದಾರರಲ್ಲಿ ಮನವಿ ಮಾಡಿದರು.



ತಾಲೂಕಿನ ವಿಠಲಾಪುರ ಗ್ರಾಪಂ ವ್ಯಾಪ್ತಿಯ ಯಡಹಳ್ಳಿ, ಮತ್ತಿಘಟ್ಟ, ಪಿಡಿಜಿ ಕೊಪ್ಪಲು, ಕೂಡಲಕುಪ್ಪೆ, ಯಗಚಗುಪ್ಪೆ, ಅರಳಕುಪ್ಪೆ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಟಿ.ಮಂಜು ನೇತೃತ್ವದಲ್ಲಿ ಹಮ್ಮಿಕೊಂಡಿರುವ ಮನೆ ಮನೆಗೆ ಪಂಚರತ್ನ ಕಾರ್ಯಕ್ರಮದಲ್ಲಿ ಮಾತನಾಡಿ, ಜೆಡಿಎಸ್ ಪಕ್ಷ ಹಿಂದಿನಿಂದಲೂ ರೈತರ ಏಳಿಗೆಗೆ ದುಡಿದಿದೆ. ಗ್ರಾಮೀಣ ರೈತರು ಸದೃಢವಾಗಲು ಜೆಡಿಎಸ್‌ಗೆ ಮತ ನೀಡುವಂತೆ ಮನವಿ ಮಾಡಿದ ಅವರು, ಪಕ್ಷದ ಪಂಚರತ್ನ ಯೋಜನೆಯಲ್ಲಿ ತಿಳಿಸಿರುವಂತೆ ವಯೋವೃದ್ಧರಿಗೆ ಮಾಸಿಕ 5 ಸಾವಿರ ಪಿಂಚಣಿ, ಅಂಗವಿಕಲರಿಗೆ 4 ಸಾವಿರ ಮಾಸಾಶನ, ಮಹಿಳಾ ಸಂಘಗಳ ಸದಸ್ಯರು ಸಹಕಾರ ಸಂಘಗಳಲ್ಲಿ ಮಾಡಿರುವ ಸಾಲಮನ್ನಾ, ಸೇರಿದಂತೆ ಗ್ರಾಮೀಣ ಮಕ್ಕಳ ಶಿಕ್ಷಣಕ್ಕೆ ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆ, ಗ್ರಾಪಂ ವ್ಯಾಪ್ತಿಯಲ್ಲಿ ಉತ್ತಮ ಆಸ್ಪತ್ರೆ, ರೈತ ಚೈತನ್ಯ, ಉದ್ಯೋಗ ಮತ್ತು ಮಹಿಳಾ ಸಬಲೀಕರಣ ಹಾಗೂ ಬಡ ಕುಟುಂಬಗಳಿಗೆ ವಸತಿ ಯೋಜನೆ ಜಾರಿಗೊಳಿಸಲು ಪಕ್ಷದ ಅಧಿಕೃತ ಅಭ್ಯರ್ಥಿ ಹೆಚ್.ಟಿ.ಮಂಜು ಅವರಿಗೆ ಮತ ಹಾಕುವ ಮೂಲಕ ಮಾಜಿ ಸಿಎಂ ಕುಮಾರಸ್ವಾಮಿ ಕೈ ಬಲಪಡಿಸಿ ಎಂದು ಮನವಿ ಮಾಡಿದರು.

ರಾಜ್ಯ ಜೆಡಿಎಸ್ ಯುವ ಪ್ರಧಾನ ಕಾರ್ಯದರ್ಶಿ ವಕೀಲ ನಾಗೇಶ್ ಮಾತನಾಡಿದರು. ಈ ವೇಳೆ ಜೆಡಿಎಸ್ ಅಭ್ಯರ್ಥಿ ಹೆಚ್.ಟಿ.ಮಂಜು, ಜಿಪಂ ಮಾಜಿ ಉಪಾಧ್ಯಕ್ಷೆ ಗಾಯಿತ್ರಿ, ಬೂಕನಕೆರೆ ಹೋಬಳಿ ಜೆಡಿಎಸ್ ಅಧ್ಯಕ್ಷ ನಂದೀಶ್, ಅಕ್ಕಿಹೆಬ್ಬಾಳು ಹೋಬಳಿ ಅಧ್ಯಕ್ಷ ಬಸವಲಿಂಗಪ್ಪ ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಶೋಕ್, ತಾಪಂ ಮಾಜಿ ಸದಸ್ಯರಾದ ಸೋಮಶೇಖರ್, ಹೇಮೇಗೌಡ, ಮೋಹನ್, ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಧನಂಜಯ, ಬೂಕನಕೆರೆ ಹೋಬಳಿ ಯುವ ಜೆಡಿಎಸ್ ಅಧ್ಯಕ್ಷ ಮಂಜು, ಟಿಎಪಿಸಿಎಂಎಸ್ ನಿರ್ದೇಶಕ ಬಲದೇವ್, ಜಿಲ್ಲಾ ಜೆಡಿಎಸ್ ಉಪಾಧ್ಯಕ್ಷ ಬಿ.ವಿ.ನಾಗೇಶ್, ಜಿಲ್ಲಾ ಜೆಡಿಎಸ್ ಕಾರ್ಯದರ್ಶಿ ಎಚ್.ಜಿ.ಬಾಬು, ಮೋಹನ್, ಹೆಚ್.ಟಿ.ಲೋಕೇಶ್,ನಂಜಪ್ಪ, ಪಾಪೇಗೌಡ, ಬೀರುವಳ್ಳಿ ಪಿಎಸಿಎಸ್ ಅಧ್ಯಕ್ಷ ಈರೇಗೌಡ, ಪ್ರತಾಪ್, ಪ್ರದೀಪ್ ಸೇರಿದಂತೆ ನೂರಾರು ಮುಖಂಡರು ಉಪಸ್ಥಿತರಿದ್ದರು

ರಸ್ತೆ ಕಾಮಗಾರಿ ವಿಳಂಬ ಖಂಡಿಸಿ ಪ್ರತಿಭಟನೆ



ಶ್ರೀರಂಗಪಟ್ಟಣ, ಜ.12– ತಾಲೂಕಿನ ಪಂಪ್ ಹೌಸ್ ಸರ್ಕಲ್‌ನಿಂದ ಪೇಪರ್ ಮಿಲ್ ಸರ್ಕಲ್ ವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿ ವಿಳಂಬ ಖಂಡಿಸಿ ಬೆಳಗೊಳ ಮತ್ತು ಹೊಸಾನಂದೂರು ಗ್ರಾಮಗಳ ನೂರಾರು ಗ್ರಾಮಸ್ಥರು ರಸ್ತೆ ತಡೆದು ಗುರುವಾರ ಪ್ರತಿಭಟನೆ ನಡೆಸಿದರು. ತಾಲೂಕಿನ ಪಂಪ್‌ಹೌಸ್ ಸರ್ಕಲ್ ಬಳಿ ರಸ್ತೆ ತಡೆದ ಗ್ರಾಮಸ್ಥರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಬೆಳಗೊಳ ಸುನೀಲ್ ಮಾತನಾಡಿ, 9 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನಡೆದು ಮೂರ್‍ನಾಲ್ಕು ತಿಂಗಳಾದರೂ ರಸ್ತೆ ಕಾಮಗಾರಿ ಪೂರ್ಣಗೊಂಡಿಲ್ಲ. ಗುಂಡಿ ಬಿದ್ದ ರಸ್ತೆಯಲ್ಲಿ ವಾಹನ ಸವಾರರು ಸಂಚರಿಸುವುದು ದುಸ್ತರವಾಗಿದೆ. ಅಲ್ಲದೇ ಕೆಲವರು ಈ ರಸ್ತೆಯಲ್ಲಿ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದಾರೆ. ಆದರೂ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಕ್ಯಾರೆ ಎನ್ನುತ್ತಿಲ್ಲ ಎಂದು ಆರೋಪಿಸಿದರು.

ಈ ವೇಳೆ ಸ್ಥಳಕ್ಕಾಗಮಿಸಿದ ಪೊಲೀಸರು ಪ್ರತಿಭಟನಾಕಾರರ ಮನವೊಲಿಸಲು ಪ್ರಯತ್ನಿಸಿದರೂ, ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಸ್ಥಳಕ್ಕಾಗಮಿಸಬೇಕು ಎಂದು ಪಟ್ಟು ಹಿಡಿದರು. ಈ ವೇಳೆ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಲೋಕೋಪಯೋಗಿ ಇಲಾಖೆ ಸಹಾಯಕ ಅಭಿಯಂತರ ರೇವಣ್ಣ ಅವರನ್ನು ಪ್ರತಿಭಟನಾಕಾರರು ತರಾಟೆ ತೆಗೆದುಕೊಂಡರು.

ಈ ವೇಳೆ ಮಾತನಾಡಿದ ರೇವಣ್ಣ, ಕ್ರಷರ್‌ಗಳಲ್ಲಿ ರಸ್ತೆ ನಿರ್ಮಾಣಕ್ಕೆ ಬೇಕಾದ ಜಲ್ಲಿಕಲ್ಲು ಕೊರತೆಯಿಂದ ರಸ್ತೆ ಕಾಮಗಾರಿ ವಿಳಂಬವಾಗಿದೆ. ಇಂದಿನಿಂದ ಕಾಮಗಾರಿ ಪ್ರಾರಂಭಿಸಲಾಗಿದ್ದು, ಇನ್ನು 20 ದಿನಗಳಲ್ಲಿ ರಸ್ತೆ ಕಾಮಗಾರಿ ಪೂರ್ಣಗೊಳಿಸುತ್ತೇವೆ ಎಂದು ಭರವಸೆ ನೀಡಿದರು. ರಸ್ತೆತಡೆ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣ, ಮೈಸೂರು ಮತ್ತು ಕೆ.ಆರ್. ಸಾಗರದ ನಡುವಿನ ರಸ್ತೆ ಸಂಚಾರ ಅಸ್ತವ್ಯಸ್ತವಾಗಿತ್ತು.

ಪ್ರತಿಭಟನೆಯಲ್ಲಿ ಮುಖಂಡರಾದ ಸುನೀಲ್, ಬಿ.ವಿ.ಸುರೇಶ್, ರವಿಕುಮಾರ್, ಬಸವರಾಜು, ವಿಷಕಂಠೇಗೌಡ, ಶ್ರೀನಿವಾಸೇಗೌಡ, ರಜಿನಿ, ಪ್ರಸನ್ನ, ಚೇತನ್, ವೆಂಕಿ, ಕುಮಾರ್ ಸೇರಿದಂತೆ ಇತರರಿದ್ದರು.

ವಿಜ್ಞಾನ ಪ್ರದರ್ಶನದಲ್ಲಿ ಸಕ್ರಿಯವಾಗಿ ಭಾಗವಹಿಸಿ

ಮೈಸೂರು ವಿವಿ ವಿಶ್ರಾಂತ ಕುಲಪತಿ ಡಾ.ಪಿ.ವೆಂಕಟರಾಮಯ್ಯ ಕರೆ



ಮಳವಳ್ಳಿ, ಜ.12– ವಿದ್ಯಾರ್ಥಿಗಳು ಮತ್ತು ಪೋಷಕರು ವಿಜ್ಞಾನ ಮೇಳ, ವಸ್ತು ಪ್ರದರ್ಶನದಲ್ಲಿ ಸಕ್ರಿಯವಾಗಿ ಭಾಗವಹಿಸಿ ವೈಜ್ಞಾನಿಕ ಚಿಂತನೆ ಬೆಳೆಸಿಕೊಳ್ಳಿ ಎಂದು ಮೈಸೂರು ವಿವಿ ವಿಶ್ರಾಂತ ಕುಲಪತಿ ಡಾ.ಪಿ. ವೆಂಕಟರಾಮಯ್ಯ ಕರೆ ನೀಡಿದರು.

ತಾಲೂಕಿನ ರಾಗಿಬೊಮ್ಮನಹಳ್ಳಿ ಗೇಟ್ ಬಳಿಯ ಆದರ್ಶ ಶಾಲಾವರಣದಲ್ಲಿ ಆದರ್ಶ ಸಮೂಹ ವಿದ್ಯಾ ಸಂಸ್ಥೆ ವಿದ್ಯಾರ್ಥಿಗಳು ಮತ್ತು ಮೈಸೂರು ವಿವಿ ಸಹಯೋಗದಲ್ಲಿ ಆಯೋಜಿಸಿದ್ದ ವಿಜ್ಞಾನ ಮೇಳ ಮತ್ತು ವಾಣಿಜ್ಯ ವಸ್ತು ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ಈಗಿನ ಕಾಲದಲ್ಲಿ ಎಲ್ಲವೂ ವಿಜ್ಞಾನಮಯವಾಗಿದ್ದು, ಸೂರ್ಯ ಗ್ರಹಣ ಮತ್ತು ಚಂದ್ರಗ್ರಹಣಗಳು ನಿಮ್ಮಲ್ಲಿ ಆಶ್ಚರ್ಯವನ್ನುಂಟು ಮಾಡುತ್ತದೆ ಎಂದರು.

ಮುಂದಿನ ದಿನಗಳಲ್ಲಿ ಇಲ್ಲಿನ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು ವಿಜ್ಞಾನಿಗಳಾಗಿ ಹೊರಹೊಮ್ಮಿ ದೇಶಕ್ಕೆ ಮತ್ತು ಹೆತ್ತವರಿಗೆ ಕೀರ್ತಿ ತರುವ ನಿಟ್ಟಿನಲ್ಲಿ ತಾವೆಲ್ಲರೂ ಮುಂದಾಗಬೇಕು ಎಂದರು.

ಮೈಸೂರು ವಿವಿ ಪ್ರಾಧ್ಯಾಪಕ ಡಾ.ಬಸಪ್ಪ ಮಾತನಾಡಿ, ಎಲ್ಲರೂ ವೈಜ್ಞಾನಿಕ ಚಿಂತನೆಗೆ ಒಳಪಡಬೇಕು. ಅದನ್ನೆಲ್ಲ ತಮ್ಮ ಕಲಿಕೆಯಲ್ಲಿ ಅಳವಡಿಸಿಕೊಳ್ಳಬೇಕು. ಮುಂದಿನ ದಿನಗಳಲ್ಲಿ ಡಿಜಿಟಲ್ ಮತ್ತು ಕಂಪ್ಯೂಟರ್ ವಿಶ್ವವಿದ್ಯಾಲಯಗಳು ಬರುತ್ತಿದ್ದು, ಪಾಶ್ಚಾತ್ಯ ರಾಷ್ಟ್ರಗಳು ಸ್ಥಾಪನೆ ಮಾಡಲು ಮುಂದಾಗುತ್ತಿವೆ. ಆ ನಿಟ್ಟಿನಲ್ಲಿ ನಾವೆಲ್ಲರೂ ವೈಜ್ಞಾನಿಕ ಮತ್ತು ವಿಜ್ಞಾನದ ಮನೋಭಾವನೆ ಬೆಳೆಸಿಕೊಳ್ಳಬೇಕು. ವಿಜ್ಞಾನ ಅರ್ಥ ಮಾಡಿಕೊಂಡರೆ ಉತ್ತಮ ಆರೋಗ್ಯ ಪಡೆಯಬಹುದು ಎಂದರು. ಆದರ್ಶ ಸಮೂಹ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಡಾ. ಮೂರ್ತಿ ಮಾತನಾಡಿ, ಆಧುನಿಕ ಜಗತ್ತಿನಲ್ಲಿ ವೈಜ್ಞಾನಿಕ ಚಿಂತನೆ ಬಹಳ ಮುಖ್ಯ. ಪೋಷಕರು ತಮ್ಮ ಮಕ್ಕಳನ್ನು ಉತ್ತಮ ಶಿಕ್ಷಣದೊಂದಿಗೆ ಉನ್ನತ ಸ್ಥಾನಕ್ಕೆ ಬೆಳಸಬೇಕೆಂಬ ಆಶಯ ಹೊಂದಿರುತ್ತಾರೆ. ವಿಜ್ಞಾನದ ಬಗ್ಗೆ ತಿಳಿದುಕೊಂಡರೆ ಉತ್ತಮ ಭವಿಷ್ಯ ರೂಪಿಸಲು ಸಾಧ್ಯ. ಅದಕ್ಕಾಗಿ ಪೋಷಕರು ತಮ್ಮ ಮಕ್ಕಳ ಪ್ರತಿಭೆಗೆ ಪ್ರೋತ್ಸಾಹ ನೀಡಬೇಕೆಂದರು.

ಬೆಂಗಳೂರು ಉತ್ತರ ವಿವಿ ವಿಶ್ರಾಂತ ಕುಲಪತಿ ಡಾ.ಟಿ.ಡಿ.ಕೆಂಪರಾಜು ಮಾತನಾಡಿದರು. ವೇದಿಕೆಯಲ್ಲಿ ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಮತ್ತು ಆದರ್ಶ ಎಕ್ಸಲೆನ್ಸ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಸ್.ಡಿ.ದೊಡ್ಡಚಾರ್, ಆದರ್ಶ ಸಮೂಹ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ವೈಎಸ್.ಚಲುವರಾಜು, ಜಿಪಂ ಮಾಜಿ ಸದಸ್ಯ ವೈಎಸ್.ಶಿವರಾಮ್ ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಮೋದಿ ಮೆಗಾ ರೋಡ್ ಶೋ



ಅತ್ಯದ್ಭುತವಾಗಿ ಯೋಗಾ ಪ್ರದರ್ಶಿಸಿದರು. ಮಲ್ಲಕಂಭ ಪ್ರದರ್ಶನ ಮೈನವಿರೇಳಿಸುವಂತಿತ್ತು. ಯುವ ಜನೋತ್ಸವವು ನಾಡಗೀತೆಯೊಂದಿಗೆ ಪ್ರಾರಂಭವಾಯಿತು. ಹಾವೇರಿಯ ಏಲಕ್ಕಿ ಹಾರ, ಏಲಕ್ಕಿ ಪೇಟ ಹಾಕಿ ಮೋದಿಯವರನ್ನು ವೇದಿಕೆಗೆ ಸ್ವಾಗತಿಸಲಾಯಿತು. ಬಿದರಿ ಕಲೆಯಲ್ಲಿ ಅರಳಿದ ಸ್ವಾಮಿ ವಿವೇಕಾನಂದರ ಮನಮೋಹಕ ಮೂರ್ತಿ, ಧಾರವಾಡದ ಕಸೂತಿ ಕಲೆ ಹೊಂದಿರುವ ಹ್ಯಾಂಡ್‌ಲೂಮ್ ಶಾಲು ಮತ್ತು ಧಾರವಾಡ ಜಿಲ್ಲೆಯ ಗರಗ ಹಾಗೂ ಬೆಂಗೇರಿಯಲ್ಲಿ ತಯಾರಿಸಲಾದ ಧ್ವಜವನ್ನು ಟೀಕ್ ವುಡ್‌ನಲ್ಲಿ ಚೌಕಟ್ಟು ಹಾಕಿ, ಅದರ ಫ್ರೇಮ್ ಅನ್ನು ಮೋದಿಯವರಿಗೆ ಉಡುಗೊರೆಯಾಗಿ ನೀಡಲಾಯಿತು.

ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿ, ಅನುರಾಗ್ ಸಿಂಗ್ ಠಾಕೂರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಶಂಕರ ಪಾಟೀಲ ಮುನೇಕೊಪ್ಪ, ಕೆ.ಸಿ.ನಾರಾಯಣಗೌಡ, ಸಿ.ಸಿ.ಪಾಟೀಲ್, ಹಾಲಪ್ಪ ಆಚಾರ್, ಶಾಸಕರಾದ ಜಗದೀಶ್ ಶೆಟ್ಟರ್, ಅಮೃತ ದೇಸಾಯಿ, ಪ್ರದೀಪ್ ಶೆಟ್ಟರ್, ಮೇಯರ್ ಈರೇಶ ಅಂಚಟಗೇರಿ, ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್, ರಾಜ್ಯದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಸೇರಿದಂತೆ ಅನೇಕ ಗಣ್ಯರು ಇದ್ದರು.

ನೀವು ಟೇಕಾಫ್ ಆಗುವುದು ಒಂದೇ ಬಾಕಿ



ಯುವ ಜನೋತ್ಸವವನ್ನು ರಿಮೋಟ್ ಒತ್ತುವ ಮೂಲಕ ಉದ್ಘಾಟಿಸಿದ ಅವರು, ಹಲವು ಜಾಗತಿಕ ಉದ್ಯಮಗಳು ಭಾರತದತ್ತ ನೋಡುತ್ತಿವೆ. ಕಳೆದ 8 ವರ್ಷದಲ್ಲಿ ಯುವಕರಿಗೆ ಸಾಕಷ್ಟು ಯೋಜನೆಗಳನ್ನು ಜಾರಿ ಮಾಡಿದ್ದೇವೆ. ಯುವಕರಿಗಾಗಿ ಭವ್ಯ ಭವಿಷ್ಯವನ್ನು ರೂಪಿಸುವ ಮೂಲಕ ರನ್ ವೇ ಸಿದ್ಧವಾಗಿದೆ. ನೀವು ಟೇಕಾಫ್ ಆಗುವುದು ಒಂದೇ ಬಾಕಿ ಎಂದರು.

ಭಾರತವು ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡುತ್ತಿದೆ. ಇದಕ್ಕೆ ಮುಖ್ಯ ಕಾರಣ ನಮ್ಮ ಯುವಶಕ್ತಿ. ನಮ್ಮಲ್ಲಿ ಯುವಕರ ದೊಡ್ಡ ಪಡೆಯೇ ಇರುವುದರಿಂದ ನಾವು ಜಾಗತಿಕವಾಗಿ ದೊಡ್ಡ ಶಕ್ತಿಯಾಗಿ ಬೆಳೆಯುತ್ತಿದ್ದೇವೆ. ಎಲ್ಲಾ ರಂಗಗಳಲ್ಲಿಯೂ ಸಕಾರಾತ್ಮಕ ಬೆಳವಣಿಗೆಯಾಗುತ್ತಿದ್ದು, ಭಾರತದ ಸ್ಟಾರ್ಟ್‌ಅಪ್‌ಗಳಿಗೆ ಹಣ ಹರಿದು ಬರುತ್ತಿದೆ. ವಿದೇಶಿ ಬಂಡವಾಳ ಹೂಡಿಕೆಯಾಗುತ್ತಿದೆ. ಭಾರತ ವಿಶ್ವದ 5ನೇ ದೊಡ್ಡ ಆರ್ಥಿಕ ಶಕ್ತಿಯಾಗಿದೆ. ಮೊದಲ ಮೂರು ಸ್ಥಾನಗಳಲ್ಲಿರುವುದು ನಮ್ಮ ಗುರಿಯಾಗಿದ್ದು, ಈ ನಿಟ್ಟಿನಲ್ಲಿ ಆರ್ಥಿಕ ಬೆಳವಣಿಗೆಗೆ ಯುವಕರಿಗೆ ಸಾಕಷ್ಟು ಅವಕಾಶಗಳನ್ನು ತಂದುಕೊಡಲಾಗಿದೆ ಎಂದರು. ಯುವಕರಿಗೆ ಸ್ವಾಮಿ ವಿವೇಕಾನಂದರು ಪ್ರೇರಣೆಯಾಗಿದ್ದಾರೆ. ಮೈಸೂರು ಮಹಾರಾಜರು ಸ್ವಾಮಿ ವಿವೇಕಾನಂದರ ಚಿಕಾಗೋ ಯಾತ್ರೆಗೆ ಸಹಾಯ ಮಾಡಿದ್ದರು. ವಿವೇಕಾನಂದರು ಯುವಕರೇ ದೇಶದ ಭವಿಷ್ಯ ಎಂದಿದ್ದರು. ಚಿಕ್ಕ ವಯಸ್ಸಿನಲ್ಲೇ ಅವರು ಸಾಧನೆ ಮಾಡಿದ್ದರು. ದೇಶದ ಅಭಿವೃದ್ಧಿಯಲ್ಲಿ ಯುವಕರ ಪಾತ್ರ ಮಹತ್ವದ್ದಾಗಿದ್ದು, ದೇಶವನ್ನು ಮುನ್ನಡೆಸುವುದು ಯುವಕರ ಕರ್ತವ್ಯ. ದೇಶದ ಭವಿಷ್ಯ ಯುವಕರ ಮೇಲೆ ನಿಂತಿದೆ ಎಂದು ಹೇಳಿದರು.

ಮಹಿಳಾ ಶಕ್ತಿ ರಾಷ್ಟ್ರೀಯ ಶಕ್ತಿಯನ್ನು ಜಾಗೃತವಾಗಿ ಇಟ್ಟಿದೆ. ಭಾರತದ ಮಹಿಳೆಯರು ಫೈಟರ್ ಜೆಟ್ ಹಾರಿಸುತ್ತಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ನಮ್ಮ ಹೆಣ್ಣು ಮಕ್ಕಳು ಉನ್ನತ ಸಾಧನೆ ಮಾಡಿದ್ದಾರೆ. 21ನೇ ಶತಮಾನವನ್ನು ಭಾರತದ ಶತಮಾನ ಮಾಡಬೇಕಾಗಿದೆ ಎಂದು ಮೋದಿ ಹೇಳಿದರು.

ಪ್ರಧಾನಿಯತ್ತ ಧಾವಿಸಿದ ಪುಟ್ಟ ಪೋರ

ಮೈದಾನದವರೆಗಿನ 8 ಕಿ.ಮೀ. ಉದ್ದದ ಭಾರೀ ರೋಡ್ ಶೋ ನಡೆಸುತ್ತಿದ್ದ ವೇಳೆ 10 ವರ್ಷದ ಬಾಲಕನೋರ್ವ ಕೈಯ್ಯಲ್ಲಿ ಹಾರ ಹಿಡಿದು ಬ್ಯಾರಿಕೇಡ್ ಹಾರಿ, ಕಾರಿನಲ್ಲಿ ನಿಂತು ಕೈ ಬೀಸುತ್ತಿದ್ದ ಮೋದಿಯವರ ಬಳಿಗೆ ಕ್ಷಣ ಮಾತ್ರದಲ್ಲಿ ಓಡಿ ಬಂದಿದ್ದ. ತಕ್ಷಣವೇ ಎಸ್‌ಪಿಜಿ ಸಿಬ್ಬಂದಿ ಹಾಗೂ ಪೊಲೀಸರು ಆತನನ್ನು ಹಿಡಿದು ಕರೆದೊಯ್ದರು.

ಎಸ್‌ಪಿಜಿ ಭದ್ರತೆ ಭೇದಿಸಿ ಬಾಲಕ ಪ್ರಧಾನಿಯತ್ತ ಓಡಿ ಬಂದಾಗ ಕೆಲ ಕ್ಷಣ ಆತಂಕವುಂಟಾಗಿತ್ತು. ಭದ್ರತಾ ಲೋಪ ಉಂಟಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು. ಬಾಲಕನನ್ನು ವಿಚಾರಣೆಗೊಳಪಡಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಹುಬ್ಬಳ್ಳಿ–ಧಾರವಾಡ ನಗರ ಪೊಲೀಸ್ ಆಯುಕ್ತ ರಮಣಗುಪ್ತ ಅವರು ಸ್ಥಳೀಯನೇ ಆದ 10 ವರ್ಷದ ಬಾಲಕ ಅತೀ ಉತ್ಸಾಹದಿಂದ ಪ್ರಧಾನಿ ಅವರ ಬಳಿಗೆ ಹಾರ ಹಾಕಲು ತೆರಳಿದ್ದಾನೆ. ಬೇರೆ ಯಾವುದೇ ಆತಂಕಪಡುವ ಅವಶ್ಯಕತೆ ಇಲ್ಲ. ಪೊಲೀಸ್ ಭದ್ರತೆಯಲ್ಲಿ ಲೋಪವೂ ಉಂಟಾಗಿಲ್ಲ ಎಂದು ಹೇಳಿದರು.

ಕೊನೆಗೂ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕರ್ನಾಟಕದ ಸ್ತಬ್ಧ ಚಿತ್ರಕ್ಕೆ ಅವಕಾಶ

ಬೆಂಗಳೂರು, ಜ.12– ದೆಹಲಿಯಲ್ಲಿ ನಡೆಯಲಿರುವ ಈ ಬಾರಿಯ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಕರ್ನಾಟಕದ ಸ್ತಬ್ಧ ಚಿತ್ರಕ್ಕೆ ಕೊನೆಗೂ ಅವಕಾಶ ನೀಡಲಾಗಿದೆ. ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಸೂಲಗಿತ್ತಿ ನರಸಮ್ಮ, ಸಾಲುಮರದ ತಿಮ್ಮಕ್ಕ ಮತ್ತು ತುಳಸಿಗೌಡ ಹಾಲಕ್ಕಿ ಅವರ ಸಾಧನೆಗಳನ್ನು ಬಿಂಬಿಸುವ ಕರ್ನಾಟಕದ 'ನಾರಿ ಶಕ್ತಿ ವಿಷಯದ ಸ್ತಬ್ಧ ಚಿತ್ರವನ್ನು ಅಂತಿಮ ಹಂತದಲ್ಲಿ ಕೇಂದ್ರ ಸರ್ಕಾರ ಕೈ ಬಿಟ್ಟಿತ್ತು. ಇದಕ್ಕೆ ಪ್ರತಿಪಕ್ಷ ಕಾಂಗ್ರೆಸ್ ಸೇರಿದಂತೆ ರಾಜ್ಯಾದ್ಯಂತ ತೀವ್ರ ಜನಾಕ್ರೋಶ ವ್ಯಕ್ತವಾಗಿತ್ತು. ಈ ಸಂಬಂಧ ನಡೆದ ನಾಲ್ಕು ಸಭೆಗಳಲ್ಲಿ ಕರ್ನಾಟಕದ ಸ್ತಬ್ಧ ಚಿತ್ರ ಸಂಬಂಧ ಒಪ್ಪಿಗೆ ಸೂಚಿಸಿದ ಕೇಂದ್ರ ಸರ್ಕಾರ, ಐದನೇ ಸಭೆಯಲ್ಲಿ ಕರ್ನಾಟಕವನ್ನು ಕೈಬಿಟ್ಟಿತ್ತು. ಇತರ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಅವಕಾಶ ಕಲ್ಪಿಸಬೇಕೆಂಬ ಉದ್ದೇಶದಿಂದ ಕರ್ನಾಟಕವನ್ನು ಕೈಬಿಡಲಾಗಿದೆ ಎಂದು ಹೇಳಲಾಗಿತ್ತು.

ಇದರಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರ ತೀವ್ರ ಟೀಕೆಗೆ ಗುರಿಯಾಗಿತ್ತು. ಈ ನಡುವೆ ಕೊನೆ ಕ್ಷಣ ಕ್ಷಣದಲ್ಲಿ ರಾಜ್ಯದ ಸ್ತಬ್ಧ ಚಿತ್ರಕ್ಕೆ ಅವಕಾಶ ನೀಡಲಾಗಿದೆ.

ಜನಾರ್ದನ ರೆಡ್ಡಿ ಆಸ್ತಿ ಜಪ್ತಿಗೆ ರಾಜ್ಯ ಸರ್ಕಾರ ಅನುಮತಿ



ಬೆಂಗಳೂರು, ಜ.12– ಇತ್ತೀಚೆಗಷ್ಟೇ ಹೊಸ ರಾಜಕೀಯ ಪಕ್ಷ ಘೋಷಿಸಿ ಆಡಳಿತರೂಢ ಬಿಜೆಪಿಗೆ ಸೆಡ್ಡು ಹೊಡೆದಿದ್ದ ಗಣಿಧಣಿ, ಮಾಜಿ ಸಚಿವ ಗಾಲಿ ಜನಾರ್ದನ ರೆಡ್ಡಿಗೆ ರಾಜ್ಯ ಸರ್ಕಾರ ಶಾಕ್ ನೀಡಿದ್ದು, ಅಕ್ರಮ ಗಣಿಗಾರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರ ಆಸ್ತಿ ಜಪ್ತಿ ಮಾಡಲು ಅನುಮತಿ ನೀಡಿದೆ. ಕಳೆದ ಮಂಗಳವಾರ ಜನಾರ್ದನ ರೆಡ್ಡಿ ಅವರ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲು ಅನುಮತಿ ನೀಡದ ರಾಜ್ಯ ಸರ್ಕಾರವನ್ನು ಕರ್ನಾಟಕ ಹೈಕೋರ್ಟ್ ತೀವ್ರ ತರಾಟೆಗೆ ತೆಗೆದುಕೊಂಡಿತ್ತು. ಇದರಿಂದ ಎಚ್ಚೆತ್ತುಕೊಂಡ ಗೃಹ ಇಲಾಖೆ, ಸಿಬಿಐಗೆ ಅನುಮತಿ ನೀಡಿ ಆದೇಶ ನೀಡಿದೆ.

ಈ ಕುರಿತು ಇಂದು ಹೈಕೋರ್ಟ್‌ಗೆ ಮಾಹಿತಿ ನೀಡಿದ ಹೆಚ್ಚುವರಿ ಅಡ್ವೋಕೇಟ್ ಜನರಲ್ ಧ್ಯಾನ್ ಚಿನ್ನಪ್ಪ ಅವರು, ಜನಾರ್ದನ ರೆಡ್ಡಿ ಆಸ್ತಿ ಜಪ್ತಿಗೆ ರಾಜ್ಯ ಸರ್ಕಾರ ಈಗಾಗಲೇ ಆದೇಶ ನೀಡಿದೆ. ಗೃಹ ಇಲಾಖೆಯಿಂದ ಸಿಬಿಐಗೆ ಅನುಮತಿ ನೀಡಿ ಆದೇಶಿಸಲಾಗಿದೆ ಎಂದು ತಿಳಿಸಿದರು.

ಬಳಿಕ ಹೈಕೋರ್ಟ್, ತಕ್ಷಣವೇ ಸಿಬಿಐ ತನ್ನ ಪ್ರಕ್ರಿಯೆ ಮುಂದುವರಿಸಬೇಕು. ರೆಡ್ಡಿ ಅವರ ಆಸ್ತಿ ಜಪ್ತಿಗೆ ಕ್ರಮ ತೆಗೆದುಕೊಳ್ಳಿ ಎಂದು ಸಿಬಿಐಗೆ ಆದೇಶಿಸಿದೆ.

ಹೊಸದಾಗಿ ಪತ್ತೆಯಾದ ರೆಡ್ಡಿಯ ಆಸ್ತಿ ಜಪ್ತಿಗೆ ರಾಜ್ಯ ಸರ್ಕಾರ ಅನುಮತಿ ನೀಡಿದ ಕಾರಣ ಸಿಬಿಐ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಇತ್ಯರ್ಥಗೊಳಿಸಿದೆ.

ವಿದ್ಯುತ್ ವ್ಯತ್ಯಯ

ಮೈಸೂರು,ಜ.12–ನಾಚನಹಳ್ಳಿ ಫೀಡರ್‌ನಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಯನ್ನು ಜ.13ರಂದು ಬೆಳಗ್ಗೆ 10ರಿಂದ ಸಂಜೆ 4.30ರವರೆಗೆ ಹಮ್ಮಿಕೊಂಡಿದ್ದು, ನಾಚನಹಳ್ಳಿ ಪಾಳ್ಯ, 'ಡಿ' ಬ್ಲಾಕ್, ನವೋದಯ ಬಡಾವಣೆ, ಜೆ.ಪಿ.ನಗರ ಕೊನೆಯ ಬಸ್ ನಿಲ್ದಾಣ, ಪೊಲೀಸ್ ಬೂತ್ ಸರ್ಕಲ್, ಕವಿತಾ ಬೇಕರಿ ಹತ್ತಿರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚೆಸ್ಕಾಂ ಪ್ರಕಟಣೆ ತಿಳಿಸಿದೆ.



ರಾಯಚೂರು ಜಿಲ್ಲೆ, ದೇವದುರ್ಗ ತಾಲೂಕಿನ ತಿಂಥಣಿ ಬ್ರಿಡ್ಜ್‌ನಲ್ಲಿರುವ ಶ್ರೀ ಕಾಗಿನೆಲೆ ಮಹಾಸಂಸ್ಥಾನ ಮಠದಲ್ಲಿ ಆಯೋಜಿಸಿದ್ದ 'ಹಾಲುಮತ ಸಂಸ್ಕೃತಿ ಮಹಾ ವೈಭವ' ಕಾರ್ಯಕ್ರಮದಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷರಾದ ಬಿ.ಸುಬ್ರಹ್ಮಣ್ಯ ಮತ್ತಿತರರ ಗಣ್ಯರು ಭಾಗವಹಿಸಿದ್ದರು.



ಸರ್ಕಾರದಿಂದ ಸಚಿವ ಸ್ಥಾನಮಾನದ ಗೌರವ ಪಡೆದಿರುವ ರಘು ಕೌಟಿಲ್ಯ ಅವರನ್ನು ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವ ಮುರುಗೇಶ್ ನಿರಾಣಿ ಅಭಿನಂದಿಸಿದರು. ಈ ವೇಳೆ ಮುರುಗೇಶ್ ನಿರಾಣಿ ಅಭಿಮಾನಿ ಬಳಗದವರು ಹೊರತಂದಿರುವ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಬಿಜೆಪಿ ಮುಖಂಡ ಕೊಟ್ರೇಶ್ ಮತ್ತಿತರರಿದ್ದರು.



ಸ್ವಾಮಿ ವಿವೇಕಾನಂದರ ಜಯಂತಿಯ ನಿಮಿತ್ತ ಮೈಸೂರಿನ ಕುವೆಂಪುನಗರದ ಶ್ರೀ ವಿವೇಕಾನಂದ ಕ್ರೀಡಾಂಗಣದಲ್ಲಿ ರಾಷ್ಟ್ರೀಯ ಯುವದಿನ ಆಚರಿಸಲಾಯಿತು. ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಕುವೆಂಪು ಯೂತ್ಸ್ ತಂಡಕ್ಕೆ ಕ್ರೀಡಾ ಸಾಮಾಗ್ರಿಗಳನ್ನು ನೀಡಿ ಪ್ರೋತ್ಸಾಹಿಸಿದರು. ಕಾಂಗ್ರೆಸ್ ಮುಖಂಡ ಹೇಮಂತ್ ಗೌಡ, ವಾಲಿಬಾಲ್ ತರಬೇತುದಾರ ಡಾ.ಧರ್ಮೇಶ್, ರಾಜೇಶ್, ಮಂಜುಳಾ, ಚೇತನ್, ಕಿರಣ್, ರಜತ್, ಸಚಿನ್ ಮತ್ತಿತರರಿದ್ದರು.

ನಲ್ಲೂರು ವ್ಯಾಪ್ತಿಯಲ್ಲಿ ಉಪಟಳ: ಕಾಡಾನೆ ಸೆರೆಗೆ ಕಾರ್ಯಾಚರಣೆ

ಸಿದ್ದಾಪುರ, ಜ.12– ಚಟ್ಟಳ್ಳಿ, ಕಂಡೆ ಕೆರೆ, ಅತ್ತೂರು, ನಲ್ಲೂರು ಭಾಗದಲ್ಲಿ ಬೀಡು ಬಿಟ್ಟು ಅಪಾರ ಪ್ರಮಾಣದ ಕೃಷಿ ಫಸಲು ನಾಶ ಮಾಡುವ ಮೂಲಕ ಆತಂಕ



ಸೃಷ್ಟಿ ಮಾಡಿರುವ ಕಾಡಾನೆ ಸೆರೆಗೆ ಅರಣ್ಯ ಇಲಾಖೆ ಸಜ್ಜಾಗಿದೆ.

ಕಾರ್ಮಿಕರ ಮೇಲೂ ದಾಳಿ ಮಾಡಿ ಹಾಡಹಗಲಿ ನಲ್ಲೂ ಕಾಣಿಸಿಕೊಳ್ಳುವ ಮೂಲಕ ವಾಹನ ಸವಾರರಿಗೂ ಭಯ ಹುಟ್ಟಿಸುತ್ತಿದ್ದ ಕಾಡಾನೆಯನ್ನು ಸೆರೆ ಹಿಡಿಯುವ ಕಾರ್ಯಾಚರಣೆಗೆ ಮುಂದಾಗಿದ್ದು, ಈಗಾಗಲೇ ನಲ್ಲೂರು ಬಳಿ ಕಾರ್ಯಾಚರಣೆಗೆ ಸಿದ್ಧತೆ ಕೈಗೊಂಡಿದ್ದಾರೆ. ದುಬಾರೆ ಶಿಬಿರದ 6 ಸಾಕಾನೆಗಳಾದ ಪ್ರಶಾಂತ, ಸುಗ್ರೀವ, ಹರ್ಷ, ಶ್ರೀರಾಮ್, ವಿಕ್ರಂ, ಈಶ್ವರ ಎಂಬ ಸಾಕಾನೆಗಳನ್ನು ಕಾರ್ಯಾಚರಣೆಗೆ ಬಳಸಿಕೊಳ್ಳಲಾಗುತ್ತಿದ್ದು, ಅಧಿಕಾರಿಗಳು ಹಾಗೂ 50ಕ್ಕೂ ಹೆಚ್ಚು ಸಿಬ್ಬಂದಿಗಳು ಸ್ಥಳದಲ್ಲಿ ಠಿಕಾಣಿ ಹೂಡಿದ್ದಾರೆ.

ಜಿಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎನ್ ಮೂರ್ತಿ ಮಾರ್ಗದರ್ಶನದಲ್ಲಿ ಮಡಿಕೇರಿ ವಿಭಾಗದ ಅರಣ್ಯ ಉಪ ಸಂರಕ್ಷಣಾಧಿಕಾರಿ ಎ.ಟಿ.ಪೂವಯ್ಯ, ಸೋಮವಾರಪೇಟೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗೋಪಾಲ್, ಕುಶಾಲನಗರ ವಲಯ ಅರಣ್ಯ ಅಧಿಕಾರಿ ಕೆ.ವಿ.ಶಿವರಾಮ್, ಉಪ ವಲಯ ಅರಣ್ಯಾಧಿಕಾರಿಗಳಾದ ಕೂಡಕಂಡಿ ಸುಬ್ರಾಯ, ಕನ್ನಂಡ ರಂಜನ್, ಅನಿಲ್ ಡಿಸೋಜ, ಸಿಬ್ಬಂದಿಗಳು ಸ್ಥಳದಲ್ಲಿ ವಾಸ್ತವ್ಯ ಹೂಡಿದ್ದಾರೆ.

ಜ.21, ವಿರಾಜಪೇಟೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ



ಸಮ್ಮೇಳನದ ಲಾಂಛನ ಬಿಡುಗಡೆಗೊಳಿಸಿದ ಶಾಸಕ ಬೋಪಯ್ಯ

ವಿರಾಜಪೇಟೆ, ಜ.12– ವಿರಾಜಪೇಟೆ ತಾಲೂಕಿನ ಗಡಿ ಭಾಗದಲ್ಲಿ ಕನ್ನಡ ನಾಡು–ನುಡಿ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಜ.21ರಂದು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಏರ್ಪಡಿಸಲಾಗಿದ್ದು, ಯಶಸ್ವಿಗೊಳಿಸುವಂತೆ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾದ ಶಾಸಕ ಕೆ.ಜಿ.ಬೋಪಯ್ಯ ತಿಳಿಸಿದ್ದಾರೆ.

ವಿರಾಜಪೇಟೆ ಬಳಿಯ ಬೇಟೋಳಿ ಮತ್ತು ಆರ್ಜಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಬೇಟೋಳಿ ಕೃಷಿಪತ್ತಿನ ಸಹಕಾರ ಸಂಘದ ಸಭಾಂಗಣದಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಸಮ್ಮೇಳನದ ಲಾಂಛನ ಬಿಡುಗಡೆಗೊಳಿಸಿ ಮಾತನಾಡಿ, ಸಮ್ಮೇಳನಕ್ಕೆ ನಮ್ಮ ಸಹಕಾರ ಸದಾ ಇರುತ್ತದೆ. ಎಲ್ಲಾ ಜನರ ಸಹಕಾರವು ಅಗತ್ಯವಾಗಿದೆ ಎಂದರು. ಸಾಹಿತ್ಯ ಪರಿಷತ್‌ನ ನಿಕಟಪೂರ್ವ ಅಧ್ಯಕ್ಷ ಟಿ.ಪಿ.ರಮೇಶ್ ಮಾತನಾಡಿ, ವಿರಾಜಪೇಟೆ ತಾಲೂಕಿನಲ್ಲಿ ಇದು 9ನೇ ಸಮ್ಮೇಳನ. ಗಡಿ ಭಾಗದಲ್ಲಿ ಕನ್ನಡ ಸಾಹಿತ್ಯವನ್ನು ಬೆಳೆಸುವ ನಿಟ್ಟಿನಲ್ಲಿ ಅತ್ಯಂತ ಯಶಸ್ವಿವಾಗಿ ಸಮ್ಮೇಳನ ನಡೆಯಬೇಕಾಗಿದೆ. ಜ.21 ರಂದು ಬೆಳಿಗ್ಗೆ 8.30ಕ್ಕೆ ಧ್ವಜಾರೋಹಣ ನಂತರ ಸ್ತಬ್ಧ ಚಿತ್ರ ಹಾಗೂ ಪೂರ್ಣ ಕುಂಭದೊಂದಿಗೆ ಮೆರವಣಿಗೆ ನಡೆಯಲಿದೆ. ಬಳಿಕ ದ್ವಾರಗಳ ಉದ್ಘಾಟನೆ, ಸಭಾ ಕಾರ್ಯಕ್ರಮಗಳು ಹಾಗೂ ಕನ್ನಡ ಸಾಹಿತ್ಯದ ಬಗ್ಗೆ ಹೆಚ್ಚು ಒತ್ತು ನೀಡುವಂತ ಹಾಡುಗಳಿಗೆ ಅವಕಾಶ ನೀಡಲಾಗುವುದು ಎಂದರು.

ಸಮ್ಮೇಳನದಲ್ಲಿ ಸ್ತ್ರೀಶಕ್ತಿ, ಸ್ವ ಸಹಾಯ ಸಂಘಗಳು, ಗ್ರಾಮಾಭಿವೃದ್ಧಿ ಯೋಜನೆಯ ಸದಸ್ಯರು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಲಿದ್ದು, ವ್ಯವಸ್ಥಿತವಾಗಿ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್ ಮಾತನಾಡಿ, ಸಮ್ಮೇಳನ ಯಶಸ್ವಿಯಾಗಿ ನಡೆಯಲಿ ಎಂದು ಶುಭ ಹಾರೈಸಿದರು. ಕನ್ನಡ ಸಾಹಿತ್ಯ ಪರಿಷತ್ ವಿರಾಜಪೇಟೆ ತಾಲೂಕು ಅಧ್ಯಕ್ಷ ಡಿ.ಪಿ.ರಾಜೇಶ್ ಪ್ರಾಸ್ತಾವಿಕವಾಗಿ ಮಾತನಾಡಿ, ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಎಲ್ಲಾ ತಯಾರಿ ನಡೆಸಿದ್ದು, ಅಂದು ಬೇಟೋಳಿ ಮತ್ತು ಆರ್ಜಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಶಾಲೆಗಳ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸಮ್ಮೇಳನದಲ್ಲಿ ಭಾಗವಹಿಸುವಂತೆ ತಿಳಿಸಲು ಶಾಸಕ ಬೋಪಯ್ಯ ಅವರನ್ನು ಮನವಿ ಮಾಡಿದಾಗ ಅದಕ್ಕೆ ಅವರು ಒಪ್ಪಿಗೆ ನೀಡಿದರು.

ಮೊದಲಿಗೆ ಸಾಹಿತಿ ಸಾರಾ ಅಬೂಬಕರ್ ಅವರ ನಿಧನಕ್ಕೆ ಸಭೆಯಲ್ಲಿ ಸಂತಾಪ ಸೂಚಿಸಲಾಯಿತು. ಪರಿಷತ್ ನಿಕಟಪೂರ್ವ ಅಧ್ಯಕ್ಷ ಮದೂಶ್ ಪೂವಯ್ಯ, ಸ್ಥಳೀಯ ಗ್ರಾಪಂ ಅಧ್ಯಕ್ಷೆ ಯಶೋಧ ಮತ್ತು ಪಾರ್ವತಿ, ಪಿಡಿಓ ಮಣಿ, ಜಿಪಂ ಮಾಜಿ ಸದಸ್ಯ ಶಶಿ ಸುಬ್ರಮಣಿ, ತಾಪಂ ಮಾಜಿ ಸದಸ್ಯ ಬಿ.ಎಂ.ಗಣೇಶ್, ಡಿಸಿಸಿ ಬ್ಯಾಂಕ್ ಜಿಲ್ಲಾ ನಿರ್ದೇಶಕ ರಘುನಾಣಯ್ಯ, ಮೊರಾರ್ಜಿ ದೇಸಾಯಿ ಶಾಲಾ ಪ್ರಾಂಶುಪಾಲೆ ಮಮತಾ, ಪರಿಷತ್‌ನ ಕೋಶಾಧಿಕಾರಿ ಕೆ.ಸಿ.ಶಭರೀಶ್ ಸೇರಿದಂತೆ ಎಲ್ಲಾ ಸದಸ್ಯರುಗಳು ಭಾಗವಹಿಸಿದ್ದರು.

ಸಾಹಿತ್ಯ ಪರಿಷತ್ ಕಾರ್ಯದರ್ಶಿ ಸಾವಿತ್ರಿ ಸ್ವಾಗತಿಸಿದರೆ, ಗೌರವ ಕಾರ್ಯದರ್ಶಿ ಟೋಮಿ ಥೋಮಸ್ ನಿರೂಪಿಸಿದರು. ಸಭೆಯಲ್ಲಿ ಸಂಜೀವಿನಿ ಒಕ್ಕೂಟದ ಸದಸ್ಯರು, ಸ್ಥಳೀಯ ಶಾಲೆಗಳ ಶಿಕ್ಷಕರು, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತರು ಮತ್ತಿತರರು ಭಾಗವಹಿಸಿದ್ದರು.

ಮಡಿಕೇರಿಯಲ್ಲಿ ಕುಡಿಯುವ ನೀರಿಗೆ ಹಾಹಾಕಾರ

ನಗರಸಭೆ ಆಡಳಿತ ಮಂಡಳಿ, ಅಧಿಕಾರಿಗಳ ನಿರ್ಲಕ್ಷ್ಯ ಕಾರಣವೆಂದು ಆರೋಪ



ಮಡಿಕೇರಿ, ಜ.12– ಮಡಿಕೇರಿ ನಗರಕ್ಕೆ ಕುಡಿಯುವ ನೀರು ಒದಗಿಸುವ ಕೂಟುಹೊಳೆಯಲ್ಲಿ ನೀರಿನ ಕೊರತೆ ಉಂಟಾಗಿದ್ದು, ನೀರು ಸರಬರಾಜಿನಲ್ಲಿ ವ್ಯತ್ಯಯವಾಗುತ್ತಿದೆ. ಇದಕ್ಕೆ ನಗರಸಭೆಯ ಆಡಳಿತ ಮಂಡಳಿ ಮತ್ತು ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯವೇ ಕಾರಣವೆಂದು ನಗರ ಕಾಂಗ್ರೆಸ್ ಅಧ್ಯಕ್ಷ ಹಾಗೂ ನಗರಸಭಾ ಸದಸ್ಯ ಬಿ.ವೈ.ರಾಜೇಶ್ ಆರೋಪಿಸಿದ್ದಾರೆ.

ಕೂಟುಹೊಳೆಯ ಸ್ಥಿತಿಗತಿಯನ್ನು ಪರಿಶೀಲಿಸಿದ ನಂತರ ಮಾತನಾಡಿದ ಅವರು, ಜನವರಿ ತಿಂಗಳಾಂತ್ಯಕ್ಕೆ ಕೂಟುಹೊಳೆಯಲ್ಲಿ ನೀರಿನ ಕೊರತೆ ಎದುರಾಗುವುದು ಸಾಮಾನ್ಯ. ಇದರ ಅರಿವಿದ್ದರೂ ಕುಂಡಾಮೇಸ್ತ್ರಿ ಯೋಜನೆಯ ಪ್ರದೇಶದಿಂದ ನೀರು ಹರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳದೆ ಇರುವುದು ನಗರಸಭೆಯ ಜಡ್ಡುಗಟ್ಟಿದ ಆಡಳಿತ ವ್ಯವಸ್ಥೆಗೆ ಸಾಕ್ಷಿಯಾಗಿದೆ ಎಂದು ಟೀಕಿಸಿದರು.



ಜನವರಿಯ ನಂತರ ನೀರಿನ ಅಭಾವ ನಗರವನ್ನು ಕಾಡುತ್ತದೆ ಎನ್ನುವ ಕಾರಣಕ್ಕಾಗಿ ಕೋಟ್ಯಾಂತರ ಹಣವನ್ನು ವಿನಿಯೋಗಿಸಿ ಕುಂಡಾಮೇಸ್ತ್ರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಆದರೆ ಇದರ ಲಾಭವನ್ನು ಜನರಿಗೆ ತಲುಪಿಸುವ ಕಾರ್ಯದಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ. ಪ್ರಸ್ತುತ ವರ್ಷದ ಆರಂಭದಿಂದಲೇ ಕೂಟುಹೊಳೆಯ ನೀರು ಕ್ಷೀಣಿಸುತ್ತಾ ಬಂದಿದೆ. ಇದೇ ಕಾರಣಕ್ಕೆ ನಗರದ ಬಹುತೇಕ ಭಾಗಕ್ಕೆ ಬೇಡಿಕೆಗೆ ಅನುಗುಣವಾಗಿ ನೀರು ಸರಬರಾಜಾಗುತ್ತಿಲ್ಲ.

ದಿನದಲ್ಲಿ 15ರಿಂದ 30 ನಿಮಿಷವಷ್ಟೇ ನೀರು ಬಿಡಲಾಗುತ್ತಿದ್ದು, ಹಲವು ಮನೆಗಳ ಮೇಲಿನ ಟ್ಯಾಂಕ್‌ಗಳಿಗೆ ನೀರು ಹರಿಯುತ್ತಿಲ್ಲ. ಇನ್ನು ಕೆಲವೇ ದಿನಗಳಲ್ಲಿ ಕೂಟುಹೊಳೆಯ ನೀರು ಸಂಪೂರ್ಣವಾಗಿ ಖಾಲಿಯಾಗುವ ಆತಂಕವಿದೆ. ಆದರೂ ನಗರಸಭೆಯ ಆಡಳಿತ ವ್ಯವಸ್ಥೆ ಈ ಬಗ್ಗೆ ಗಮನ ಹರಿಸುತ್ತಿಲ್ಲ. ಕುಂಡಾಮೇಸ್ತ್ರಿ ಯೋಜನೆಯ ಮೂಲಕ ನೀರು ಹರಿಸಿ ಶೇಖರಣೆ ಮಾಡುವ ಕಾರ್ಯಕ್ಕೆ ಮುಂದಾಗುತ್ತಿಲ್ಲ ಎಂದು ರಾಜೇಶ್ ಆರೋಪಿಸಿದರು.

ಕೂಟುಹೊಳೆ ಮತ್ತು ಕುಂಡಾಮೇಸ್ತ್ರಿ ಪ್ರದೇಶದಲ್ಲಿ ತಾಂತ್ರಿಕ ಅಡಚಣೆಗಳಿದ್ದು, ಇದನ್ನು ಸರಿಪಡಿಸುವ ಕಾರ್ಯಕ್ಕೆ ತುರ್ತಾಗಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ನಿರ್ಲಕ್ಷ್ಯ ವಹಿಸಿದರೆ ಮಡಿಕೇರಿ ನಗರದ ಜನ ಕುಡಿಯುವ ನೀರಿಗೂ ಪರದಾಡುವ ಪರಿಸ್ಥಿತಿ ಎದುರಾಗಬಹುದು ಎಂದು ಆತಂಕ ವ್ಯಕ್ತಪಡಿಸಿರುವ ರಾಜೇಶ್ ಯಲ್ಲಪ್ಪ, ನಗರಸಭಾ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳು ತಕ್ಷಣ ಎರಡೂ ನೀರು ಸಂಗ್ರಹ ಕೇಂದ್ರಗಳನ್ನು ಪರಿಶೀಲಿಸಬೇಕೆಂದು ಒತ್ತಾಯಿಸಿದ್ದಾರೆ.

ವಿಜ್ಞಾನ ಕೇಂದ್ರ, ತಾರಾಲಯ ನಿರ್ಮಾಣ; ಸ್ಥಳ ಪರಿಶೀಲನೆ



ಮಡಿಕೇರಿ, ಜ.12– ಕೊಡಗು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಮತ್ತು ಮಿನಿ ತಾರಾಲಯ ನಿರ್ಮಾಣ ಸಂಬಂಧ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ಹುಬ್ಬಳ್ಳಿಯ ಸಂಕಲ್ಪ ಗ್ರೂಪ್‌ನ ಕಟ್ಟಡ ವಾಸ್ತುಶಿಲ್ಪಿ ಮುಖ್ಯಸ್ಥರಾದ ಮಹೇಶ್ ಹಿರೇಮಠ ಹಾಗೂ ಸುಷ್ಮ ಅವರು ಸ್ಥಳ ಪರಿಶೀಲನೆ ನಡೆಸಿದರು.

ನಗರದ ಹೊರ ವಲಯದ ಕೆ.ನಿಡುಗಣೆ ಗ್ರಾಪಂ ವ್ಯಾಪ್ತಿಯಲ್ಲಿರುವ ಜಾಗವನ್ನು ಪರಿಶೀಲಿಸಿದರು. ಕೆ.ನಿಡುಗಣೆ ಗ್ರಾ.ಪಂ. ವ್ಯಾಪ್ತಿಯಲ್ಲಿ 3 ಎಕರೆ ಜಾಗವಿದ್ದು, ಅದರ ಪಕ್ಕದಲ್ಲಿರುವ ಸರ್ಕಾರಿ ಜಾಗವನ್ನು ಸಹ ಗಡಿ ಗುರುತಿಸಿ ಡಿಜಿಟಲ್ ಸರ್ವೆ ಮಾಡುವಂತೆ ಜಿಲ್ಲಾಧಿಕಾರಿ ನಿರ್ದೇಶನ ನೀಡಿದರು.

ಜಿಲ್ಲಾ ಕೇಂದ್ರದಲ್ಲಿ ಕೊಡಗು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ಮಿನಿ ತಾರಾಲಯ ನಿರ್ಮಾಣ ಮಾಡಬೇಕಿದೆ ಆ ನಿಟ್ಟಿನಲ್ಲಿ ತ್ವರಿತವಾಗಿ ಕ್ರಮವಹಿಸಬೇಕು ಎಂದರು. ಹುಬ್ಬಳ್ಳಿಯ ಸಂಕಲ್ಪ ಗ್ರೂಪ್‌ನ ಕಟ್ಟಡ ವಾಸ್ತುಶಿಲ್ಪಿ ಮುಖ್ಯಸ್ಥರಾದ ಮಹೇಶ್ ಹಿರೇಮಠ ಅವರು ಕೆ.ನಿಡುಗಣೆ ಗ್ರಾ.ಪಂ. ವ್ಯಾಪ್ತಿಯ ಜಾಗವನ್ನು ಸರ್ವೆ ಮಾಡಿಸಿ ಗಡಿ ಗುರುತಿಸಬೇಕು. ನಂತರ ಮತ್ತೊಂದು ಸಾರಿ ವೀಕ್ಷಣೆ ಮಾಡಿ ಅಂತಿಮಗೊಳಿಸಲಾಗುವುದು ಎಂದರು. ನೋಡಲ್ ಅಧಿಕಾರಿ ಟಿ.ಜಿ. ಪ್ರೇಮಕುಮಾರ್ ಅವರು ಮಾತನಾಡಿ, 5 ಕೋಟಿ ರೂ. ವೆಚ್ಚದಲ್ಲಿ ಮಿನಿ ತಾರಾಲಯ ಮತ್ತು 4 ಕೋಟಿ ರೂ. ವೆಚ್ಚದಲ್ಲಿ ಕೊಡಗು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ನಿರ್ಮಾಣ ಮಾಡಬೇಕಿದೆ. ಆ ನಿಟ್ಟಿನಲ್ಲಿ ತ್ವರಿತವಾಗಿ ಕಾರ್ಯಗಳು ಆಗಬೇಕು ಎಂದು ಕೋರಿದರು. ಬಳಿಕ ನಗರದ ಸುದರ್ಶನ ಅತಿಥಿ ಗೃಹದಲ್ಲಿ ಕೊಡಗು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಮತ್ತು ಮಿನಿ ತಾರಾಲಯ ನಿರ್ಮಾಣ ಸಂಬಂಧ ರೂಪುರೇಷೆ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆಯಿತು.

ಹುಬ್ಬಳ್ಳಿಯ ಸಂಕಲ್ಪ ಗ್ರೂಪ್‌ನ ಕಟ್ಟಡ ವಾಸ್ತುಶಿಲ್ಪಿ ಮುಖ್ಯಸ್ಥರಾದ ಮಹೇಶ್ ಹಿರೇಮಠ ಅವರು ಕೊಡಗು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಪ್ರಾರಂಭವಾಗುವುದರಿಂದ ವಿದ್ಯಾರ್ಥಿಗಳಿಗೆ, ವಿಜ್ಞಾನಿಗಳಿಗೆ, ಶಿಕ್ಷಕರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ, ಭೂ ದಾಖಲೆಗಳ ಉಪ ನಿರ್ದೇಶಕ ಪಿ.ಶ್ರೀನಿವಾಸ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕ ರಂಗಧಾಮಯ್ಯ, ಕುಶಾಲನಗರ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಶೀನಪ್ಪ, ತಹಶೀಲ್ದಾರ್ ಪಿ.ಎಸ್.ಮಹೇಶ್, ಡಿಜಿಟಲ್ ಸರ್ವೆ ವಿಭಾಗದ ಕೆ.ಸಿ.ಬಿನೇಶ್, ಕಂದಾಯ ನಿರೀಕ್ಷಕ ರುದ್ರೇಶ್ ಇತರರು ಇದ್ದರು.

ಗೋಣಿಕೊಪ್ಪದಲ್ಲಿ ಬಸ್ ನಿಲ್ದಾಣ ನಿರ್ಮಾಣಕ್ಕೆ 1 ಕೋಟಿ ರೂ.

ಗೋಣಿಕೊಪ್ಪ, ಜ.12– ಗೋಣಿಕೊಪ್ಪದಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಒಂದು ಕೋಟಿ ರೂ. ಅನುದಾನ ನೀಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದಾರೆ ಎಂದು ಸ್ಥಳಿಯ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮನ್ನಕಮನೆ ಸೌಮ್ಯ ಬಾಲು ತಿಳಿಸಿದ್ದಾರೆ.



ಶಾಸಕ ಕೆ.ಜಿ. ಬೋಪಯ್ಯ ನೇತೃತ್ವದಲ್ಲಿ ಮುಖ್ಯಮಂತ್ರಿಗಳ ಗೃಹ ಕಚೇರಿಗೆ ನಿಯೋಗ ತೆರಳಿ ಮನವಿ ಮಾಡಿಕೊಂಡಿತ್ತು. ಮನವಿ ಪುರಸ್ಕರಿಸಿ ಮೊದಲ ಹಂತವಾಗಿ ಒಂದು ಕೋಟಿ ರೂಪಾಯಿ ಅನುದಾನ ನೀಡುವುದಾಗಿ ತಿಳಿಸಿದ್ದಾರೆ ಎಂದರು.

ನಿಯೋಗದಲ್ಲಿ ಜಿಪಂ ಮಾಜಿ ಸದಸ್ಯ ಸಿ.ಕೆ ಬೋಪಣ್ಣ, ಗ್ರಾಪಂ ಸದಸ್ಯರಾದ ಚೈತ್ರ ಬಿ ಚೇತನ್, ಬಿ.ಎನ್. ಪ್ರಕಾಶ್, ಕೆ. ರಾಜೇಶ್, ರಾಮಕೃಷ್ಣ, ನೂರೇರ ರತಿ ಅಚ್ಚಪ್ಪ, ಹಕೀಮ್, ವಿವೇಕ್ ರಾಯ್ಕರ್, ಪುಷ್ಪಾ ಮನೋಜ್, ಕೊಣಿಯಂಡ ಬೋಜಮ್ಮ ಉತ್ತಪ್ಪ, ರಾಮದಾಸ್, ಬಗರ್‌ಹುಕುಂ ಸಕ್ರಮೀಕರಣ ಸಮಿತಿ ತಾಲೂಕು ಅಧ್ಯಕ್ಷ ಕಾಡ್ಯಮಾಡ ಗಿರೀಶ್ ಗಣಪತಿ ಪಾಲ್ಗೊಂಡಿದ್ದರು.

ಮನೆ ಬೆಂಕಿಗಾಹುತಿ

ಮಡಿಕೇರಿ, ಜ.12– ಆಕಸ್ಮಿಕ ಅಗ್ನಿ ಅನಾಹುತದಿಂದ ಮನೆಯೊಂದು ಸಂಪೂರ್ಣ ಬೆಂಕಿಗೆ ಆಹುತಿಯಾದ ಘಟನೆ ಮಡಿಕೇರಿ ಸಮೀಪದ ಕ್ಲೋಸ್ ಬರ್ನ್ ಗ್ರಾಮದಲ್ಲಿ ನಡೆದಿದೆ.

ಅಲ್ಲಿನ ನಿವಾಸಿ ಶಿವಕುಮಾರ್ ಎಂಬುವರ ಮನೆ ಸುಟ್ಟು ಹೋಗಿದ್ದು, ಮನೆಯಲ್ಲಿದ್ದ ಗೃಹ ಬಳಕೆ ವಸ್ತುಗಳು ಸುಟ್ಟು ಕರಕಲಾಗಿದೆ. ಬೆಂಕಿಯ ತಾಪಕ್ಕೆ ಮನೆಯಲ್ಲಿದ್ದ ಸಿಲಿಂಡರ್‌ನಿಂದಲೂ ಗ್ಯಾಸ್ ಸೋರಿಕೆಯಾಗಿ ಬೆಂಕಿ ಮತ್ತಷ್ಟು ವ್ಯಾಪಿಸಲು ಕಾರಣವಾಗಿದೆ. ಮನೆಯಲ್ಲಿ ಯಾರೂ ಇಲ್ಲದ ಸಂದರ್ಭ ಈ ಘಟನೆ ನಡೆದು ಅನಾಹುತವೂ ತಪ್ಪಿದಂತಾಗಿದೆ

ಮಹದೇಶ್ವರಸ್ವಾಮಿ ಗೋಲಕ ಹಣ ಎಣಿಕೆ ಕಾರ್ಯ ಮುಂದೂಡಿಕೆ

ಚಾಮರಾಜನಗರ, ಜ.12– ಮಲೆ ಮಹದೇಶ್ವರ ಬೆಟ್ಟದ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನದ ಗೋಲಕಗಳ ಎಣಿಕೆ ಕಾರ್ಯ



ವನ್ನು ಜ.18ಕ್ಕೆ ಮುಂದೂಡಲಾಗಿದೆ.

ಗೋಲಕಗಳ ಎಣಿಕೆ ಕಾರ್ಯವನ್ನು ಜ.11ಕ್ಕೆ ನಿಗದಿಪಡಿಸಲಾಗಿತ್ತು. ಕಾರಣಾಂತರಗಳಿಂದ ಎಣಿಕೆ ಕಾರ್ಯವನ್ನು ಜನವರಿ 18ಕ್ಕೆ ಮುಂದೂಡಲಾಗಿದೆ. ಅಂದು ಬೆಟ್ಟದ ಬಸ್ ನಿಲ್ದಾಣದಲ್ಲಿರುವ ವಾಣಿಜ್ಯ ಸಂಕೀರ್ಣ ಕಟ್ಟಡದ ಮೊದಲ ಮಹಡಿಯ ವಿಶ್ರಾಂತಿ ಗೃಹದಲ್ಲಿ ಬೆಳಿಗ್ಗೆ ಸೂಕ್ತ ಪೊಲೀಸ್ ಬಂದೋಬಸ್ತ್‌ನೊಂದಿಗೆ ಗೋಲಕಗಳ ಎಣಿಕೆ ಕಾರ್ಯವನ್ನು ನಡೆಸಲಾಗುವುದು ಎಂದು ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜ.25, ಚಾ.ನಗರದಲ್ಲಿ ಕಾಂಗ್ರೆಸ್ ಪ್ರಜಾಧ್ವನಿ



ಚಾಮರಾಜನಗರ, ಜ.12– ಬಿಜೆಪಿ ಸರ್ಕಾರದ ವೈಫಲ್ಯಗಳನ್ನು ಜನರಿಗೆ ಮನವರಿಕೆ ಮಾಡುವ ಉದ್ದೇಶದಿಂದ ಕೆಪಿಸಿಸಿಯಿಂದ ರಾಜ್ಯಾದ್ಯಂತ ಪ್ರಜಾಧ್ವನಿ ಬಸ್ ಯಾತ್ರೆ ಹಮ್ಮಿಕೊಂಡಿದ್ದು, ನಗರದಲ್ಲಿ ಜ.25ರಂದು ಈ ಬಸ್ ಯಾತ್ರೆ ನಡೆಯಲಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಒಂದೇ ಬಸ್‌ನಲ್ಲಿ ಕಾಂಗ್ರೆಸ್ ವರಿಷ್ಠರು ಸಂಚರಿಸಲಿದ್ದು, ದಿನಕ್ಕೆ ಎರಡು ಜಿಲ್ಲೆಗಳಲ್ಲಿ ಕಾರ್ಯಕ್ರಮ ನಡೆಯಲಿದೆ. ಅಂದು ಬೆಳಗ್ಗೆ 10.30ಕ್ಕೆ ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿ ಹಾಗೂ ಮಧ್ಯಾಹ್ನ ಮೈಸೂರಿನಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ಅಂದಿನ ಕಾರ್ಯಕ್ರಮದಲ್ಲಿ ಜಿಲ್ಲೆಯಲ್ಲಿ 40ರಿಂದ 50 ಸಾವಿರ ಜನರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಸಂಬಂಧ ಜಿಲ್ಲೆಯ ವರಿಷ್ಠರು, ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ನಿರಂತರ ಸಭೆಗಳನ್ನು ನಡೆಸಲಾಗುತ್ತಿದ್ದು, ವ್ಯವಸ್ಥಿತವಾಗಿ ಕಾರ್ಯಕ್ರಮ ನಡೆಸಲಾಗುವುದು ಎಂದು ತಿಳಿಸಿದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವರಿಷ್ಠರಾದ ಬಿ.ಕೆ. ಹರಿಪ್ರಸಾದ್, ಕೆ.ಎಚ್. ಮುನಿಯಪ್ಪ, ಡಾ.ಜಿ. ಪರಮೇಶ್ವರ್, ಎಚ್.ಕೆ. ಪಾಟೀಲ್ ಸೇರಿದಂತೆ ಇತರೆ ನಾಯಕರು ಅಂದಿನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಎಸ್.ಎಂ. ಕೃಷ್ಣ ಅವರ ಅಧಿಕಾರ ಅವಧಿಯಲ್ಲಿ ಹಮ್ಮಿಕೊಂಡಿದ್ದ ಪಾಂಚಜನ್ಯ ಕಾರ್ಯಕ್ರಮದ ಮಾದರಿಯಲ್ಲಿ ಪ್ರಜಾಧ್ವನಿ ಕಾರ್ಯಕ್ರಮ ನಡೆಯಲಿದೆ ಎಂದರು.

ಬಿಜೆಪಿ ವಿರುದ್ಧ ವಾಗ್ದಾಳಿ: ರಾಜ್ಯದಲ್ಲಿನ ಬಿಜೆಪಿ ಸರ್ಕಾರ ಜನಪರ ಆಡಳಿತ ನಡೆಸುವಲ್ಲಿ ವಿಫಲವಾಗಿದೆ. ಬೆಲೆ ಏರಿಕೆಯಿಂದ ಜನರು ಬೇಸತ್ತಿದ್ದು, ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ನೀಡಿದ ಪ್ರಣಾಳಿಕೆಯಲ್ಲಿ ಯಾವೊಂದನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿಲ್ಲ. ಜಿಲ್ಲೆಗೆ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಸುಮ್ಮನೆ ಬಂದು ಹೋಗಿದ್ದಾರೆ. ಅಧಿಕಾರಿಗಳೊಂದಿಗೆ ಒಂದು ಸಭೆ ನಡೆಸಲಿಲ್ಲ. ಅವರಿಗೆ ಗಡಿಜಿಲ್ಲೆಯ ಅಭಿವೃದ್ಧಿಯ ಬಗ್ಗೆ ಕಾಳಜಿ ಇಲ್ಲ ಎಂಬುದು ಸಾಬೀತಾಗಿದೆ ಎಂದು ಕಿಡಿಕಾರಿದರು.

ಸರ್ಕಾರ ನಿಗಮಗಳಿಗೆ ಸರಿಯಾದ ಅನುದಾನ ನೀಡಿಲ್ಲ ಎಂದ ಅವರು, ಜಿಲ್ಲೆಯಲ್ಲಿ ಕಾಂಗ್ರೆಸ್ ಒಗ್ಗಟ್ಟಾಗಿದ್ದು, ಫೆಬ್ರವರಿ ಮೊದಲ ವಾರದಲ್ಲಿ ಕಾಂಗ್ರೆಸ್‌ನ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಆರ್. ನರೇಂದ್ರ, ಮಾಜಿ ಶಾಸಕರಾದ ಎಸ್. ಜಯಣ್ಣ, ಎಸ್. ಬಾಲರಾಜು, ಜಿಲ್ಲಾಧ್ಯಕ್ಷ ಮರಿಸ್ವಾಮಿ, ಮುಖಂಡ ಗಣೇಶ್‌ಪ್ರಸಾದ್ ಇದ್ದರು.

ಜ.16ರಂದು ಮಹಿಳಾ ಕಾಂಗ್ರೆಸ್ ಸಮಾವೇಶ

ಚಾಮರಾಜನಗರ, ಜ.12– ಬೆಂಗಳೂರಿನ ಅರಮನೆ ಮೈದಾನದಲ್ಲಿ ಜ.16ರಂದು ಕಾಂಗ್ರೆಸ್‌ನ ಮಹಿಳಾ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ತಿಳಿಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಅಂದಿನ ಕಾರ್ಯಕ್ರಮವನ್ನು ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಪ್ರಿಯಾಂಕ ಗಾಂಧಿ ಉದ್ಘಾಟಿಸಲಿದ್ದಾರೆ. ಈ ಕಾರ್ಯಕ್ರಮಕ್ಕೆ ಜಿಲ್ಲೆಯಿಂದ ಎರಡು ಸಾವಿರ ಮಹಿಳಾ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಗಣರಾಜ್ಯೋತ್ಸವ ಅದ್ಧೂರಿ ಆಚರಣೆಗೆ ನಿರ್ಧಾರ



ಹನೂರು, ಜ.12– ಈ ಬಾರಿ ಗಣರಾಜ್ಯೋತ್ಸವವನ್ನು ಅರ್ಥಪೂರ್ಣ ಹಾಗೂ ಅದ್ಧೂರಿಯಾಗಿ ಆಚರಿಸುವ ನಿಟ್ಟಿನಲ್ಲಿ ಎಲ್ಲಾ ಅಧಿಕಾರಿಗಳು ಕ್ರಮವಹಿಸಬೇಕೆಂದು ಶಾಸಕ ಆರ್.ನರೇಂದ್ರ ತಿಳಿಸಿದರು.

ಪಟ್ಟಣದ ಲೋಕೋಪಯೋಗಿ ವಸತಿ ಗೃಹದಲ್ಲಿ ಗಣರಾಜ್ಯೋತ್ಸವ ಆಚರಣೆ ಸಂಬಂಧ ಕರೆಯಲಾಗಿದ್ದ ತಾಲೂಕು ಮಟ್ಟದ ಅಧಿಕಾರಿಗಳ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಕೊರೊನಾ ಕಾರಣದಿಂದ ಕಳೆದ ಎರಡು ವರ್ಷಗಳಿಂದ ಗಣರಾಜ್ಯೋತ್ಸವ ಆಚರಣೆಯನ್ನು ಅದ್ಧೂರಿಯಾಗಿ ಆಚರಿಸಲು ಸಾಧ್ಯವಾಗಿರಲಿಲ್ಲ. ಈ ಬಾರಿ ನಮಗೆ ಅಂತಹ ವಾತಾವರಣ ಇಲ್ಲದೇ ಇರುವುದರಿಂದ ಜ.26 ಸುದಿನವನ್ನು ಸಂಭ್ರಮ ಸಡಗರದಿಂದ ಆಚರಿಸಲು ಮುಂದಾಗಬೇಕು. ಸ್ವಾತಂತ್ರ್ಯ ಹೋರಾಟಗಾರರು ಅಥವಾ ಸೇನೆಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿರುವವರನ್ನು ಕರೆದು ಗೌರವಿಸುವ ಕೆಲಸವಾಗಬೇಕು. ವಿದ್ಯಾರ್ಥಿಗಳು ಆಸೀನರಾಗಲು ನೆರಳಿನ ವ್ಯವಸ್ಥೆ ಕಲ್ಪಿಸಬೇಕು. ಪಥ ಸಂಚಲ ನಡೆಸುವ ತಂಡಗಳಿಗೆ ಬಹುಮಾನ ವಿತರಣೆ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುವ ನಿಟ್ಟಿನಲ್ಲಿ ಸಿದ್ಧತೆ ಕೈಗೊಳ್ಳಬೇಕೆಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಆನಂದಯ್ಯ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಪಪಂ.ಚುನಾಯಿತ ಜನಪ್ರತಿನಿಧಿಗಳಾದ ಗಿರೀಶ್, ಹರೀಶ್‌ಕುಮಾರ್, ಸಂಪತ್ ಕುಮಾರ್ ಉಪಸ್ಥಿತರಿದ್ದರು.

ಬೂತ್ ಮಟ್ಟದ ವಿಜಯ ಸಂಕಲ್ಪ ಅಭಿಯಾನಕ್ಕೆ ಚಾಲನೆ



ಕೊಳ್ಳೇಗಾಲ. ಜ.12– ಬೂತ್ ಮಟ್ಟದ ವಿಜಯ ಸಂಕಲ್ಪ ಅಭಿಯಾನಕ್ಕೆ ರಾಜ್ಯ ಯುವ ಮೋರ್ಚಾ ಉಪಾಧ್ಯಕ್ಷ ಶಂಕರ್ ಅವರು ದೇವಾಂಗ ಪೇಟೆ, ಮಂಜುನಾಥ ನಗರ ಸೇರಿದಂತೆ ಹಲವೆಡೆ ಗುರುವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಬಿಜೆಪಿ ಸರ್ಕಾರದ ಜನಪರ ಯೋಜನೆಗಳನ್ನು ಜನರಿಗೆ ತಿಳಿಸುವ ಮೂಲಕ ಬೂತ್ ಮಟ್ಟದಲ್ಲಿ ಪಕ್ಷ ಸಂಘಟಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು, ಬೂತ್ ಮಟ್ಟದಿಂದಲೇ ಹೆಚ್ಚಿನ ಸಂಘಟನೆ ಅಭಿಯಾನದ ಪ್ರಮುಖ ಉದ್ದೇಶ ಎಂದರು.

ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ ಅವರ ಪುತ್ರ ಜಿ.ಎನ್. ಲೋಕೇಶ್ ಮಾತನಾಡಿ, ನಾವೆಲ್ಲರೂ ಮುಂಬರುವ ಚುನಾವಣೆಗೆ ಸಜ್ಜಾಗೋಣ, ಬಿಜೆಪಿ ಕಾರ್ಯಕ್ರಮ ಜನರಿಗೆ ತಿಳಿಸುವ ಜೊತೆಗೆ ಪಕ್ಷ ಸಂಘಟನೆಗೆ ಮುಂದಾಗೋಣ, ಕಾರ್ಯಕರ್ತರನ್ನು ಹುರಿದುಂಬಿಸೋಣ ಎಂದರು.

ನಗರ ಘಟಕದ ಅಧ್ಯಕ್ಷ ರಮೇಶ್ ಮುರಾರಿ ಮಾತನಾಡಿ, ಮುಂಬರುವ ಚುನಾವಣೆಯಲ್ಲಿ ಪಕ್ಷವನ್ನು ಎಲ್ಲರೂ ಒಗ್ಗೂಡಿ ಸಂಘಟಿಸೋಣ, ಪ್ರತಿ ಬೂತ್ ಮಟ್ಟದಿಂದಲೂ ಈ ಸಂಘಟನೆ ಈಗಾಗಲೇ ಪ್ರಾರಂಭಿಸಲಾಗಿದೆ. ಪಕ್ಷ ಸಂಘಟನೆ ನಮ್ಮೆಲ್ಲರ ಧ್ಯೇಯವಾಗಬೇಕು. ಈ ನಿಟ್ಟಿನಲ್ಲಿ ಅಭಿಯಾನ ಯಶಸ್ವಿಯಾಗಿ ನಡೆಸಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಕಿನಕಹಳ್ಳಿ ರಾಚಯ್ಯ, ನಗರಸಭೆ ಸದಸ್ಯರುಗಳಾದ ಚಿಂತು ಪರಮೇಶ್, ಪವಿತ್ರ ರಮೇಶ್, ಚಿಂತು ಪರಮೇಶ್, ಶಂಕನಪುರ ಪ್ರಕಾಶ್, ಕವಿತಾ, ನಾಸೀರ್ ಪಾಶಾ, ರಾಮಕೃಷ್ಣ, ಯುವ ಮೋರ್ಚಾ ಅಧ್ಯಕ್ಷ ಕಿರಣ್, ಮುಖಂಡರುಗಳಾದ ರಮೇಶ್, ಶಂಕನಪುರ ಜಗದೀಶ್, ಬಿಜೆಪಿ ವಕ್ತಾರ ಬಸವರಾಜಪ್ಪ, ಬೂದಿತಿಟ್ಟು ಶಿಕುಮಾರ್, ಡೈರಿ ಗಿರೀಶ್, ಸುರೇಶ್ ಇನ್ನಿತರರು ಇದ್ದರು.

ತಮಿಳುನಾಡು ಬಸ್ಸಿನ ಮೇಲೆ ಸಲಗ ದಾಳಿ

ಚಾಮರಾಜನಗರ, ಜ.12– ತಮಿಳುನಾಡು ಸಾರಿಗೆ ಸಂಸ್ಥೆ ಬಸ್ ಮೇಲೆ ಒಂಟಿ ಸಲಗವೊಂದು ದಾಳಿ ಮಾಡಿರುವ ಘಟನೆ ಚಾಮರಾಜನಗರ ಸಮೀಪದ ತಮಿಳುನಾಡಿನ ಅಸನೂರು ಹತ್ತಿರದ ಗೇರೆಮಾಲ ಬಳಿ ನಡೆದಿದೆ. ಸತ್ಯಮಂಗಲಂಗೆ ತೆರಳುತ್ತಿದ್ದ ಬಸ್‌ನ ಎದುರು ಏಕಾಏಕಿ ಪ್ರತ್ಯಕ್ಷಗೊಂಡ ಆನೆಯೊಂದು ಬಸ್ ಹಿಮ್ಮೆಟ್ಟಿಸುತ್ತ ಬಂದು ಗಾಜು ಒಡೆದು ಹಾಕಿದೆ. ಆನೆ ದಾಳಿಯಿಂದ ಕಂಗೆಟ್ಟ ಪ್ರಯಾಣಿಕರು ಕಿರುಚಾಡಿದ್ದರಿಂದ ಆನೆ ಕಾಡಿನತ್ತ ತೆರಳಿದೆ. ಈ ಘಟನೆ ಬುಧವಾರ ನಡೆದಿದೆ ಎಂದು ತಿಳಿದು ಬಂದಿದೆ.



ಅಕ್ರಮ ಕಟ್ಟಡ ನಿರ್ಮಾಣ ತಡೆಯದಿದ್ದರೆ ಹೋರಾಟ

ಚಾಮರಾಜನಗರ, ಜ.12– ನಗರದ ಶ್ರೀ ಚಾಮರಾಜ ಒಡೆಯರ್ ಜನನ ಮಂಟಪ ಸ್ಮಾರಕದ ಆವರಣದಲ್ಲಿ ನಿರ್ಮಾಣವಾಗುತ್ತಿರುವ ಅಕ್ರಮ ಕಟ್ಟಡ ತಡೆಯದಿದ್ದರೆ ಚಾಮರಾಜನಗರದಿಂದ ಬೆಂಗಳೂರು ವಿಧಾನಸೌಧವರೆಗೂ ಹೋರಾಟ ಮಾಡುವುದಾಗಿ ಸುವರ್ಣ ಕನ್ನಡ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಡಿ.ಪಿ.ಗೋವಿಂದರಾಜು (ಗೌಡ) ಎಚ್ಚರಿಸಿದ್ದಾರೆ.

ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಸಮಿತಿ ವತಿಯಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಜಿಲ್ಲಾ ಕೇಂದ್ರದ ಹೃದಯ ಭಾಗದಲ್ಲಿರುವ ಶ್ರೀ ಚಾಮರಾಜ ಒಡೆಯರ್ ಅವರು ಜನಿಸಿದ ಜನ್ಮಸ್ಥಳವನ್ನು ರಾಜ್ಯ ಸರ್ಕಾರ ಐತಿಹಾಸಿಕ ಹಾಗೂ ಚಾಮರಾಜನಗರ ಸಂರಕ್ಷಿತ ಸ್ಮಾರಕವೆಂದು ಘೋಷಿಸಿದೆ. ಸದರಿ ಸ್ಮಾರಕವು ಸರ್ವೆ ನಂ 700 ಆಗಿದ್ದು 1 ಎಕರೆ 27 ಗುಂಟೆ ಪ್ರದೇಶವನ್ನು ಹೊಂದಿದೆ. ಕೆಲವು ಪ್ರಭಾವಿ ವ್ಯಕ್ತಿಗಳು ಸ್ಮಾರಕ ಹೊರತುಪಡಿಸಿ ಇದಕ್ಕೆ ಸೇರಿದ ಪ್ರದೇಶಗಳನ್ನು ಅಕ್ರಮವಾಗಿ ಖಾತೆ ಮಾಡಿಸಿಕೊಂಡು ವಾಣಿಜ್ಯ ಸಂಕೀರ್ಣಗಳನ್ನು ಮಾಡಿರುತ್ತಾರೆ. ಅಲ್ಲದೆ ಇತ್ತೀಚೆಗೆ ಸ್ಮಾರಕದ ಆವರಣದಲ್ಲಿ ಮತ್ತೆ ಅಕ್ರಮ ಕಟ್ಟಡ ತಲೆ ಎತ್ತುತ್ತಿದೆ. ಇದರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ವೇದಿಕೆಯ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.

ರೈತರ ಕಣ್ಣಲ್ಲಿ ನೀರು ಬರಿಸಿದ ಸಣ್ಣ ಈರುಳ್ಳಿ

ಬಿತ್ತನೆ ಮಾಡಿ 80 ದಿನ ಕಳೆದರೂ ಬಾರದ ಫಸಲು, ರೈತರು ಕಂಗಾಲು



ಚಾಮರಾಜನಗರ, ಜ.12– ಈರುಳ್ಳಿ ಕೊಯ್ದರೆ ಮಾತ್ರ ಕಣ್ಣೀರು ಬರುವುದಿಲ್ಲ. ಅದನ್ನು ಬೆಳೆಯುವ ರೈತನ ಕಣ್ಣಿನಲ್ಲೂ ನೀರು ಬರಿಸುತ್ತದೆ ಇಂತಹ ಘಟನೆ ತಾಲೂಕಿನ ಕಡುವಿನಕಟ್ಟೆ ಹುಂಡಿಯಲ್ಲಿ ಸಂಭವಿಸಿದೆ.

ಬಿತ್ತನೆ ಈರುಳ್ಳಿ ನಾಟಿ ಮಾಡಿ 80 ದಿನವಾದರು ಫಸಲು ಬರದೆ ರೈತ ಕಂಗಾಲಾಗಿದ್ದಾರೆ. ಗ್ರಾಮದ ಲೇಟ್ ಜವನೇಗೌಡರ ಪುತ್ರರಾದ ನಾಗರಾಜು ಮತ್ತು ಬಸವಣ್ಣ ಅವರು ತಮ್ಮ ಮೂರು ಎಕರೆ ಜಮೀನಿನಲ್ಲಿ ಸಣ್ಣ ಈರುಳ್ಳಿ ನಾಟಿ ಮಾಡಿ ಕೈ ಸುಟ್ಟುಕೊಂಡಿದ್ದಾರೆ. ಬಿತ್ತನೆ ನಾಟಿ ಈರುಳ್ಳಿಗೆ ಕ್ವಿಂಟಾಲ್ ಒಂದಕ್ಕೆ 7 ಸಾವಿರ ರೂ. ನೀಡಿ, 8 ಕ್ವಿಂಟಾಲ್ ನಾಟಿ ಈರುಳ್ಳಿಯನ್ನು ಖರೀದಿಸಿ ಜಮೀನಿನಲ್ಲಿ ನಾಟಿ ಮಾಡಿದ್ದಾರೆ. ಇದಕ್ಕೆ ಬೇಕಾದ ಗೊಬ್ಬರ, ಕ್ರಿಮಿನಾಶಕ ಸೇರಿದಂತೆ ಗೊಬ್ಬರದ ಅಂಗಡಿಯವರು ನೀಡುವ ಎಲ್ಲ ರೀತಿಯ ಔಷಧಿಗಳನ್ನು ಲಕ್ಷಾಂತರ ರೂ. ಕೊಟ್ಟು ಖರೀದಿ ಮಾಡಿ ಕಾಲಕಾಲಕ್ಕೆ ಸಿಂಪಡಣೆ ಮಾಡಿದ್ದಾರೆ. ಇಷ್ಟಾಗಿ ಫಸಲು ಬಹಳ ಅದ್ಭುತವಾಗಿದೆ ಬಂದಿದೆ. ಆದರೆ, ಈರುಳ್ಳಿ ಮಾತ್ರ ಭೂಮಿಯಲ್ಲಿ ಇಲ್ಲ. ಎಲ್ಲವು ಸಹ ಬೇರಿನಿಂದ ಕೂಡಿದ್ದು ರೈತನಿಗೆ ಒಂದು ತಾನು ಹಾಕಿದ ಈರುಳ್ಳಿ ಸಹ ಸಿಗದಂತಾಗಿದೆ.

ರೈತರಾದ ನಾಗರಾಜು ಮತ್ತು ಬಸವಣ್ಣ ಅವರು ಸುಮಾರು ನಾಲ್ಕು ಲಕ್ಷ ರೂಗೂ ಹೆಚ್ಚು ಹಣವನ್ನು ಸಾಲ ಮಾಡಿ ಸಣ್ಣ ಈರುಳ್ಳಿ ಬೆಳೆದಿದ್ದಾರೆ. ಅವರ ನಿರೀಕ್ಷೆಯಂತೆ 80 ದಿನಕ್ಕೆ ಬರುವ ಫಸಲು ಆದಾಯ ಕನಿಷ್ಠ 8 ಲಕ್ಷ ರೂ. ಆಗಬೇಕಾಗಿತ್ತು. ಈಗಿನ ದರದಲ್ಲಿ ಅಷ್ಟು ಹಣವು ಸಹ ಅವರ ಕೈ ಸೇರಬೇಕಾಗಿತ್ತು. ಬೆಳೆದ ಫಸಲಿನಲ್ಲಿ ಯಾವ ವ್ಯತ್ಯಾಸವಾಗಿದೆ ಎಂಬುವುದೇ ಅವರಿಗೆ ಅರ್ಥವಾಗುತ್ತಿಲ್ಲ. ಎಲ್ಲವನ್ನು ಕ್ರಮಬದ್ಧವಾಗಿ ಬೇಸಾಯ ಮಾಡಿದ್ದರೂ ಸಹ ಫಸಲು ಬಂದಿಲ್ಲ ಎಂಬ ಚಿಂತೆ ಹಾಗೂ ಸಾಲಗಾರರಿಗೆ ಏನು ಉತ್ತರ ನೀಡಲಿ ಎಂಬ ಧಾವಂತದಲ್ಲಿ ಇದ್ದಾರೆ.

ಸೂಕ್ತ ಪರಿಹಾರಕ್ಕೆ ರೈತರ ಆಗ್ರಹ: ಸರ್ಕಾರ ರೈತರಿಗೆ ವ್ಯವಸಾಯ ಮಾಡಿ ಲಾಭ ಪಡೆಯಿರಿ. ಎಂದು ಹೇಳುವ ಮೂಲಕ ಅನೇಕ ಸವಲತ್ತು ಮತ್ತು ಮಾರ್ಗದರ್ಶನವನ್ನು ಇಲಾಖೆಯ ಮೂಲಕ ನೀಡುತ್ತಿದೆ. ಆದರೆ, ನಮಗೆ ಇಲಾಖೆಯಿಂದ ಯಾವ ರೀತಿಯ ಸ್ಪಂದನೆಯೂ ಇಲ್ಲ. ಕಚೇರಿಗೆ ಹೋದರು ನಮ್ಮನ್ನು ಹೇಳುವವರು ಯಾರೂ ಇಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಹೀಗಾಗಿ ಕೂಡಲೇ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಬೆಳೆ ಪರಿಶೀಲನೆ ಮಾಡಬೇಕು. ತಮಗಾಗಿರುವ ನಷ್ಟವನ್ನು ಭರಿಸಬೇಕು ಎಂದು ಸಂಕಷ್ಟದಲ್ಲಿರುವ ರೈತರಾದ ನಾಗರಾಜು ಬಸವಣ್ಣ ಮನವಿ ಮಾಡಿದರು.

ಇದು ನಮ್ಮ ಒಬ್ಬರ ರೈತರ ಕಥೆ ಅಲ್ಲ. ಬಹಳಷ್ಟು ರೈತರು ಸಣ್ಣ ಈರುಳ್ಳಿ ಬಿತ್ತನೆ ಮಾಡಿ, ಫಸಲು ಬಂದಿಲ್ಲ. ಇದನ್ನು ಕಟಾವು ಮಾಡುವ ಹಣ ಸಹ ದೊರೆಯುತ್ತಿಲ್ಲ. ಬಹಳಷ್ಟು ನಷ್ಟ ಉಂಟಾಗಿ, ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಇದಕ್ಕೆ ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲನೆ ಮಾಡಿ, ನಷ್ಟವನ್ನು ಭರಿಸಿಕೊಡಬೇಕು. ಇಂಥ ಘಟನೆಗಳಿಂದ ರೈತರು ಅತ್ಮಹತ್ಯೆ ಹಾದಿ ಹಿಡಿಯುತ್ತಿದ್ದಾರೆ. ಇದನ್ನು ತಪ್ಪಿಸಲು ಸರ್ಕಾರ ಸೂಕ್ತ ಪರಿಹಾರ ನೀಡಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಸಂಕ್ರಾಂತಿ ನಂತರ ಸರ್ಕಾರದಲ್ಲಿ ಭಾರೀ ಬದಲಾವಣೆ

● ಬಿಜೆಪಿ ರಾಜ್ಯಾಧ್ಯಕ್ಷರೂ ಬದಲು ● ಪಕ್ಷದ ವರಿಷ್ಠರ ನಿರ್ಧಾರ

ಬೆಂಗಳೂರು, ಜ.12(ಕೆಎಂಶಿ)– ಸಂಕ್ರಮಣದ ನಂತರ ಪಕ್ಷ ಮತ್ತು ಸರ್ಕಾರದಲ್ಲಿ ಮಹತ್ತರ ಬದಲಾವಣೆ ತಂದು ಮುಂಬರುವ ವಿಧಾನಸಭೆ ಚುನಾವಣೆ ಎದುರಿಸಲು ಬಿಜೆಪಿ ವರಿಷ್ಠರು ನಿರ್ಧರಿಸಿದ್ದಾರೆ. ಜ.16ರಿಂದ 18ರೊಳಗೆ ರಾಜ್ಯ ಬಿಜೆಪಿ ಮತ್ತು ಸರ್ಕಾರದಲ್ಲಿ ಭಾರೀ ಬದಲಾವಣೆಯಾಗಲಿದೆ. ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಬದಲಾವಣೆ ಆಗಲಿದ್ದು, ವರ್ಚಸ್ವಿ ನಾಯಕರೊಬ್ಬರು ಆ ಸ್ಥಾನವೇರಲಿದ್ದಾರೆ. ಅಲ್ಲದೆ, ಪಕ್ಷದ ಸಂಘಟನೆಯಲ್ಲೂ ಕೆಲವು ಮಹತ್ತರ ಬದಲಾವಣೆ ಆಗಲಿದೆ. ವಿಧಾನಸಭೆ ಚುನಾವಣೆ ಹೊಸ್ತಿಲಲ್ಲಿದ್ದರೂ ಸಂಪುಟದಲ್ಲಿ ಕೆಲವು ಬದಲಾವಣೆ ಮಾಡಿ ಆಡಳಿತಕ್ಕೆ ಚುರುಕು ಮುಟ್ಟಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಅಧಿಕಾರ ನೀಡಲಾಗಿದೆ. ಅದರಂತೆ ಕೆಲವು ಸಮುದಾಯದಲ್ಲಿ ಪ್ರಭಾವಿಗಳಾಗಿರುವ ಶಾಸಕರು ಮೂರು–ನಾಲ್ಕು ತಿಂಗಳ ಮಟ್ಟಿಗೆ ಸಚಿವರಾಗುತ್ತಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ಇತ್ತೀಚಿನ ರಾಜ್ಯ ಭೇಟಿ ಸಂದರ್ಭದಲ್ಲಿ ವಸತಿ ಸಚಿವ ವಿ.ಸೋಮಣ್ಣ ಅವರ ನಿವಾಸದಲ್ಲಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್, ರಾಜ್ಯ ಸಂಘಟನಾ ಕಾರ್ಯದರ್ಶಿ ಅರುಣ್ ಜತೆ ವಿಧಾನಸಭೆ ಚುನಾವಣೆಗೆ ಸಂಬಂಧಿಸಿದ ಚರ್ಚೆ ಸಂದರ್ಭದಲ್ಲಿ ಈ ರೀತಿ ಬದಲಾವಣೆ ಮಾಡಿಕೊಂಡು ಚುನಾವಣೆಗೆ ತೆರಳಲು ತೀರ್ಮಾನಿಸಿದ್ದಾರೆ.

ಒಂದನೇ ಪುಟದಿಂದ

ಅಧಿಕಾರಿಗಳ ವರ್ಗಾವಣೆ ಮಾಡಿಸಿದ್ದೇನೆ...

ಮೈಸೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ ಎಂದು ಹೇಳಿದ್ದಾನೆ. 2005ನೇ ಸಾಲಿನಲ್ಲಿ ಮೈಸೂರಿನ ಕುವೆಂಪುನಗರ ಮತ್ತು ಇಲವಾಲ ಪೊಲೀಸ್ ಠಾಣೆಗಳಲ್ಲಿ ತನ್ನ ವಿರುದ್ಧ ವೇಶ್ಯಾವಾಟಿಕೆ ಪ್ರಕರಣಗಳು ದಾಖಲಾಗಿದ್ದು, ಈ ಪ್ರಕರಣಗಳು ನ್ಯಾಯಾಲಯದಲ್ಲಿ ಖುಲಾಸೆಯಾಗಿದೆ ಎಂದು ಹೇಳಿರುವ ಆತ, ತಾನು ಉಪಯೋಗಿಸುತ್ತಿದ್ದ ಮೊಬೈಲ್‌ಗಳಲ್ಲಿ ಒಂದನ್ನು ಮೈಸೂರು ಮೂಲದ ಸ್ನೇಹಿತ ಗಣೇಶ್ ಬಾಬು ಹೆಸರಿನಲ್ಲಿ ಹಾಗೂ ಮತ್ತೊಂದನ್ನು ಹೊಳೆನರಸೀಪುರ ಮೂಲದ ಸ್ನೇಹಿತ ನಟೇಶ್ ಹೆಸರಿನಲ್ಲಿ ಖರೀದಿಸಿರುವುದಾಗಿ ಹೇಳಿಕೆಯಲ್ಲಿ ತಿಳಿಸಿರುವ ಆತ, ತಾನು ಬೇರೆಯವರ ಹೆಸರಿನ ಸಿಮ್ ಕಾರ್ಡ್ ಬಳಸುವುದನ್ನು ಒಪ್ಪಿಕೊಂಡಿದ್ದಾನೆ. ಸುಮಾರು ಮೂರ್‍ನಾಲ್ಕು ವರ್ಷಗಳಿಂದ ಬಿಜೆಪಿ ಕಾರ್ಯಕರ್ತನಾಗಿದ್ದು, ಆ ಪಕ್ಷದ ಸಂಸದರು, ಶಾಸಕರು ಮತ್ತು ಮುಖಂಡರು ತನಗೆ ಪರಿಚಯವಿದೆ ಎಂದಿರುವ ಸ್ಯಾಂಟ್ರೋ ರವಿ, ಮೈಸೂರು ಮೂಲದ ಗಣೇಶ್ ಬಾಬು, ರವಿಕುಮಾರ್ ಮತ್ತು ಶ್ರೀವತ್ಸ ಎಂಬುವರ ಜೊತೆ ಹಣಕಾಸು ವ್ಯವಹಾರ ಮಾಡಿಕೊಂಡಿರುವುದಾಗಿ ಹೇಳಿಕೆಯಲ್ಲಿ ತಿಳಿಸಿದ್ದಾನೆ.

ಬಿಜೆಪಿ ಕಾರ್ಯಕರ್ತನಾಗಿದ್ದು, ಸಂಸದರು, ಶಾಸಕರು ಹಾಗೂ ಮುಖಂಡರ ಪರಿಚಯವಿದ್ದುದರಿಂದ ತನಗೆ ಗೊತ್ತಿರುವ ರಾಜಕೀಯ ವ್ಯಕ್ತಿಗಳ ಸಹಾಯದಿಂದ ಅಧಿಕಾರಿಗಳನ್ನು ವರ್ಗಾವಣೆ ಮಾಡಿಸಿದ್ದೇನೆ. ಆದರೆ ಅದಕ್ಕೆ ಯಾವುದೇ ರೀತಿಯ ಕಮಿಷನ್ ಪಡೆದಿಲ್ಲ ಎಂದಿರುವ ಆತ, ಒಂದು ವರ್ಷದ ಹಿಂದೆ ಕರ್ನಾಟಕ ರಾಜ್ಯ ಗುಪ್ತವಾರ್ತೆಯಲ್ಲಿದ್ದ ಪೊಲೀಸ್ ಇನ್ಸ್‌ಪೆಕ್ಟರ್ ಜಿ.ಕೆ.ಸುಬ್ರಹ್ಮಣ್ಯ ಅವರನ್ನು ಚೆನ್ನರಾಯಪಟ್ಟಣ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಆಗಿ ಮತ್ತು ಒಂದೆರಡು ತಿಂಗಳ ಹಿಂದೆ ಹಲಗೂರು ಠಾಣೆಯ ಸಬ್ ಇನ್ಸ್‌ಪೆಕ್ಟರ್ ಆಗಿದ್ದ ರವಿಕುಮಾರ್ ಎಂಬುವರನ್ನು ಮಳವಳ್ಳಿ ಠಾಣೆಗೆ ವರ್ಗಾವಣೆ ಮಾಡಿಸಿರುವುದಾಗಿ ರಾಜಾರೋಷವಾಗಿ ತನ್ನ ಹೇಳಿಕೆಯಲ್ಲಿ ತಿಳಿಸಿದ್ದಾನೆ. 2022ರ ಜನವರಿ 19ರಂದು ಗೃಹ ಸಚಿವರ ಕಚೇರಿಯಲ್ಲಿ ಆಪ್ತ ಸಹಾಯಕರಾಗಿರುವ ವಿಕ್ರಂ ಅವರಿಗೆ ಅಶೋಕ್ ನಗರ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ವರ್ಗಾವಣೆ ವಿಚಾರಕ್ಕೆ ಸಂಬಂಧಿಸಿದಂತೆ ಮತ್ತು ಜನವರಿ 21ರಂದು ಶಿವಮೊಗ್ಗದ ಪೊಲೀಸ್ ಇನ್ಸ್‌ಪೆಕ್ಟರ್ ರಾಜೇಂದ್ರ ಅವರ ವರ್ಗಾವಣೆ ಬಗ್ಗೆ ಸಂದೇಶ ರವಾನಿಸಿರುವುದಾಗಿ ತಿಳಿಸಿರುವ ಆತ, ಶಿವಮೊಗ್ಗ ಮೂಲದವರಾದ ಬಸವರಾಜ ಒಡ್ಡಾಳ ಎಂಬುವರು ಗೃಹ ಸಚಿವರ ಆತ್ಮೀಯ ಸ್ನೇಹಿತರಾಗಿದ್ದು, ಅವರ ಮೂಲಕ ಪೊಲೀಸ್ ಇನ್ಸ್‌ಪೆಕ್ಟರ್ ಬಿ.ಬಿ.ಗಿರೀಶ್ ಅವರನ್ನು ಅಶೋಕ ನಗರ ಠಾಣೆಗೆ ವರ್ಗಾವಣೆ ಮಾಡಿಸುವ ವಿಚಾರವಾಗಿ ಸಂದೇಶ ಕಳುಹಿಸಿದ್ದಲ್ಲದೇ, ಇದೇ ಇನ್ಸ್‌ಪೆಕ್ಟರ್ ವರ್ಗಾವಣೆ ವಿಚಾರವಾಗಿ ಗೃಹ ಸಚಿವರ ಮತ್ತೋರ್ವ ಸ್ನೇಹಿತ ಶ್ರೀನಾಥ್ ಅವರಿಗೂ ಜನವರಿ 15ರಂದು ಸಂದೇಶ ರವಾನಿಸಿರುವುದಾಗಿ ತಿಳಿಸಿದ್ದಾನೆ.

ಜನವರಿ 13ರಂದು ಪೊಲೀಸ್ ಇನ್ಸ್‌ಪೆಕ್ಟರ್ ರಾಜೀವ್ ಅವರಿಗೆ ಕುಂಬಳಗೋಡು ಠಾಣೆಗೆ ವರ್ಗಾವಣೆ ವಿಚಾರವಾಗಿ ಮಾತನಾಡಲು ಸಂದೇಶ ರವಾನಿಸಿದ್ದೇನೆ. ಜನವರಿ 1 ರಂದು ರಾತ್ರಿ ಪೊಲೀಸ್ ಇನ್ಸ್‌ಪೆಕ್ಟರ್‌ಗಳನ್ನು ವರ್ಗಾವಣೆ ಮಾಡಿಸಲು ಹುದ್ದೆ ಖಾಲಿ ಇರುವ ಠಾಣೆಗಳ ಮಾಹಿತಿ ಪಡೆಯುವ ಸಲುವಾಗಿ ಡಿಜಿ ಮತ್ತು ಐಜಿಪಿ ಕಚೇರಿಯ ಅಧಿಕಾರಿ ಕಿರಣ್ ಅವರಿಗೆ ಸಂದೇಶ ರವಾನಿಸಿದ್ದೇನೆ. ಜನವರಿ 9ರಂದು ರಾತ್ರಿ ಬಿಡಿಎನಲ್ಲಿ ಕರ್ತವ್ಯದಲ್ಲಿದ್ದ ಕೆಎಎಸ್ ಅಧಿಕಾರಿ ಆನಂದ್ ಅವರನ್ನು ಮೈಸೂರಿನ ಮುಡಾಗೆ ವರ್ಗಾವಣೆ ಮಾಡುವ ಬಗ್ಗೆ ಸಂದೇಶ ರವಾನಿಸಿದ್ದೇನೆ. ಜನವರಿ 7ರಂದು ಬೆಳಗ್ಗೆ ದಕ್ಷಿಣ ವಲಯ ಐಜಿಪಿ ಕಚೇರಿಯಲ್ಲಿ ಸಬ್ ಇನ್ಸ್‌ಪೆಕ್ಟರ್ ಆಗಿದ್ದ ಮಹೇಶ್ ಅವರನ್ನು ಹಲಗೂರು ಠಾಣೆಗೆ ವರ್ಗಾವಣೆ ಮಾಡುವ ವಿಚಾರವಾಗಿ ಸಂದೇಶ ರವಾನಿಸಿದ್ದೇನೆ ಎಂದು ಸ್ಯಾಂಟ್ರೋ ರವಿ, 2022ರ ಜನವರಿ 22ರಂದು ನೀಡಿದ ಲಿಖಿತ ಹೇಳಿಕೆಯಲ್ಲಿ ತಿಳಿಸಿದ್ದಾನೆ. ಸ್ಯಾಂಟ್ರೋ ರವಿ ತನ್ನ ವಿರುದ್ಧ ವೇಶ್ಯಾವಾಟಿಕೆ ಪ್ರಕರಣಗಳು ದಾಖಲಾಗಿತ್ತು ಎಂದು ತಿಳಿಸಿದ್ದಲ್ಲದೇ, ತಾನು ವರ್ಗಾವಣೆ ದಂಧೆಯಲ್ಲಿ ತೊಡಗಿರುವುದನ್ನು, ಅಧಿಕಾರಿಗಳು ಮತ್ತು ವರ್ಗಾವಣೆ ದಂಧೆ ವಿಚಾರವಾಗಿ ಯಾವ ಮೊಬೈಲ್ ಸಂಖ್ಯೆಯಿಂದ ಯಾವ ಸಂಖ್ಯೆಗೆ ಸಂದೇಶ ರವಾನಿಸಿ ಯಾವ ಅಧಿಕಾರಿಯೊಂದಿಗೆ ವ್ಯವಹರಿಸಿದ್ದೇನೆ ಎಂಬುದನ್ನು ಸಮಯದ ಸಮೇತ ವಿವರಿಸಿದ್ದರೂ ಕೂಡ ಅಂದಿನ ರಾಜರಾಜೇಶ್ವರಿ ನಗರ ಠಾಣೆಯ ಇನ್ಸ್‌ಪೆಕ್ಟರ್ ಬಿ.ಎನ್.ಲೋಹಿತ್ ಅವರು ಯಾವುದೇ ಕ್ರಮ ಕೈಗೊಳ್ಳದೇ ಕೇವಲ ಹೇಳಿಕೆ ಪಡೆದು ಕಳುಹಿಸಿರುವುದು ತೀವ್ರ ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ. ಸ್ಯಾಂಟ್ರೋ ರವಿ ತನ್ನ ಹೇಳಿಕೆಯಲ್ಲಿ ತಿಳಿಸಿರುವಂತೆ ರಾಜಕಾರಣಿಗಳ ಸಹಕಾರದೊಂದಿಗೆ ಪೊಲೀಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿಸಿದ್ದಾನೆ. ಹೀಗಿರುವಾಗ ಆತನ ವಿರುದ್ಧ ಎಫ್‌ಐಆರ್ ದಾಖಲಿಸಲೇಬೇಕಾಗಿತ್ತು. ಅಥವಾ ವರ್ಗಾವಣೆ ದಂಧೆಯು ಭ್ರಷ್ಟಾಚಾರ ನಿಷೇಧ ಕಾಯ್ದೆಗೆ ಒಳಪಡುವುದರಿಂದ ಈ ವಿಚಾರವಾಗಿ ಅಂದಿನ ಎಸಿಬಿ (ಭ್ರಷ್ಟಾಚಾರ ನಿಗ್ರಹ ದಳ)ಗೆ ಇನ್ಸ್‌ಪೆಕ್ಟರ್ ಲೋಹಿತ್ ಅವರು ವರದಿ ಸಲ್ಲಿಸಬೇಕಾಗಿತ್ತು ಎಂದು ಹೆಸರು ಹೇಳಲಿಚ್ಛಿಸದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅರ್ಜಿ ವಿಚಾರಣೆ ಜ.17ಕ್ಕೆ ಮುಂದೂಡಿಕೆ

ವಿಚಾರಣೆಯನ್ನು ಜನವರಿ 17ಕ್ಕೆ ಮುಂದೂಡಿ ಆದೇಶ ಹೊರಡಿಸಿದರು. ವಿಚಾರಣೆ ಹಿನ್ನೆಲೆಯಲ್ಲಿ ಸ್ಯಾಂಟ್ರೋ ರವಿ ನ್ಯಾಯಾಲಯಕ್ಕೆ ಹಾಜರಾಗಬಹುದೆಂದು ನಿರೀಕ್ಷಿಸಿದ್ದ ಪೊಲೀಸ್ ಅಧಿಕಾರಿಗಳು ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಬಳಿ ಬ್ಯಾರಿಕೇಡ್ ಅಳವಡಿಸಿಕೊಂಡು ಕಾಯುತ್ತಿದ್ದರಾದರೂ, ಆತ ಬಾರದ ಕಾರಣ ಬರಿಗೈಲಿ ಹಿಂದಿರುಗಿದರು.

ಕಾರು ಚಾಲಕ ವಶಕ್ಕೆ: ಈ ಮಧ್ಯೆ ಸ್ಯಾಂಟ್ರೋ ರವಿ ಕಾರು ಚಾಲಕ ಗಿರೀಶನನ್ನು ರಾಮನಗರ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಸ್ಯಾಂಟ್ರೋ ರವಿಗಾಗಿ ರಾಮನಗರ ಜಿಲ್ಲೆಯ ರೆಸಾರ್ಟ್, ಹೋಂ ಸ್ಟೇಗಳಲ್ಲಿ ಶೋಧ ನಡೆಸುತ್ತಿದ್ದಾಗ ಆತನ ಕಾರು ಚಾಲಕ ಪತ್ತೆಯಾದ ಎಂದು ಮೂಲಗಳು ತಿಳಿಸಿವೆ. ರಾಮನಗರ ಎಸ್ಪಿ ಸಂತೋಷ್ ಬಾಬು ನೇತೃತ್ವದ ತಂಡವು ಗಿರೀಶನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದೆ. ಇಂದು ಎಸ್ಪಿ ಸಂತೋಷ್ ಬಾಬು ಅವರು ಮೈಸೂರಿಗೆ ಆಗಮಿಸಿ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರನ್ನು ಅವರ ಕಚೇರಿಯಲ್ಲಿ ಭೇಟಿ ಮಾಡಿ, ಸ್ಯಾಂಟ್ರೋ ರವಿ ಶೋಧ ಕುರಿತಂತೆ ಸುಮಾರು ಒಂದೂವರೆ ತಾಸು ಚರ್ಚೆ ನಡೆಸಿದರು. ಮಂಡ್ಯದ ಕಲ್ಲಹಳ್ಳಿಯ ಮನೆಯೊಂದರಲ್ಲಿ ನಾಲ್ಕು ದಿನಗಳ ಹಿಂದೆ ಅಡಗಿದ್ದ ಸ್ಯಾಂಟ್ರೋ ರವಿ, ಹಾಸನ ಜಿಲ್ಲೆ ಶ್ರವಣಬೆಳಗೊಳದಲ್ಲಿ, ರಾಮನಗರ ಬಳಿಯ ಫಾರಂ ಹೌಸ್‌ನಲ್ಲಿಯೂ ತಂಗಿದ್ದ ಎಂಬ ಮಾಹಿತಿಯ ಜಾಡು ಹಿಡಿದು ಪೊಲೀಸರು ಶೋಧ ನಡೆಸಿದರಾದರೂ, ಆತ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿ ಪರಾರಿಯಾಗಿದ್ದಾನೆ ಎಂದು ಹೇಳಲಾಗಿದೆ.

ಎಂಆರ್‌ಸಿ ಮೈದಾನದಲ್ಲಿ ಯೋಗಥಾನ್

ಇಂದಿನವರೆಗೆ ಸುಮಾರು 20,000 ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಲೋಕನಾಥ್, ಮೈಸೂರು ಮಹಾನಗರ ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್ ನೇತೃತ್ವದ ಅಧಿಕಾರಿಗಳು ಕಾರ್ಯಕ್ರಮ ನಡೆಯಲಿರುವ ಎಂಆರ್‌ಸಿ ಮೈದಾನದಲ್ಲಿ ಇಂದು ಸ್ಥಳ ಪರಿಶೀಲನೆ ನಡೆಸಿದಂತೆ ಚರ್ಚೆ ನಡೆಸಿದರು. ಗಣ್ಯರಿಗೆ ವೇದಿಕೆ, ಯೋಗಾಸಕ್ತರಿಗೆ ಸ್ಥಳಾವಕಾಶ, ಪ್ರವೇಶ, ನಿರ್ಗಮನ, ವಾಹನಗಳ ನಿಲುಗಡೆ, ಧ್ವನಿವರ್ಧಕ, ಪರದೆ ಅಳವಡಿಸುವುದು ಸೇರಿದಂತೆ ಅಗತ್ಯ ಸೌಲಭ್ಯ ಕಲ್ಪಿಸಲು ಪೂರ್ವ ತಯಾರಿ ಮಾಡಲು ಅಧಿಕಾರಿಗಳು ಮುಂದಾಗಿದ್ದಾರೆ.

ನಾಳೆ (ಜ.13) ಯೋಗಥಾನ್ ಕಾರ್ಯಕ್ರಮಕ್ಕೆ ಮಾರ್ಕಿಂಗ್ ಮಾಡುವ ಕಾರ್ಯ ಆರಂಭವಾಗಲಿದ್ದು, ಬ್ಯಾರಿಕೇಡ್ ಅಳವಡಿಸಲು ಸ್ಥಳ ಗುರುತಿಸಲಾಯಿತು. ಶಾಲಾ–ಕಾಲೇಜು ವಿದ್ಯಾರ್ಥಿಗಳು, ವಿವಿಧ ಯೋಗ ತರಬೇತಿ ಸಂಸ್ಥೆಗಳು, ಸಂಘ ಸಂಸ್ಥೆಗಳು, ಜೆಎಸ್‌ಎಸ್ ಯೋಗ ಪ್ರತಿಷ್ಠಾನ, ಆಯುಷ್ ಇಲಾಖೆ ಸಿಬ್ಬಂದಿಗಳು ಯೋಗಥಾನ್‌ನಲ್ಲಿ ಭಾಗವಹಿಸಲಿದ್ದು, ಅಂದು ಪಾಲ್ಗೊಳ್ಳುವವರಿಗೆ ಉಪಹಾರ, ನೀರಿನ ಸೌಲಭ್ಯ ಒದಗಿಸಲು ಜಿಲ್ಲಾಡಳಿತವು ಸಿದ್ಧತೆ ಮಾಡುತ್ತಿದೆ. ಆನ್‌ಲೈನ್ ಮತ್ತು ಆಫ್‌ಲೈನ್ ನೋಂದಣಿ ನಡೆಯುತ್ತಿರುವುದರಿಂದ ಪ್ರತೀ ದಿನ ನೋಂದಣಿ ಮಾಡಿಸಲು ಸಾರ್ವಜನಿಕರು, ವಿದ್ಯಾರ್ಥಿಗಳು, ಯುವ ಸಮೂಹದಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದೆ ಎಂದು ಎಡಿಸಿ ಆರ್. ಲೋಕನಾಥ್ ತಿಳಿಸಿದ್ದಾರೆ.

ವಿವೇಕಾನಂದರ ಜಾಗೃತಿ ಸಂದೇಶ ಸಾರಿದ ವಿದ್ಯಾರ್ಥಿಗಳು

ಎಲ್ಲರ ಗಮನ ಸೆಳೆದ 'ವಿವೇಕ ಯುವ ಜಾಗೃತಿ ರಥಯಾತ್ರೆ'





ಮೈಸೂರು, ಜ.12(ಎಂಕೆ)– ರಾಷ್ಟ್ರೀಯ ಯುವ ದಿನಾಚರಣೆ ಅಂಗವಾಗಿ ಶ್ರೀ ರಾಮಕೃಷ್ಣ ಆಶ್ರಮ, ಶ್ರೀ ರಾಮಕೃಷ್ಣ ವಿದ್ಯಾಶಾಲಾ ಹಾಗೂ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ ವತಿಯಿಂದ ಆಯೋಜಿಸಿದ್ದ 'ವಿವೇಕ ಯುವ ಜಾಗೃತಿ ರಥಯಾತ್ರೆ'ಯಲ್ಲಿ ಭಾಗವಹಿಸಿದ ನೂರಾರು ವಿದ್ಯಾರ್ಥಿಗಳು ಸ್ವಾಮಿ ವಿವೇಕಾನಂದರ ಜಾಗೃತಿ ಸಂದೇಶಗಳನ್ನು ಸಾರಿದರು.

ಯಾದವಗಿರಿಯ ಚೆಲುವಾಂಬ ಉದ್ಯಾನವನದಲ್ಲಿರುವ ಸ್ವಾಮಿ ವಿವೇಕಾನಂದರ ಪ್ರತಿಮೆಗೆ ಪುಷ್ಪನಮನ ಸಲ್ಲಿಸುವ ಮೂಲಕ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀ ಮುಕ್ತಿದಾನಂದ ಸ್ವಾಮೀಜಿ, 'ವಿವೇಕ ಯುವ ಜಾಗೃತಿ ರಥಯಾತ್ರೆ'ಗೆ ಚಾಲನೆ ನೀಡಿದರು. ಉದ್ಯಾನವನದಿಂದ ಆರಂಭಗೊಂಡ ರಥಯಾತ್ರೆ ಪಡುವಾರಹಳ್ಳಿ ಮಾರ್ಗವಾಗಿ ಮಾತೃಮಂಡಳಿ ವೃತ್ತದಿಂದ ಒಂಟಿಕೊಪ್ಪಲು ವೃತ್ತದ ಮೂಲಕ ಶ್ರೀ ರಾಮಕೃಷ್ಣ ವಿದ್ಯಾಶಾಲಾ ಆವರಣದ ವೇದಿಕೆಯವರೆಗೂ ಸಾಗಿತು.

ಶ್ರೀ ರಾಮಕೃಷ್ಣ ವಿದ್ಯಾಶಾಲಾ, ಸಿಎಫ್‌ಟಿಆರ್‌ಐ, ಮಹಾಜನ ಪ್ರೌಢಶಾಲೆ, ಶ್ರೀ ವಿವೇಕ ಬಾಲೋದ್ಯಾನ, ಶ್ರೀ ವಿವೇಕ ವಿದ್ಯಾಲಯ, ಸದ್ವಿದ್ಯಾ, ಮರಿಮಲ್ಲಪ್ಪ ನಿರ್ಮಲಾ ಕಾನ್ವೆಂಟ್, ಸೆಂಟ್ ಜೋಸೆಫ್, ಯಾದವಗಿರಿ, ಒಂಟಿಕೊಪ್ಪಲ್ ಹಾಗೂ ಪಡುವಾರಹಳ್ಳಿಯ ಸರ್ಕಾರಿ ಪ್ರೌಢಶಾಲೆಗಳ ನೂರಾರು ವಿದ್ಯಾರ್ಥಿಗಳು ರಥಯಾತ್ರೆಯಲ್ಲಿ ಭಾಗವಹಿಸಿ, ಸ್ವಾಮಿ ವಿವೇಕಾನಂದರ ಜಾಗೃತಿ ಸಂದೇಶಗಳನ್ನು ಸಾರಿದರು. ರಥಯಾತ್ರೆಯುದ್ದಕ್ಕೂ ಸ್ವಾಮಿ ವಿವೇಕಾನಂದರ ಜಾಗೃತಿ ಸಂದೇಶಗಳಿರುವ ಫ್ಲೆಕ್ಸ್‌ಗಳು ಹಾಗೂ ಭಾವಚಿತ್ರಗಳನ್ನು ಹಿಡಿದು ವಾದ್ಯಗೋಷ್ಠಿಯೊಂದಿಗೆ ಸಾಗಿದ ವಿದ್ಯಾರ್ಥಿಗಳು ಜೈಕಾರ ಕೂಗುತ್ತಾ ನೋಡುಗರಲ್ಲಿ ಜಾಗೃತಿ ಮೂಡಿಸಿದರು.


ಯುವಶಕ್ತಿ ಜಾಗೃತಿಯಾಗಬೇಕು: ರಥಯಾತ್ರೆ ಬಳಿಕ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀ ಮುಕ್ತಿದಾನಂದ ಸ್ವಾಮೀಜಿ, ಕೋಟ್ಯಾಂತರ ಯುವಕರು ಸ್ವಾಮಿ ವಿವೇಕಾನಂದರ ದಿವ್ಯ ಸಂದೇಶಗಳನ್ನು ಸ್ಮರಿಸಿಕೊಳ್ಳುವ ದಿನ ಇದಾಗಿದೆ. ಸ್ವಾಮಿ ವಿವೇಕಾನಂದರು ಯುವಕರ ಮೇಲೆ ಅಪಾರ ನಂಬಿಕೆ ಇಟ್ಟಿದ್ದರು. ಅಲ್ಲದೆ ಯುವಶಕ್ತಿ ಅತ್ಯಂತ ವಿಶಿಷ್ಟವಾದುದು ಎಂದು ನಂಬಿದ್ದರು ಎಂದು ಸ್ಮರಿಸಿದರು.

ರಾಷ್ಟ್ರೀಯ ಯುವ ದಿನಾಚರಣೆ ಬರೀ ಆಚರಣೆಗೆ ಸೀಮಿತವಾಗಬಾರದು. ಮುಖ್ಯವಾಗಿ ಯುವಕರ ಆತ್ಮಶಕ್ತಿ ಜಾಗೃತಿಯಾಗಬೇಕು. ಹಾಗೆಯೇ ದೇಶ ಮುನ್ನಡೆಯಬೇಕಾದರೆ ಯುವಶಕ್ತಿ ಜಾಗೃತಿಯಾಗಬೇಕು. ಈ ನಿಟ್ಟಿನಲ್ಲಿ ಯುವಕರು ದೇಶಕ್ಕಾಗಿ ಘನತೆ ಕಾಪಾಡುವ ಸಂಕಲ್ಪ ಮಾಡಬೇಕು ಎಂದು ತಿಳಿಸಿದ ಮುಕ್ತಿದಾನಂದ ಸ್ವಾಮೀಜಿ, ವಿವೇಕಾನಂದರು ಜ್ಞಾನವೇ ಪರಿಪೂರ್ಣವಾದುದನ್ನು ಕೊಡಬಲ್ಲದು, ನಿರ್ಭಯದಿಂದಿರಿ, ಬಡವರ ಅಥವಾ ನೊಂದವರ ಕಷ್ಟಕ್ಕೆ ಸ್ಪಂದಿಸಿ, ಭಗವಂತ ಅಥವಾ ಆತ್ಮಶಕ್ತಿಯಲ್ಲಿ ನಂಬಿಕೆ ಇಡಿ ಹಾಗೂ ದೇಶವನ್ನು ಪ್ರೀತಿಸಿ ಎಂಬ ಐದು ಸಂದೇಶಗಳನ್ನು ವಿವರಣೆ ಸಹಿತ ತಿಳಿಸಿಕೊಟ್ಟರು.


ಬಳಿಕ ವಿದ್ಯಾರ್ಥಿಗಳು ರಾಷ್ಟ್ರೀಯ ಯುವ ದಿನದ ಸಂಕಲ್ಪ ಮಾಡಿದರು. ವಿವಿಧ ಶಾಲೆಗಳ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಹಾಡು–ನೃತ್ಯದ ಮೂಲಕ ದೇಶಭಕ್ತಿಯ ಅರಿವು ಮೂಡಿಸಿದರು. ಶ್ರೀ ರಾಮಕೃಷ್ಣ ವಿದ್ಯಾಶಾಲಾ ಹಾಗೂ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ ಶ್ರೀ ಶಿವಕಾಂತನಂದ ಸ್ವಾಮೀಜಿ, ಶ್ರೀ ಮಹಾಮೇದಾನಂದ ಸ್ವಾಮೀಜಿ, ಶ್ರೀ ರಾಮಕೃಷ್ಣ ವಿದ್ಯಾಶಾಲಾ ಕರೆಸ್ಪಾಂಡೆಂಟ್ ಶ್ರೀ ಯುಕ್ತೇಶಾನಂದ ಸ್ವಾಮೀಜಿ ಮತ್ತಿತರರು ಉಪಸ್ಥಿತರಿದ್ದರು.

ದಸರಾ ಆನೆ ಗೋಪಿ ಮೇಲೆ ಮದವೇರಿದ ಕಾಡಾನೆ ದಾಳಿ: ಅಪಾಯದಿಂದ ಪಾರು

● ದುಬಾರೆ ಕ್ಯಾಂಪ್‌ನಲ್ಲೇ ಎರಡೂವರೆ ಗಂಟೆ ನಡೆದ ಕಾದಾಟ ● ಸಿಬ್ಬಂದಿಗಳ ಧೈರ್ಯ–ಸಾಹಸದಿಂದ ಬಚಾವಾದ ಗೋಪಿ ● ಪಶುವೈದ್ಯ ಡಾ.ಚೆಟ್ಟಿಯಪ್ಪ ಅವರಿಂದ ಚಿಕಿತ್ಸೆ



ದಸರಾ ಆನೆ ಗೋಪಿ ಮೇಲೆ ದಾಳಿ ನಡೆಸಿದ ಕಾಡಾನೆ



ಗಾಯಗೊಂಡಿರುವ ಗೋಪಿ

ಮೈಸೂರು, ಜ.12(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ 11 ಬಾರಿ ಭಾಗವಹಿಸಿದ್ದ ಗೋಪಿ(41)ಯ ಮೇಲೆ ಮದವೇರಿದ ಕಾಡಾನೆಯೊಂದು ದಾಳಿ ನಡೆಸಿ ಗಾಯಗೊಳಿಸಿದ್ದು, ಸತತ ಎರಡು ಗಂಟೆ ಮುಖಾಮುಖಿಯಾಗಿದ್ದ ಆನೆಗಳನ್ನು ಬೇರ್ಪಡಿಸಲು ದುಬಾರೆ ಆನೆ ಶಿಬಿರದ ಸಿಬ್ಬಂದಿಗಳು ಹರಸಾಹಸ ಮಾಡಿ ಗೋಪಿಯನ್ನು ರಕ್ಷಿಸಿದ್ದಾರೆ.

ದುಬಾರೆ ಆನೆ ಶಿಬಿರದಲ್ಲಿ ಕಟ್ಟಿದ್ದ ಗೋಪಿಯ ಮೇಲೆ ಮಂಗಳವಾರ ರಾತ್ರಿ 12.30ಕ್ಕೆ ಕಾಡಾನೆಯೊಂದು ಮುಗಿ ಬಿದ್ದಿದೆ ಗೋಪಿಯೂ ಕಾಡಾನೆಗೆ ಪ್ರತಿರೋಧ ವ್ಯಕ್ತಪಡಿಸಿದ್ದು, ಎರಡೂ ಆನೆಗಳು ಕಾದಾಟ ತೀವ್ರಗೊಳಿಸುತ್ತಿದ್ದಂತೆ ಎರಡೂ ಆನೆಗಳ ಘೀಳಿಡುವ ಶಬ್ದ ಜೋರಾಗಿ ಕೇಳಿಬಂದಿದೆ. ಕೂಡಲೇ ಜಾಗೃತಗೊಂಡ ದುಬಾರೆ ಆನೆ ಶಿಬಿರದ ಸಿಬ್ಬಂದಿಗಳು ಹಾಗೂ ಗೋಪಿಯ ಕಾವಾಡಿ ಶಿವ ಕಾಡಾನೆಯ ದಾಳಿಯಿಂದ ಗೋಪಿ ಆನೆಯನ್ನು ರಕ್ಷಣೆ ಮಾಡಲು ಪ್ರಯತ್ನಪಟ್ಟಿದ್ದಾರೆ. ಡಿಆರ್‌ಎಫ್‌ಓ ಕೆ.ಟಿ.ರಂಜನ್ ನೇತೃತ್ವದಲ್ಲಿ ದುಬಾರೆ ಆನೆ ಶಿಬಿರದ 30ಕ್ಕೂ ಹೆಚ್ಚು ಸಿಬ್ಬಂದಿ ಹಾಗೂ ರ್‍ಯಾಪಿಡ್ ರೆಸ್ಪಾನ್ಸ್ ಟೀಮ್ (ಆರ್‌ಆರ್‌ಟಿ) ಸಿಬ್ಬಂದಿಗಳು ಕಾಡಾನೆಯನ್ನು ಕಾಡಿಗಟ್ಟಲು ಪ್ರಯತ್ನಿಸಿದ್ದಾರೆ. ಆದರೆ ಮದವೇರಿದ್ದರಿಂದ ಗೋಪಿಯ ಮೇಲೆ ದಾಳಿ ಮುಂದುವರೆಸುತ್ತಿದ್ದರಿಂದ ಕಾಡಾನೆಯ ದಾಳಿಗೆ ಸರಿಸಮಾನವಾಗಿ ಪ್ರತಿರೋಧ ಒಡ್ಡಲು ಸಾಧ್ಯವಾಗುತ್ತಿರಲಿಲ್ಲ. ಇದರಿಂದ ಅಪಾಯದ ಮುನ್ಸೂಚನೆ ಕಾಡುತ್ತಿತ್ತು ಇದನ್ನು ಸೂಕ್ಷ್ಮವಾಗಿ ಗಮನಿಸಿದ ಅರಣ್ಯ ಸಿಬ್ಬಂದಿಗಳು ಪಟಾಕಿ ಸಿಡಿಸುತ್ತಾ, ಗಾಳಿಯಲ್ಲಿ ಗುಂಡು ಹಾರಿಸುತ್ತಾ ಹಾಗೂ ಬೆಂಕಿಯನ್ನು ತೋರಿಸಿ ಕಾಡಾನೆಯನ್ನು ಹಿಮ್ಮೆಟ್ಟಿಸುವ ಪ್ರಯತ್ನ ಮಾಡಿದರು. ಆದರೂ ಕಾಡಾನೆ ಹಿಂಜರಿಯದೇ ಪದೇ ಪದೆ ದಾಳಿ ಮುಂದುವರೆಸುತ್ತಲೇ ಇತ್ತು.

ಗೋಪಿ ಆನೆಯ ಕಾಲಿಗೆ ಬೇಡಿ ಹಾಕಿದ್ದರಿಂದ ಕಾಡಾನೆಯ ದಾಳಿಗೆ ಸರಿಸಮಾನವಾಗಿ ಪ್ರತಿರೋಧ ಒಡ್ಡಲು ಸಾಧ್ಯವಾಗುತ್ತಿರಲಿಲ್ಲ.

ಅಂತಿಮವಾಗಿ ಮುಂಜಾನೆ 4.50ರಲ್ಲಿ ಕಾಡಾನೆ ಗೋಪಿಯಿಂದ ಸ್ವಲ್ಪ ದೂರ ಸರಿಯುತ್ತಿದ್ದಂತೆ ಕಾರ್ಯಪ್ರವೃತ್ತರಾದ ಸಿಬ್ಬಂದಿಗಳು ಚಾಣಾಕ್ಷತನದಿಂದ ಗೋಪಿಯನ್ನು ಹಿಂದಕ್ಕೆ ಎಳೆದುಕೊಂಡಿದ್ದಾರೆ. ಸುರಕ್ಷಿತ ಸ್ಥಳಕ್ಕೆ ಗೋಪಿಯನ್ನು ಕರೆತರುತ್ತಿದ್ದಂತೆಯೇ ಮತ್ತಷ್ಟು ಉದ್ರೇಕಗೊಂಡ ಕಾಡಾನೆ, ಮತ್ತೆ ಗೋಪಿಯ ಮೇಲೆ ದಾಳಿ ಮಾಡಲು ಬಂದಿದೆ. ಈ ವೇಳೆ ಸಿಬ್ಬಂದಿಗಳು ಬೆಂಕಿಯನ್ನು ತೋರಿಸಿ ಕಾಡಾನೆಯನ್ನು ಹೆದರಿಸಿದ್ದಾರೆ. ಸಿಬ್ಬಂದಿಗಳ ಸಮಯ ಪ್ರಜ್ಞೆ ಹಾಗೂ ಸಾಹಸ ಪ್ರವೃತ್ತಿಯಿಂದ ಗೋಪಿ ಆನೆ ಪ್ರಾಣಾಪಾಯದಿಂದ ಪಾರಾಗಿದೆ.

7 ಕಡೆ ಗಾಯ, ಮುಂದುವರೆದ ಚಿಕಿತ್ಸೆ: ಕಾಡಾನೆ ದಾಳಿಗೆ ತುತ್ತಾದ ಗೋಪಿಯ ಕಿವಿ, ಪಕ್ಕೆ, ಮೊಣಕಾಲು, ಹೊಟ್ಟೆ ಬಳಿ 7 ಕಡೆ ಸಣ್ಣಪುಟ್ಟ ಗಾಯಗಳಾಗಿವೆ. ಇದರಿಂದ ಹೆಸರಾಂತ ಪಶುವೈದ್ಯರಾದ ಡಾ. ಚೆಟ್ಟಿಯಪ್ಪ ಅವರು ದುಬಾರೆ ಕ್ಯಾಂಪ್‌ಗೆ ಆಗಮಿಸಿ ಚಿಕಿತ್ಸೆನೀಡಿದ್ದಾರೆ ಇದರಿಂದ ಗೋಪಿ ಚೇತರಿಸಿಕೊಂಡಿದ್ದು, ಗುರುವಾರ ಸಂಜೆಯ ವೇಳೆ ಅದರ ಆರೋಗ್ಯದಲ್ಲಿ ಸಂಪೂರ್ಣ ಸುಧಾರಣೆ ಕಂಡಿದೆ. ಅಲ್ಲದೇ ತಾನೇ ಆಹಾರವನ್ನು ಸೇವಿಸುತ್ತಿದ್ದು, ಪ್ರಾಣಾಪಾಯದಿಂದ ಪಾರಾಗಿದೆ ಎಂದು ಪಶುವೈದ್ಯರು ತಿಳಿಸಿದ್ದಾರೆ.

ಗೋಪಿಗೂ ಮದ ಮೂಡಿಗೆರೆಯಲ್ಲಿ ಕಾಡಾನೆ ಸೆರೆ ಕಾರ್ಯಾಚರಣೆಯಲ್ಲಿ ಕರೆದುಕೊಂಡು ಹೋಗಿದ್ದ ಗೋಪಿಗೆ ಮದ ಕಾಣಿಸಿಕೊಂಡಿತ್ತು. ಡಿಸೆಂಬರ್ ಅಂತ್ಯದಲ್ಲಿ ಮದ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಗೋಪಿಯನ್ನು, ಕಾಡಾನೆ ಸೆರೆ ಕಾರ್ಯಾಚರಣೆಯಿಂದ ವಾಪಸ್ಸು ದುಬಾರೆ ಕ್ಯಾಂಪ್‌ಗೆ ಕರೆತಂದು ಕಟ್ಟಿಹಾಕಲಾಗಿತ್ತು. ಮದದ ಹಿನ್ನೆಲೆಯಲ್ಲಿ ಪುಂಡಾಟ ಮೆರೆಯಬಾರದೆಂಬ ಕಾರಣದಿಂದ ಮುಂಗಾಲಿಗೆ ಸರಪಳಿಯಿಂದ ಬೇಡಿ ಹಾಕಿ ಆರೈಕೆ ಮಾಡಲಾಗುತ್ತಿತ್ತು. ಒಂದು ವೇಳೆ ಮುಂಗಾಲಿಗೆ ಬೇಡಿ ಹಾಕಿಲ್ಲದಿರದಿದ್ದರೆ, ಗೋಪಿಯೂ ಕಾಡಾನೆಗೆ ಸರಿಯಾಗಿಯೇ ಪಾಠ ಕಲಿಸುತ್ತಿದ್ದ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಕಾಡಾನೆಯ ಸೇಡು: ಕಾಡಿಗೆ ಅಟ್ಟಿದ್ದರೂ ಪದೇ ಪದೆ ಗೋಪಿಯ ಮೇಲೆ ದಾಳಿ ನಡೆಸಲು ಎರಡು ದಿನದಿಂದಲೂ ಕಾಡಾನೆ ದುಬಾರೆ ಕ್ಯಾಂಪ್‌ಗೆ ಬರುತ್ತಲೇ ಇದೆ ಕಾಡಾನೆಯ ಸೇಡಿನ ಮನೋಭಾವವನ್ನು ಗಮನಿಸಿರುವ ಕ್ಯಾಂಪ್‌ನ ಸಿಬ್ಬಂದಿಗಳು ಹಗಲು–ರಾತ್ರಿ ಪಹರೆ ಕಾಯುವ ಸ್ಥಿತಿ ನಿರ್ಮಾಣವಾಗಿದೆ. ಎರಡೂ ದಿನದಿಂದ ಕಾಡಾನೆ ಕ್ಯಾಂಪ್‌ನತ್ತ ಸುಳಿದಾಡುತ್ತಲೇ ಇರುವುದರಿಂದ ದುಬಾರೆ ಕ್ಯಾಂಪ್‌ಗೆ ಪ್ರವಾಸಿಗರ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿದೆ.

ನೋವು ಮಾಸುವ ಮುನ್ನ..

ಕಾಡಾನೆ ಕಾಳಗದಲ್ಲಿ ನ.23ರಂದು ದಸರಾ ಮಹೋತ್ಸವದ ಮತ್ತೊಂದು ಆನೆ, ಭವಿಷ್ಯದ ಅಂಬಾರಿ ಆನೆ ಎಂದು ಭರವಸೆ ಮೂಡಿಸಿದ್ದ ಗೋಪಾಲಸ್ವಾಮಿ ಮೃತಪಟ್ಟಿತ್ತು. 13 ಬಾರಿ ಚಿನ್ನದ ಅಂಬಾರಿ ಹೊತ್ತು ಲಕ್ಷಾಂತರ ಮಂದಿಯ ಪ್ರೀತಿಗೆ ಪಾತ್ರವಾಗಿದ್ದ ಬಲರಾಮ(70) ಆನೆಯ ಮೇಲೆ ರೈತನೊಬ್ಬ ಡಿ.15ರಂದು ಗುಂಡು ಹಾರಿಸಿ ಗಾಯಗೊಳಿಸಿದ್ದ. ಈ ಎರಡು ಪ್ರಕರಣದ ನೋವು ಮಾಸುವ ಮುನ್ನವೇ, ದಸರಾ ಮಹೋತ್ಸವದ ಗೋಪಿ ಆನೆ ಮೇಲೆ ಕಾಡಾನೆ ದಾಳಿ ನಡೆಸಿರುವುದು ಅಘಾತ ತಂದಿದೆ.



ಮೈಸೂರು ಮಹಾನಗರ ಪಾಲಿಕೆ ವಲಯ ಕಚೇರಿ 7ರ ವ್ಯಾಪ್ತಿಯಲ್ಲಿರುವ ಆನೆಗುಂದಿ ಹಾಗೂ ಅಡ್ಡ ರಸ್ತೆಗಳ ಅಭಿವೃದ್ಧಿಗಾಗಿ 50 ಲಕ್ಷ ರೂ. ವೆಚ್ಚದ ಕಾಮಗಾರಿಗೆ ಶಾಸಕ ತನ್ವೀರ್ ಸೇಠ್ ಚಾಲನೆ ನೀಡಿದರು. ಈ ವೇಳೆ ಪಾಲಿಕೆ ಸದಸ್ಯರಾದ ಆರೀಫ್ ಹುಸೇನ್, ಪ್ರದೀಪ್ ಚಂದ್ರ, ಅಜೀಜ್ ಸೇಠ್ ಬ್ಲಾಕ್ ಅಧ್ಯಕ್ಷ ಸೈಯದ್ ಇಕ್ಬಾಲ್, ಯುವ ಕಾಂಗ್ರೆಸ್ ಘಟಕದ ಮಾಜಿ ಅಧ್ಯಕ್ಷ ಶೌಕತ್ ಆಲಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸಹಾಯಕ ಪ್ರಾಧ್ಯಾಪಕರ ನೇಮಕಾತಿ ; ಹುದ್ದೆಗಳ ಹೆಚ್ಚಳಕ್ಕೆ ಆಗ್ರಹಿಸಿ ಪ್ರತಿಭಟನೆ



ಮೈಸೂರು,ಜ.12(ಪಿಎಂ)– ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಹುದ್ದೆಗಳನ್ನು ಹೆಚ್ಚಳ ಮಾಡುವಂತೆ ಒತ್ತಾಯಿಸಿ ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾನ ಸಮಿತಿ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಕೋರ್ಟ್ ಎದುರಿನ ಗಾಂಧಿ ಪುತ್ಥಳಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ರಾಜ್ಯದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಲು ಒಟ್ಟು 1,242 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಸಲಾಗುತ್ತಿದೆ. 2015ರ ನೇಮಕಾತಿಯಲ್ಲಿ 2,160 ಹುದ್ದೆಗಳಿಗೆ 16,952 ಅಭ್ಯರ್ಥಿಗಳು ಇದ್ದರು. ಈಗಿನ 2022ರ ನೇಮಕಾತಿಯಲ್ಲಿ 33,339 ಅಭ್ಯರ್ಥಿಗಳು ಇದ್ದು, ಕೇವಲ 1,242 ಹುದ್ದೆಗಳಿಗೆ ನೇಮಕಾತಿ ನಡೆಸಲಾಗುತ್ತಿದೆ. 4 ಸಾವಿರಕ್ಕೂ ಹೆಚ್ಚು ಹುದ್ದೆಗಳಿದ್ದರೂ ನೇಮಕಾತಿ ಕಡಿಮೆ ಮಾಡುತ್ತಿರುವುದು ಅವೈಜ್ಞಾನಿಕ ಎಂದು ಖಂಡಿಸಿದರು.

2015ರ ನಂತರ ಸಾಕಷ್ಟು ವರ್ಷಗಳ ಬಳಿಕ ಈ ನೇಮಕಾತಿ ನಡೆಯುತ್ತಿದ್ದು, ಈಗ ಹುದ್ದೆಗಳನ್ನು ಹೆಚ್ಚಿಸಿದರೆ ಸಾಕಷ್ಟು ಅಭ್ಯರ್ಥಿಗಳಿಗೆ ಅವಕಾಶ ದೊರೆಯಲಿದೆ. ಇಲ್ಲವಾದರೆ ಮುಂದಿನ ನೇಮಕಾತಿ ವೇಳೆಗೆ ಅವರ ವಯೋಮಿತಿಯೇ ಮೀರಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಪಾದಯಾತ್ರೆಯಲ್ಲಿ ಕೃಷ್ಣರಾಜ ಬುಲೇವಾರ್ಡ್ ರಸ್ತೆ ಮೂಲಕ ಜಿಲ್ಲಾಧಿಕಾರಿ ಕಚೇರಿಗೆ ತಲುಪಿ ಮನವಿ ಸಲ್ಲಿಸಲಾಯಿತು. ಪ್ರತಿಷ್ಠಾನ ಸಮಿತಿಯ ಗೌರವಾಧ್ಯಕ್ಷ ಎಂ.ಚಂದ್ರಶೇಖರ್, ಅಧ್ಯಕ್ಷ ಜಾಕೀರ್ ಹುಸೇನ್, ಪ್ರಧಾನ ಸಂಚಾಲಕರಾದ ಕಮಲಾ ಅನಂತರಾಮ್, ರದಿವುಲ್ಲಾ, ಎನ್‌ಎಸ್‌ಯುಐ ರಾಜ್ಯ ಕಾರ್ಯದರ್ಶಿ ಪ್ರಶಾಂತ್‌ಆರ್ಯ, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವೇಶ್ಯಾವಾಟಿಕೆ ದಂಧೆ ಆರೋಪಿ ಸ್ಯಾಂಟ್ರೋ ರವಿ ರಕ್ಷಣೆ ಆರೋಪ

ಸರ್ಕಾರ ವಜಾಗೊಳಿಸಲು ಒತ್ತಾಯಿಸಿ ದಸಂಸ ಪ್ರತಿಭಟನೆ

ಮೈಸೂರು,ಜ.12(ಪಿಎಂ)– ವೇಶ್ಯಾವಾಟಿಕೆ ದಂಧೆ ಆರೋಪಿ ಸ್ಯಾಂಟ್ರೋ ರವಿ ಅಲಿಯಾಸ್ ಕೆ.ಎಸ್. ಮಂಜುನಾಥ್ ಎಂಬಾತನನ್ನು ಬಂಧಿಸಿ ತನಿಖೆಗೆ ಒಳಪಡಿಸದೇ ರಾಜ್ಯ ಬಿಜೆಪಿ ಸರ್ಕಾರ ಅನೈತಿಕ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿ ಹಾಗೂ ಈ ಹಿನ್ನೆಲೆಯಲ್ಲಿ ರಾಜ್ಯ ಬಿಜೆಪಿ ಸರ್ಕಾರವನ್ನು ವಜಾಗೊಳಿಸಿ, ರಾಷ್ಟ್ರಪತಿ ಆಡಳಿತ ಜಾರಿಗೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿ (ದಸಂಸ) ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.



ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಪ್ರಗತಿಪರ, ಸಾಮಾಜಿಕ ನ್ಯಾಯ, ಅಭಿವೃದ್ಧಿಗೆ ಮಾದರಿ ಎನ್ನಿಸಿಕೊಂಡಿದ್ದ ಕರ್ನಾಟಕ ರಾಜ್ಯವು ಬಿಜೆಪಿ ಆಡಳಿತಕ್ಕೆ ಬಂದ ಬಳಿಕ ಅನೈತಿಕ ಚಟುವಟಿಕೆಗಳ ಕೇಂದ್ರವಾಗಿ ಮಾರ್ಪಟ್ಟಿದೆ. ಜನಪರ ಕಾರ್ಯಕ್ರಮಗಳನ್ನು ರೂಪಿಸಬೇಕಿದ್ದ ಸರ್ಕಾರ, ತನ್ನ ಜವಾಬ್ದಾರಿ ಮರೆತು 40 ಪರ್ಸೆಂಟ್ ಕಮಿಷನ್, ಅಕ್ರಮ ನೇಮಕಾತಿ, ವರ್ಗಾವಣೆ ದಂಧೆ, ಗೂಂಡಾಗಿರಿ, ಕೋಮು ಗಲಭೆ ಮೊದಲಾದ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ ಎಂದು ಆರೋಪಿಸಿದರು.

ದಲಿತ ಮಹಿಳೆ ದೂರಿನ ಮೇರೆಗೆ ವರದಕ್ಷಿಣೆ ನಿಷೇಧ ಕಾಯ್ದೆ, ಪರಿಶಿಷ್ಟರ ದೌರ್ಜನ್ಯ ನಿಷೇಧ ಕಾಯ್ದೆ, ಲೈಂಗಿಕ ಕಿರುಕುಳ, ಅತ್ಯಾಚಾರ, ವಂಚನೆ ಆರೋಪದಡಿ ಸ್ಯಾಂಟ್ರೋ ರವಿ ಎಂಬಾತನ ವಿರುದ್ಧ ಮೈಸೂರಿನ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿ 12 ದಿನಗಳೇ ಕಳೆದರೂ ಆತನನ್ನು ಬಂಧಿಸಲು ರಾಜ್ಯ ಬಿಜೆಪಿ ಸರ್ಕಾರಕ್ಕೆ ಸಾಧ್ಯವಾಗಿಲ್ಲ ಎನ್ನುವುದಾದರೆ, ಈ ಸರ್ಕಾರದಿಂದ ಜನ ಸಾಮಾನ್ಯರು ಮತ್ತೇನನ್ನು ನಿರೀಕ್ಷಿಸಲು ಸಾಧ್ಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅನುಷ್ಠಾನಗೊಳಿಸಬೇಕಿದ್ದ ವಿಧಾನಸೌಧದ ಪಾವಿತ್ರ್ಯತೆಯನ್ನು ಈ ಸರ್ಕಾರ ಕಳೆದಿದ್ದು, ಗೂಂಡಾಗಳು, ದಲ್ಲಾಳಿಗಳು, ಪಿಂಪ್‌ಗಳು ವ್ಯವಹಾರ ನಡೆಸುವ ಕೇಂದ್ರವಾಗಿ ವಿಧಾನಸೌಧವನ್ನು ಮಾರ್ಪಡಿಸಲಾಗಿದೆ ಎಂದು ದೂರಿದರು.

ಇದೊಂದು ಅನೈತಿಕ ಸರ್ಕಾರವಾಗಿದ್ದು, ಇದನ್ನು ವಜಾಗೊಳಿಸಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸುವ ಮೂಲಕ ಅಕ್ರಮಗಳಿಗೆ ಕಡಿವಾಣ ಹಾಕಬೇಕು. ಆಡಳಿತ ವ್ಯವಸ್ಥೆಯಲ್ಲಿನ ಹಲವು ಐಎಎಸ್, ಐಪಿಎಸ್ ಅಧಿಕಾರಿಗಳು, ಮಂತ್ರಿಗಳು ಸ್ಯಾಂಟ್ರೋ ರವಿ ಎಂಬಾತನ ಜೊತೆ ಶಾಮೀಲಾಗಿ ಕಾನೂನನ್ನು ತಮ್ಮ ಮನಬಂದಂತೆ ಬದಲಿಸುವ ಹೀನ ಕೃತ್ಯಕ್ಕೆ ಕೈ ಹಾಕಿರುವುದು ಈ ಪ್ರಕರಣದಿಂದ ಬಯಲಾಗಿದೆ ಎಂದು ಕಿಡಿಕಾರಿದರು.

ಸರ್ಕಾರಿ ಅತಿಥಿಗೃಹವನ್ನೇ ತನ್ನ ಕಚೇರಿ ಮಾಡಿಕೊಂಡು ಪರ್ಯಾಯ ಆಡಳಿತ ನಡೆಸಿರುವ ಇಂತಹ ಕ್ರಿಮಿನಲ್‌ನಿಂದ ಇನ್ನೆಷ್ಟು ಅಮಾಯಕ ಹೆಣ್ಣು ಮಕ್ಕಳು ದೌರ್ಜನ್ಯಕ್ಕೆ ಒಳಗಾಗಿದ್ದಾರೆ ಎಂಬುದನ್ನು ತನಿಖೆ ಮೂಲಕ ಬಹಿರಂಗಪಡಿಸಿ, ದೌರ್ಜನ್ಯಕ್ಕೊಳಗಾದ ಹೆಣ್ಣು ಮಕ್ಕಳಿಗೆ ನ್ಯಾಯ ಕೊಡಿಸಬೇಕು. ಸ್ಯಾಂಟ್ರೋ ರವಿಯನ್ನು ಬಂಧಿಸುವ ಜೊತೆಗೆ ಈತನ ಜೊತೆ ಶಾಮೀಲಾಗಿರುವ ಎಲ್ಲರ ವಿರುದ್ಧವೂ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಒಡನಾಡಿ ಸೇವಾ ಸಂಸ್ಥೆಯ ಸ್ಟ್ಯಾನ್ಲಿ, ಪರಶು, ದಸಂಸ ಜಿಲ್ಲಾ ಸಂಚಾಲಕರಾದ ಬೆಟ್ಟಯ್ಯಕೋಟೆ, ಆಲಗೂಡು ಶಿವಕುಮಾರ್, ಜಿಲ್ಲಾ ಸಂಘಟನಾ ಸಂಚಾಲಕರಾದ ಶಂಭುಲಿಂಗಸ್ವಾಮಿ, ರತ್ನಪುರಿ ಪುಟ್ಟಸ್ವಾಮಿ, ಹೆಗ್ಗನೂರು ನಿಂಗರಾಜು, ಕೆ.ಕೆ.ಜಗದೀಶ್, ಖಜಾಂಚಿ ಬಿ.ಡಿ.ಶಿವಬುದ್ಧಿ, ಸಂಘಟನೆ ಮುಖಂಡರಾದ ರಾಜು, ಆಲಗೂಡು ನಾಗರಾಜಮೂರ್ತಿ, ಕಲ್ಲಹಳ್ಳಿ ಕುಮಾರ್, ಸೋಮಣ್ಣ, ಮಹದೇವಸ್ವಾಮಿ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನನ್ನ ಆಡಳಿತಾವಧಿಯಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಆದ್ಯತೆ

ನಂಜನಗೂಡು, ಜ.12– ನನ್ನ ಆಡಳಿತಾವಧಿಯಲ್ಲಿ ತಾಲೂಕಿನ ಶಾಲಾ ಕಾಲೇಜುಗಳಿಗೆ ಮೂಲ ಸೌಕರ್ಯ ಒದಗಿಸುವ ಮೂಲಕ ಶೈಕ್ಷಣಿಕ ಗುಣಮಟ್ಟ ಬಲವರ್ಧನೆಗೆ ಹೆಚ್ಚಿನ ಆದ್ಯತೆ ನೀಡಿದ್ದೇನೆ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ನಗರದ ನಾಗಮ್ಮ ಶಾಲಾವರಣದಲ್ಲಿರುವ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ಕ್ರೀಡಾ, ಸಾಂಸ್ಕೃತಿಕ ಚಟುವಟಿಕೆ ಹಾಗೂ ಎನ್‌ಎಸ್‌ಎಸ್ ಸಮಾರೋಪ ಸಮಾರಂಭ ಮತ್ತು ನೂತನ ಕೊಠಡಿ ಉದ್ಘಾಟಿಸಿ ಅವರು ಮಾತನಾಡಿದರು.

ನಾನು ಶಾಸಕನಾದಾಗ ಗ್ರಾಮೀಣ ಶಾಲೆಗಳ ಸ್ಥಿತಿ ಶೋಚನೀಯವಾಗಿತ್ತು. ಪಟ್ಟಣದ ಸರ್ಕಾರಿ ಕಾಲೇಜುಗಳು ಇದಕ್ಕಿಂತ ಭಿನ್ನವಾಗಿರಲಿಲ್ಲ. ಸಾಕಷ್ಟು ಮೂಲ ಸೌಕರ್ಯಗಳಿಂದ ಬಳಲುತ್ತಿದ್ದವು. ಗ್ರಾಮೀಣ ಮಕ್ಕಳ ಶಿಕ್ಷಣಕ್ಕೆ ಯಾವುದೇ ಧಕ್ಕೆ ಉಂಟಾಗದಂತೆ ಆದ್ಯತಾನುಸಾರ ಶಾಲಾ ಕಾಲೇಜುಗಳಿಗೆ ಕೊಠಡಿ ಸೇರಿದಂತೆ ಅಗತ್ಯ ಸೌಕರ್ಯ ಕಲ್ಪಿಸಲು ಮುಂದಾದೆ. ಕ್ಷೇತ್ರದಲ್ಲಿ 100 ಶಾಲೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ. ವಿವೇಕ ಯೋಜನೆಯಡಿ 60 ಹೊಸ ಕೊಠಡಿಗಳನ್ನು ನಿರ್ಮಿಸಿದ್ದೇವೆ. ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ 17 ಕೋಟಿ, ಹುಲ್ಲಹಳ್ಳಿ ಸರ್ಕಾರಿ ಕಾಲೇಜಿಗೆ 1.5 ಕೋಟಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 4 ಕೋಟಿ ವೆಚ್ಚದಲ್ಲಿ ಕೊಠಡಿಗಳ ನಿರ್ಮಾಣಕ್ಕೆ ಒತ್ತು ನೀಡಿದ್ದೇನೆ. ಇನ್ನು ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸುವ ಮೂಲಕ ಗ್ರಾಮೀಣ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ನೆರವು ನೀಡಿರುವುದು ಆತ್ಮತೃಪ್ತಿ ಕೊಟ್ಟಿದೆ ಎಂದರು.

ಕ್ಷೇತ್ರಕ್ಕೆ ಅನುದಾನದ ಹೊಳೆಯನ್ನೇ ಹರಿಸಿದ್ದೇನೆ. ನಾನು ಯಾವುದೇ ಹುಸಿ ಭರವಸೆ ನೀಡಿ ಮತದಾರರ ನಂಬಿಕೆಗೆ ದ್ರೋಹ ಎಸಗಿಲ್ಲ. ನುಡಿದಂತೆ ಅಭಿವೃದ್ಧಿ ಯೋಜನೆಗಳನ್ನು ಕ್ಷೇತ್ರಕ್ಕೆ ತಂದಿದ್ದೇನೆ. ಶ್ರೀನಿವಾಸ ಪ್ರಸಾದ್ ಅವರನ್ನು ಹಿಡಿದುಕೊಂಡು ಅನುದಾನ ತಂದಿದ್ದಾರೆ ಎಂದು ಕೆಲವರು ಟೀಕೆ ಮಾಡುತ್ತಾರೆ. ಏಕೆ ನನಗೆ ಮಾತು ಬರಲ್ವೇ, ಅಭಿವೃದ್ಧಿ ಕಣ್ಣಿಗೆ ಕಾಣುತ್ತಿಲ್ಲವೇ ಎಂದು ವಿರೋಧಿಗಳಿಗೆ ಟಾಂಗ್ ನೀಡಿದ ಹರ್ಷವರ್ಧನ್, ನಾನು ಮಾಡಿರುವ ಅಭಿವೃದ್ಧಿ ಬಗ್ಗೆ ಶ್ರೀನಿವಾಸ ಪ್ರಸಾದ್ ಅವರ ಗಮನಕ್ಕೆ ಇನ್ನೂ ತಂದಿಲ್ಲ. ಕ್ಷೇತ್ರಕ್ಕೆ 600 ಕೋಟಿ ಅನುದಾನ ತರಲು ವಿಧಾನ ಸೌಧದಲ್ಲಿ ಒಬ್ಬಂಟಿಯಾಗಿ ಕಚೇರಿಯಿಂದ ಕಚೇರಿಗೆ ಅಲೆದಾಡಿದ ಶ್ರಮ ನನಗೆ ಮಾತ್ರ ಗೊತ್ತಿದೆ ಎಂದು ವಿಪಕ್ಷ ನಾಯಕರಿಗೆ ಎದುರೇಟು ನೀಡಿದರು.

ಕಾರ್ಯಕ್ರಮದಲ್ಲಿ ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಸದಸ್ಯೆ ಮಂಗಳಮ್ಮ ಸಿಡಿಸಿ ಖಜಾಂಚಿ ಡಾ.ಶ್ರೀಧರ್, ಪ್ರಾಂಶುಪಾಲ ಚಂದ್ರಶೇಖರ್ ಬಾಬು, ವಕೀಲ ಪಿ.ಮಹೇಶ್, ಹುಲ್ಲಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಬಸವನಾಯ್ಕ, ಉಪನ್ಯಾಸಕರಾದ ರಾಜಣ್ಣ, ನಟರಾಜು, ಮಹದೇವಯ್ಯ, ಇಂದ್ರ, ಸೌಮ್ಯಲಕ್ಷ್ಮಿ ಉಪಸ್ಥಿತರಿದ್ದರು.



ಮುಂಬರುವ ಚುನಾವಣೆಯಲ್ಲಿ ಬಿಜೆಪಿಗೆ ಅಧಿಕಾರ

ನಂಜನಗೂಡು: ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಸ್ಪಷ್ಟ ಬಹುಮತದೊಂದಿಗೆ ರಾಜ್ಯದಲ್ಲಿ ಮತ್ತೊಮ್ಮೆ ಅಧಿಕಾರ ಹಿಡಿಯಲಿದೆ ಎಂದು ಶಾಸಕ ಬಿ.ಹರ್ಷವರ್ಧನ್ ವಿಶ್ವಾಸ ವ್ಯಕ್ತಪಡಿಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವ ಕನಸು ಕಾಣುತ್ತಿದೆ. ಆದರೆ ಅವರ ಕನಸು ನನಸಾಗುವುದಿಲ್ಲ. ರಾಜ್ಯದ ಜನರು ಬಿಜೆಪಿ ಸರ್ಕಾರಕ್ಕೆ ಮತ್ತೊಮ್ಮೆ ಆಶೀರ್ವದಿಸಲಿದ್ದಾರೆ. ಈಗಾಗಲೇ ರಾಜ್ಯ ಬಿಜೆಪಿ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪಂಗಡದ ಮೀಸಲಾತಿ ಪ್ರಮಾಣವನ್ನು ಕ್ರಮವಾಗಿ ಶೇ.17 ಹಾಗೂ ಶೇ.7ಕ್ಕೆ ಹೆಚ್ಚಳ ಮಾಡುವ ಮೂಲಕ ಶೋಷಿತ ಸಮುದಾಯದ ಜನರ ಬಹುವರ್ಷಗಳ ಬೇಡಿಕೆ ಕಾರ್ಯರೂಪಕ್ಕೆ ತಂದಿದೆ. ಇನ್ನು ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರದಲ್ಲಿರುವುದರಿಂದ ಮೀಸಲಾತಿ ಹೆಚ್ಚಳವನ್ನು 9ನೇ ಶೆಡ್ಯೂಲ್‌ನಲ್ಲಿ ಸೇರ್ಪಡೆ ಮಾಡುವ ಮೂಲಕ ಮೀಸಲಾತಿ ಹೆಚ್ಚಳಕ್ಕೆ ಅಧಿಕೃತ ಮಾನ್ಯತೆ ದೊರಕಿಸಿಕೊಡಲಾಗುವುದು ಎಂದರು.

ಕಾಂಗ್ರೆಸ್ ಮುಖಂಡರು ಜೆಡಿಎಸ್ ಸೇರ್ಪಡೆ



ಹುಣಸೂರು, ಜ.12– ಮುಂಬರುವ ದಿನಗಳಲ್ಲಿ ಜೆಡಿಎಸ್ ಅಧಿಕಾರಕ್ಕೆ ಬಂದರೆ ರೈತರ ಸಾಲ ಮನ್ನಾ ಮಾಡುವುದಾಗಿ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಘೋಷಿಸಿದ್ದಾರೆ ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ಇಲ್ಲಿನ ಬಿಬಿಸಿ ಕಾಲೋನಿಯಲ್ಲಿ ಕಾಂಗ್ರೆಸ್ ತೊರೆದ ಹಲವು ಮುಖಂಡರನ್ನು ಜೆಡಿಎಸ್ ಪಕ್ಷಕ್ಕೆ ಬರಮಾಡಿಕೊಂಡು ಮಾತನಾಡಿದ ಅವರು, ರಾಜ್ಯದಲ್ಲಿ ಜೆಡಿಎಸ್ ಅಧಿಕಾರಕ್ಕೆ ಬಂದರೆ ಕುಮಾರಸ್ವಾಮಿ ಅವರು ರೈತರ ಸಾಲ ಮನ್ನಾ, ವಿಧವಾ ವೇತನ, ಅಂಗವಿಕಲರ ವೇತನ, ವೃದ್ಧಾಪ್ಯ ವೇತನ ಹೆಚ್ಚಿಸಲಿದ್ದಾರೆ ಎಂದರು.

ನಿಮ್ಮ ಕುಲ ಕಸುಬಾದ ಮೀನುಗಾರಿಕೆಗೆ ಮೀನುಗಾರಿಕೆ ಇಲಾಖೆಯಿಂದ ಸೌಲಭ್ಯಗಳನ್ನು ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

ಇದೇ ವೇಳೆ 50ಕ್ಕೂ ಹೆಚ್ಚು ಮಂದಿ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಗೊಂಡರು. ಈ ವೇಳೆ ಜಿಪಂ ಮಾಜಿ ಸದಸ್ಯ ಸಿ.ಟಿ.ರಾಜಣ್ಣ, ಉದ್ಯಮಿ ಅಣ್ಣಯ್ಯ, ಉಮ್ಮತ್ತೂರು ಗ್ರಾಪಂ ಅಧ್ಯಕ್ಷ ರಾಮಕೃಷ್ಣ, ದೊಡ್ಡಹೆಜ್ಜೂರು ಗ್ರಾಪಂ ಅಧ್ಯಕ್ಷ ಸುಭಾಷ್, ಮುಖಂಡರಾದ ಶಿವಣ್ಣ, ಅಣ್ಣಯ್ಯ, ರಾಜು, ಚೆಲುವಮ್ಮ ಇನ್ನಿತರರಿದ್ದರು.



ಮಿದುಳು ಜ್ವರಕ್ಕೆ ತುತ್ತಾಗಿ ಇತ್ತೀಚೆಗೆ ಸಾವನ್ನಪ್ಪಿದ ಹುಣಸೂರು ಬಾಲಕಿಯರ ಸರ್ಕಾರಿ ಪಿಯು ಕಾಲೇಜಿನ ವಿದ್ಯಾರ್ಥಿ ಸಿಂಚನಾಳ ಕುಟುಂಬಕ್ಕೆ ಕಾಲೇಜಿನ ವತಿಯಿಂದ 20 ಸಾವಿರ ರೂ. ಧನಸಹಾಯ ಮಾಡಲಾಯಿತು.

ಬಿಜೆಪಿ ಎಲ್ಲಾ ವರ್ಗದ ಹಿತ ಕಾಯುವ ಪಕ್ಷ



ಹಲ್ಲಹಳ್ಳಿ, ಜ.12– ಬಿಜೆಪಿ ಪಕ್ಷ ಜಾತ್ಯತೀತ ನಿಲುವು ಹೊಂದಿದ್ದು, ಎಲ್ಲಾ ವರ್ಗಗಳ ಹಿತ ಕಾಯುವ ಪಕ್ಷವಾಗಿದೆ ಎಂದು ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ತಿಳಿಸಿದರು.

ನಂಜನಗೂಡು ತಾಲೂಕಿನ ಬೆಳಲೆ ಗ್ರಾಮದಲ್ಲಿ ಬೂತ್ ವಿಜಯ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಬಿಜೆಪಿ ಪಕ್ಷ ಎಲ್ಲಾ ಜಾತಿ, ಜನಾಂಗಗಳ ಸಬಲೀಕರಣ ಹಾಗೂ ಉನ್ನತೀಕರಣಕ್ಕಾಗಿ ಶ್ರಮಿಸುತ್ತಿದೆ. ಶಾಸಕ ಬಿ.ಹರ್ಷವರ್ಧನ್ ಸಹ ಕ್ಷೇತ್ರದ ಎಲ್ಲಾ ವರ್ಗಗಳ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ಕ್ಷೇತ್ರಕ್ಕೆ ಹೆಚ್ಚು ಅನುದಾನ ತಂದು ಗ್ರಾಮೀಣ ಭಾಗದ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಎಂದರು.

ಈ ವೇಳೆ ಮಹದೇವಸ್ವಾಮಿ, ಸಂತೋಷ, ಪಾಪಣ್ಣ, ಮಲ್ಲೇಶ್, ಮಂಜುನಾಥ್, ಬಿಳಿಗಿರಿ, ಚನ್ನಬಸವಣ್ಣ, ದೊಡ್ಡ ಅಂಕಶೆಟ್ಟಿ, ನಾಗರಾಜು ಸೇರಿದಂತೆ ಇತರರಿದ್ದರು.

ಬೊಪ್ಪನಹಳ್ಳಿಯಲ್ಲಿ ಬೂತ್ ವಿಜಯ ಅಭಿಯಾನಕ್ಕೆ ಚಾಲನೆ



ಹೆಚ್.ಡಿ.ಕೋಟೆ, ಜ.12– ತಾಲೂಕಿನ ಬೊಪ್ಪನಹಳ್ಳಿಯಲ್ಲಿ ಬೂತ್ ವಿಜಯ ಅಭಿಯಾನಕ್ಕೆ ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷೆ ಮಂಗಳಾ ಸೋಮಶೇಖರ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್ ಸೂಚನೆ ಮೇರೆಗೆ ರಾಜ್ಯಾದ್ಯಂತ ಬೂತ್ ವಿಜಯ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಕಾರ್ಯಕರ್ತರು ಪ್ರತಿ ಬೂತ್‌ಗಳಿಗೆ ಭೇಟಿ ನೀಡಿ ಅಭಿಯಾನ ಯಶಸ್ವಿಗೊಳಿಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಬಿಜೆಪಿ ಟಿಕೆಟ್ ಆಕಾಂಕ್ಷಿ ಡಾ.ಹೆಚ್.ವಿ.ಕೃಷ್ಣಸ್ವಾಮಿ, ತಾಲೂಕು ಬಿಜೆಪಿ ಅಧ್ಯಕ್ಷ ಗುರುಸ್ವಾಮಿ, ಜಿಲ್ಲಾ ಸಹ ವಕ್ತಾರ ಸಿ.ಕೆ.ಗಿರೀಶ್, ತೋಟಗಾರಿಕೆ ಬೆಳೆಗಾರರ ಸಂಘದ ಅಧ್ಯಕ್ಷ ನಂದೀಶ್, ಎಪಿಎಂಸಿ ಮಾಜಿ ಅಧ್ಯಕ್ಷ ನಟರಾಜ್, ತಾಲೂಕು ಪ್ರಧಾನ ಕಾರ್ಯದರ್ಶಿ ವಿವೇಕ್, ಮನುಗನಹಳ್ಳಿ ಬೂತ್ ಅಧ್ಯಕ್ಷ ಮಹದೇವ ಸ್ವಾಮಿ, ಶಕ್ತಿ ಕೇಂದ್ರದ ಪ್ರಮುಖ ಶಿವಕುಮಾರ್, ಯುವ ಮೋರ್ಚಾ ಮಾಜಿ ಕಾರ್ಯದರ್ಶಿ ನಂದೀಶ್, ಜಿಎಲ್‌ಆರ್ ನಿರ್ದೇಶಕ ಪರೀಕ್ಷಿತ್ ರಾಜ್ ಅರಸು, ಕೃಷ್ಣಸ್ವಾಮಿ ಆಪ್ತ ಸಹಾಯಕ ಶಿವಕುಮಾರ್, ಶಿವು, ವಿರಾಜ್ ಉಪಸ್ಥಿತರಿದ್ದರು.



ತಿ.ನರಸೀಪುರದ ಅತಿಥಿ ಗೃಹದಲ್ಲಿ ಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ನೂತನ ದಿನದರ್ಶಿಕೆಯನ್ನು ನಾಯಕ ಸಮಾಜದ ಮುಖಂಡರು ಬಿಡುಗಡೆಗೊಳಿಸಿದರು. ಈ ವೇಳೆ ರಾಜ್ಯ ವಾಲ್ಮೀಕಿ ಒಕ್ಕೂಟದ ಮೈಸೂರು ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್, ವಾಲ್ಮೀಕಿ ಸಂಘಗಳ ಒಕ್ಕೂಟದ ರಾಜ್ಯಾಧ್ಯಕ್ಷ ದೇವರಾಜ್ ಪಾಳೇಗಾರ್, ವಾಲ್ಮೀಕಿ ಮಹಾ ಸಭಾ ಯುವ ಘಟಕದ ಅಧ್ಯಕ್ಷ ಟಿ.ಆರ್.ತುಳಸೀರಾಮ್, ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಯಡದೊರೆ ಮಹೇಶ್ ನಾಯಕ್, ಸ್ವಾಮಿನಾಯಕ, ಓಂಗುರು ಮತ್ತಿತರರಿದ್ದರು.

ಬಜೆಟ್ ಪೂರ್ವಭಾವಿ ಸಭೆ

ನಂಜನಗೂಡು, ಜ.12– ನಂಜನಗೂಡು ನಗರಸಭೆಯ 2023–24ನೇ ಸಾಲಿನ ಉತ್ತಮ ಬಜೆಟ್‌ನ್ನು ರೂಪಿಸುವ ಸಲುವಾಗಿ ಜ.16ರಂದು ಬೆಳಗ್ಗೆ 11 ಗಂಟೆಗೆ ನಗರಸಭೆಯ ಕೌನ್ಸಿಲ್ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಆಯೋಜಿಸಲಾಗಿದೆ. ನಗರದ ಸಾರ್ವಜನಿಕರು, ನಾಗರಿಕರು, ಸಂಘ ಸಂಸ್ಥೆಗಳವರು ಸಭೆಗೆ ಆಗಮಿಸಿ ನಗರಸಭೆಯ ಅಭಿವೃದ್ಧಿಗೆ ಸಂಬಂಧಿಸಿದ ಸಲಹೆ ಸೂಚನೆಗಳನ್ನು ನೀಡಬೇಕೆಂದು ನಗರಸಭಾ ಆಯುಕ್ತ ರಾಜಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕೆ. ಪ್ರೇಮ್‌ಕುಮಾರ್‌ಗೆ ಪಿಎಚ್.ಡಿ

ಮೈಸೂರು, ಜ.12– ಡಾ.ಟಿ.ಕೆ.ಕೆಂಪೇಗೌಡ ಅವರ ಮಾರ್ಗದರ್ಶನದಲ್ಲಿ ಕೆ.ಪ್ರೇಮ್‌ಕುಮಾರ್ ಅವರು ಪಿ.ವಿ.ನಾರಾಯಣ ಅವರ ಸಮಗ್ರ ಸಾಹಿತ್ಯ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸಂಚಾರಿ ಉಪಶಮನ ಆರೈಕೆ ಘಟಕ ಉದ್ಘಾಟನೆ



ಸರಗೂರು, ಜ.12– ಸ್ವಾಮಿ ವಿವೇಕಾನಂದರ 160ನೇ ಜಯಂತಿ ಪ್ರಯುಕ್ತ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಅಂಗ ಸಂಸ್ಥೆಯಾದ ವಿವೇಕಾನಂದ ಸ್ಮಾರಕ ಆಸ್ಪತ್ರೆಯ ಸಂಚಾರಿ ಉಪಶಮನ ಆರೈಕೆ ಘಟಕವನ್ನು ಲಯನ್ಸ್ ಕ್ಲಬ್ ಅಧ್ಯಕ್ಷ ಶ್ರೀಕಂಠಸ್ವಾಮಿ ಮತ್ತು ಟ್ರಸ್ಟ್ ಅಧ್ಯಕ್ಷ ಬ್ರಹ್ಮದೇವಯ್ಯ ಉದ್ಘಾಟಿಸಿದರು.

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಿಇಓ ಡಾ.ಜಿ.ಎಸ್.ಕುಮಾರ್ ಮಾತನಾಡಿ, ನಮ್ಮ ಆಸ್ಪತ್ರೆ ವತಿಯಿಂದ ಸಂಚಾರಿ ಉಪಶಮನ ಆರೈಕೆ ಘಟಕ ಉದ್ಘಾಟಿಸುತ್ತಿರುವುದು ಸಂತೋಷದ ವಿಷಯ. ಸ್ವಾಮಿ ವಿವೇಕಾನಂದರ ಶಿವಜ್ಞಾನೆ ಶಿವಸೇವಾ ಎಂಬ ನುಡಿಯನ್ನು ಆದರ್ಶವಾಗಿಟ್ಟುಕೊಂಡು ಕಡುಬಡವರು, ನಿರ್ಗತಿಕರ ಸೇವೆ ಮಾಡುವ ಮೂಲಕ ದೇವರನ್ನು ಕಾಣುತ್ತಿದ್ದೇವೆ. ಸರಗೂರು ಪಟ್ಟಣದಿಂದ 5 ಕಿಮೀ ವ್ಯಾಪ್ತಿಯಲ್ಲಿ ಹಾಸಿಗೆ ಹಿಡಿದಿರುವವರ ಹಾಗೂ ಚಿಕಿತ್ಸೆ ಅವಶ್ಯಕತೆ ಇರುವವರಿಗೆ ಈ ಸೇವೆ ಆರಂಭಿಸಿದ್ದೇವೆ. ಸಾರ್ವಜನಿಕರು ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ರಾಜಸ್ಥಾನ ಸಂಘದ ಅಧ್ಯಕ್ಷ ಡಕ್ಲರಾಮ್, ವರ್ತಕರ ಮಂಡಳಿ ಕಾರ್ಯದರ್ಶಿ ವೆಂಕಟೇಶ್, ಲಯನ್ಸ್ ಕ್ಲಬ್ ಖಜಾಂಚಿ ಪ್ರಸಾದ್, ವಿವೇಕಾನಂದ ಸ್ಮಾರಕ ಆಸ್ಪತ್ರೆ ಉಪಶಮನ ಆರೈಕೆ ಮುಖ್ಯಸ್ಥ ಡಾ.ವಿನುತ ರಾಮನ್, ಶಸ್ತ್ರಚಿಕಿತ್ಸಾ ತಜ್ಞ ಡಾ.ರವೀಂದ್ರನಾಥ್, ಸಾಮಾನ್ಯ ಚಿಕಿತ್ಸಾ ತಜ್ಞ ಡಾ.ನಾಗೇಶ್, ಡಾ.ಅಭಿಲಾಷ್, ಮಕ್ಕಳ ತಜ್ಞ ಡಾ.ಅರುಣ್ ಕುಮಾರ್ ಸೂರಿ, ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ಡಾ.ಶಂಕರ್, ಆಸ್ಪತ್ರೆ ವ್ಯವಸ್ಥಾಪಕಿ ಸುಷ್ಮಾ ಸೇರಿದಂತೆ ಇನ್ನಿತರರಿದ್ದರು.

ಓದಿನೊಂದಿಗೆ ವ್ಯಕ್ತಿತ್ವ ವಿಕಸನದ ಕಡೆ ಗಮನಹರಿಸಿ



ಹುಣಸೂರು, ಜ.12– ವಿದ್ಯಾರ್ಥಿಗಳು ಓದಿನೊಂದಿಗೆ ನಿತ್ಯ ಪತ್ರಿಕೆ ಓದುವ, ವ್ಯಾಯಾಮ, ಯೋಗ ಮಾಡುವ ಹವ್ಯಾಸ ರೂಢಿಸಿಕೊಂಡು ವ್ಯಕ್ತಿತ್ವ ವಿಕಸನದ ಕಡೆಗೆ ಗಮನಹರಿಸಬೇಕೆಂದು ಶಾಸಕ ಹೆಚ್.ಪಿ. ಮಂಜುನಾಥ್ ಸಲಹೆ ನೀಡಿದರು.

ತಾಲೂಕಿನ ಹೆಗ್ಗಂದೂರಲ್ಲಿ ಹುಣಸೂರು ಜ್ಞಾನಧಾರ ಪ್ರಥಮ ದರ್ಜೆ ಕಾಲೇಜಿನಿಂದ ನಡೆದ ಎನ್‌ಎಸ್‌ಎಸ್ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಬಹುತೇಕ ವಿದ್ಯಾರ್ಥಿಗಳು ಶಾಲಾ–ಕಾಲೇಜು ಶಿಕ್ಷಣಕ್ಕೆ ಮಾತ್ರ ಸೀಮಿತವಾಗುತ್ತಾರೆ. ಇದು ಸ್ಪರ್ಧಾತ್ಮಕ ಯುಗವಾಗಿದ್ದು, ಯಾವುದೇ ಹುದ್ದೆಗಿಟ್ಟಿಸಲು ಪಠ್ಯದೊಂದಿಗೆ ದೇಶದ ಆಗು ಹೋಗುಗಳು, ಪ್ರಚಲಿತ ವಿದ್ಯಮಾನಗಳು, ಸ್ಥಳೀಯ ಸಂಸ್ಥೆಗಳ ಆಡಳಿತ ವ್ಯವಸ್ಥೆ ಬಗ್ಗೆ ತಿಳಿದಿರಬೇಕು.

ಆಡಳಿತದ ಲೋಪಗಳನ್ನು ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಇದರೊಟ್ಟಿಗೆ ದೇಶದ ಜನತಂತ್ರ ವ್ಯವಸ್ಥೆ, ಸಂವಿಧಾನದ ಬಗ್ಗೆ ಅರಿವು ಪಡೆದುಕೊಳ್ಳಬೇಕು. ನಿಮ್ಮ ಶಾಲಾ–ಕಾಲೇಜು ಹಾಗೂ ಗ್ರಾಮದ ಸಮಸ್ಯೆಯನ್ನು ಜನಪ್ರತಿನಿಧಿಗಳ ಗಮನಕ್ಕೆ ತರಬೇಕು. ಅದು ಅನುಷ್ಠಾನಗೊಳ್ಳುವಂತೆ ನೋಡಿಕೊಳ್ಳಬೇಕು. ನಿಮ್ಮ ಓದಿನೊಂದಿಗೆ ನಿಮ್ಮೊಳಗಿನ ಪ್ರತಿಭೆ ಪ್ರಕಾಶಿಸಲು ಇಂತಹ ವೇದಿಕೆಯನ್ನು ಬಳಸಿಕೊಳ್ಳಿ ಎಂದು ಸಲಹೆ ನೀಡಿದರು.

ಜ್ಞಾನಧಾರ ಶಿಕ್ಷಣ ಸಂಸ್ಥೆಯ ಯಮುನಾ ಮಾತನಾಡಿದರು. ಸಂಸ್ಥೆ ಕಾರ್ಯದರ್ಶಿ ನಾಗೇಂದ್ರ, ಪ್ರಾಂಶುಪಾಲ ಹಾಗೂ ಶಿಬಿರಾಧಿಕಾರಿ ಎಚ್.ಪಿ.ಕಾರ್ತಿಕ್, ಸಹ ಶಿಬಿರಾಧಿಕಾರಿಗಳಾದ ಉಮೇಶ್, ಪ್ರದೀಪ್‌ಕುಮಾರ್, ಕು.ನಿವೇದಿತಾ, ಸುಮ, ಗ್ರಾಮದ ಮುಖಂಡರಾದ ಯ.ಚಲುವೇಗೌಡ, ರಾಗಿಶಿವಣ್ಣ, ಈಶ್ವರ್, ಕುಮಾರ್, ರಾಜೇಗೌಡ, ಚಂದ್ರಪ್ಪ, ಶ್ರೀಕಂಠಪ್ಪ, ವೀರಭದ್ರಪ್ಪ, ಕಪನಯ್ಯ. ಮಾಜಿ ಸೈನಿಕ ದೊಡ್ಡನಂಜಯ್ಯ ಸೇರಿದಂತೆ ಗ್ರಾಮಸ್ಥರು ಹಾಗೂ ಶಿಬಿರಾರ್ಥಿಗಳು ಹಾಜರಿದ್ದರು.

ಎಂಎಸ್‌ಐಎಲ್ ಮದ್ಯದಂಗಡಿ ತೆರೆಯದಂತೆ ಪ್ರತಿಭಟನೆ



ತಿ.ನರಸೀಪುರ, ಜ.12– ತಾಲೂಕಿನ ತಲಕಾಡು ಹೋಬಳಿ ಅರುಂಧತಿ ನಗರದಲ್ಲಿ ಎಂಎಸ್‌ಐಎಲ್ ಮದ್ಯದಂಗಡಿ ತೆರೆಯದಂತೆ ಗ್ರಾಮಸ್ಥರು ಗುರುವಾರ ಪ್ರತಿಭಟನೆ ನಡೆಸಿದರು.

ಗ್ರಾಪಂ ಸದಸ್ಯ ರಘು ನೇತೃತ್ವದಲ್ಲಿ ಮಹಿಳೆಯರು ಸೇರಿದಂತೆ ನೂರಾರು ಮಂದಿ ಗ್ರಾಮಸ್ಥರು ಅರುಂಧತಿ ನಗರದ ಮುಖ್ಯರಸ್ತೆಯಲ್ಲಿ ಜಮಾಯಿಸಿ ಮದ್ಯ ಮಾರಾಟ ಮಳಿಗೆ ಸ್ಥಳ ಪರಿಶೀಲನೆಗೆ ಆಗಮಿಸಿದ್ದ ಅಧಿಕಾರಿಗಳಿಗೆ ಪ್ರತಿಭಟನೆ ಮೂಲಕ ಚುರುಕು ಮುಟ್ಟಿಸಿ ಮದ್ಯದಂಗಡಿಯನ್ನು ಬೇರೆಡೆಗೆ ವರ್ಗಾಯಿಸುವಂತೆ ಒತ್ತಾಯಿಸಿದರು.

ಅರುಂಧತಿ ನಗರದಲ್ಲಿ ಎಂಆರ್‌ಪಿ ದರದಲ್ಲಿ ಮದ್ಯ ಮಾರಾಟ ಮಳಿಗೆ ತೆರೆಯಲು ಇಲಾಖೆ ಮಂಜೂರಾತಿ ದೊರೆತಿರುವ ಹಿನ್ನೆಲೆಯಲ್ಲಿ ಅಬಕಾರಿ ಇಲಾಖೆ ಅಧಿಕಾರಿಗಳು ಸ್ಥಳ ಪರಿಶೀಲನೆಗೆ ಬರುವುದನ್ನು ಅರಿತ ಗ್ರಾಮಸ್ಥರು ಗ್ರಾಮದಲ್ಲಿ ಯಾವುದೇ ಕಾರಣಕ್ಕೂ ಮದ್ಯದಂಗಡಿ ತೆರೆಯುವುದು ಬೇಡ ಎಂದು ವಿರೋಧ ವ್ಯಕ್ತಪಡಿಸಿ ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿದರು.

ಗ್ರಾಪಂ ಸದಸ್ಯ ರಘು ಮಾತನಾಡಿ, ಎಂಎಸ್‌ಐಎಲ್‌ನವರು ಗ್ರಾಮದಲ್ಲಿ ತೆರೆಯಲು ಉದ್ದೇಶಿಸಿರುವ ಎಂಆರ್‌ಪಿ ಮದ್ಯ ಮಾರಾಟ ಮಳಿಗೆ ಪ್ರಕ್ರಿಯೆ ಅವೈಜ್ಞಾನಿಕವಾಗಿದೆ. ಉದ್ದೇಶಿತ ಸ್ಥಳ ಅಲಿನೇಷನ್ ಆಗಿಲ್ಲ. ಗ್ರಾಪಂನಿಂದ ಯಾವುದೇ ಅನುಮತಿ ಪಡೆದಿಲ್ಲ. ಭೂಮಿ ಈಗಲೂ ಹಸಿರು ವ್ಯಾಪ್ತಿಯಲ್ಲಿಯೇ ಇದ್ದು, ವ್ಯವಸಾಯಕ್ಕೆ ಯೋಗ್ಯವಾಗಿದೆ. ಹಾಗಿದ್ದರೂ ಇಲಾಖೆ ಮದ್ಯದಂಗಡಿ ಮಾಡಲೊರಟಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅರುಂಧತಿ ನಗರ ವ್ಯಾಪ್ತಿಯಲ್ಲಿ ತೆರೆಯಲು ಉದ್ದೇಶಿಸಿರುವ ಜಾಗದ ಅಕ್ಕಪಕ್ಕ ಪೌರ ಕಾರ್ಮಿಕರ ಕಾಲೋನಿ, ಮತ್ತೊಂದೆಡೆ ದಲಿತರು, ಕಾರ್ಮಿಕರು ವಾಸವಾಗಿದ್ದಾರೆ. ಸ್ಥಳದಲ್ಲಿ ಚಾಮುಂಡೇಶ್ವರಿ ದೇವಸ್ಥಾನ ಇದ್ದು, ಪ್ರತಿವಾರಕ್ಕೊಮ್ಮೆ ಅನ್ನದಾನ, ವಿಶೇಷ ಪೂಜೆ ನಡೆಯುತ್ತಿದ್ದು, ಹೆಂಗಸರು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸುತ್ತಾರೆ. ಹಾಗಾಗಿ ಇಲಾಖೆ ಆಯ್ಕೆ ಮಾಡಿಕೊಂಡಿರುವ ಜಾಗ ಅವೈಜ್ಞಾನಿಕವಾಗಿದ್ದು, ಯಾವುದೇ ಕಾರಣಕ್ಕೂ ಇಲ್ಲಿ ಮದ್ಯದಂಗಡಿ ತೆರೆಯುವುದು ಬೇಡ ಎಂದು ಒತ್ತಾಯಿಸಿದರು.

ಕೂಡಲೇ ಮದ್ಯದಂಗಡಿಗೆ ನೀಡಿರುವ ಮಂಜೂರಾತಿ ರದ್ದುಪಡಿಸಿ ಬೇರೆಡೆಗೆ ವರ್ಗಾಯಿಸಬೇಕು. ಇಲ್ಲದಿದ್ದಲ್ಲಿ ಗ್ರಾಮಸ್ಥರು ಕುಡಿತಕ್ಕೆ ಒಳಗಾಗಿ ಹಾಳಾಗಲಿದ್ದು, ಇದಕ್ಕೆ ಇಲಾಖೆಯವರೇ ನೇರ ಹೊಣೆಯಾಗುತ್ತಾರೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಗ್ರಾಪಂ ಮಾಜಿ ಉಪಾಧ್ಯಕ್ಷ ರಾಜು, ಮುಖಂಡರಾದ ಗುಂಡ, ಚಿರು, ಸಂತೋಷ್, ರಜನಿ, ಮಹದೇವು, ಶಂಕರ್, ಪ್ರಶಾಂತ್ ಕುಮಾರ್, ಬಂಗಾರಿ, ಅಪ್ಪು, ಸ್ವಾಮಿ, ಕೆಂಪರಾಜು, ದಾಸು, ಅಭಿ, ಯೋಗಿ, ಕಿರಣ್ ಕುಮಾರ್, ಮಹದೇವ ಸ್ವಾಮಿ, ಮಹದೇವು ಮತ್ತಿತರರಿದ್ದರು.

> ಅಭಿವೃದ್ಧಿ ಕಾಮಗಾರಿಗಾಗಿ ಗ್ರಾಮಕ್ಕೆ ಆಗಮಿಸಿದ ಶಾಸಕರು ಪ್ರತಿಭಟನಾ ಸ್ಥಳಕ್ಕಾಗಮಿಸಿ ಗ್ರಾಮಸ್ಥರ ಮನವಿ ಆಲಿಸಿದರು. ಈ ವೇಳೆ ಗ್ರಾಮದ ಮುಖಂಡರು ಇಲ್ಲಿ ಮದ್ಯದಂಗಡಿ ತೆರೆಯುವುದರಿಂದ ಆಗುವ ಅನಾಹುತಗಳ ಬಗ್ಗೆ ಶಾಸಕರಿಗೆ ಮನವರಿಕೆ ಮಾಡಿಕೊಟ್ಟರು. ಗ್ರಾಮಸ್ಥರ ಮನವಿಗೆ ಸ್ಪಂದಿಸಿದ ಶಾಸಕರು, ಇಲಾಖೆ ಅಧಿಕಾರಿಗಳೊಂದಿಗೆ ಮಾತನಾಡಿ ಗ್ರಾಮಸ್ಥರಿಗೆ ತೊಂದರೆಯಾಗದ ರೀತಿ ಅನುಕೂಲ ಕಲ್ಪಿಸಿಕೊಡಲಾಗುವುದು. – ಎಂ.ಅಶ್ವಿನ್ ಕುಮಾರ್, ಶಾಸಕ.

ಇಂದು ಶ್ರೀರಾಮ ಕಲ್ಯಾಣೋತ್ಸವ



ಚುಂಚನಕಟ್ಟೆ ಜ.12– ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಶ್ರೀರಾಮ ದೇವಾಲಯದಲ್ಲಿ ಜ.13ರಂದು ರಾತ್ರಿ ಪುರಾಣ ಪ್ರಸಿದ್ಧ ಸೀತಾ ಸಮೇತ ಶ್ರೀರಾಮ ಕಲ್ಯಾಣೋತ್ಸವ ನಡೆಯಲಿದೆ.

ಸಂಜೆ 6.30 ರಿಂದ 7.30ರವರೆಗೆ ಉತ್ಸವ ಮೂರ್ತಿಯನ್ನು ಕಾವೇರಿ ನದಿ ತಟದಲ್ಲಿ ಮೆರವಣಿಗೆ ಮಾಡಲಿದ್ದು, ಆನಂತರ ದೇವಾಲಯದ ಪ್ರಾಂಗಣದಲ್ಲಿ ಕಲ್ಯಾಣೋತ್ಸವ ನಡೆಯಲಿದೆ. ಕಲ್ಯಾಣೋತ್ಸವಕ್ಕೆ ಜಿಲ್ಲೆ ಸೇರಿದಂತೆ ಹೊರ ಜಿಲ್ಲೆಗಳಿಂದಲೂ ನೂರಾರು ಭಕ್ತರು ಆಗಮಿಸಲಿದ್ದು, ಧನುರ್ಮಾಸ ಕೊನೆ ದಿನ ನಡೆಯುವ ಉತ್ಸವದಲ್ಲಿ ಪಾಲ್ಗೊಂಡರೆ ಶುಭ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆ ಇರುವುದರಿಂದ ವಿವಾಹವಾಗದ ಯುವಕ ಮತ್ತು ಯುವತಿಯರು ಭಾಗವಹಿಸಿ ಹರಕೆ ಕಟ್ಟಿಕೊಳ್ಳುತ್ತಾರೆ. ಕಲ್ಯಾಣೋತ್ಸವದ ನಂತರ ದೇವರಿಗೆ ಮಹಾಮಂಗಳಾರತಿ, ತೋಮಾಲೆ ಸೇವೆ ಮಾಡಿ ತೀರ್ಥ ಪ್ರಸಾದ ವಿತರಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಭೈರಾಪುರದಲ್ಲಿ ಬೂತ್ ವಿಜಯ ಅಭಿಯಾನ



ತಿ.ನರಸೀಪುರ, ಜ.12– ಪಟ್ಟಣದ ಪುರಸಭಾ ವ್ಯಾಪ್ತಿಯ 3ನೇ ವಾರ್ಡ್ ಭೈರಾಪುರದ ಬಿಜೆಪಿ ಬೂತ್ ಅಧ್ಯಕ್ಷ ಬಾಲು ಮನೆ ಮೇಲೆ ಬಿಜೆಪಿ ಬೂತ್ ವಿಜಯ ಅಭಿಯಾನ ಕಾರ್ಯಕ್ರಮದಡಿ ವರುಣಾ ಬಿಜೆಪಿ ಕ್ಷೇತ್ರಾಧ್ಯಕ್ಷ ಕಲ್ಮಳ್ಳಿ ವಿಜಯ ಕುಮಾರ್ ಪಕ್ಷದ ಬಾವುಟ ಕಟ್ಟಿದರು.


ಜಿಲ್ಲಾ ಕಾರ್ಯದರ್ಶಿ ರಂಗೂನಾಯಕ್ ಮಾತನಾಡಿ, ಬೂತ್ ಮಟ್ಟದಲ್ಲಿ ಪಕ್ಷ ಸದೃಢವಾದರೆ ಇಡೀ ಕ್ಷೇತ್ರ ಬಲಿಷ್ಠವಾಗುತ್ತದೆ. ಬೂತ್ ಅಧ್ಯಕ್ಷರು ತಮ್ಮ ಬೂತ್‌ಗಳಲ್ಲಿ ಸಂಘಟಿತರಾಗಿ ಕೆಲಸ ಮಾಡಬೇಕು. ಮುಂಬರುವ ಚುನಾವಣೆಯಲ್ಲಿ ಕ್ಷೇತ್ರದಿಂದ ಶಾಸಕರನ್ನು ಆಯ್ಕೆ ಮಾಡುವ ಮೂಲಕ ಕ್ಷೇತ್ರದಲ್ಲಿ ಪಕ್ಷದ ಗೆಲುವಿನ ಬಾವುಟ ಹಾರಿಸಲು ಸನ್ನದ್ಧರಾಗುವಂತೆ ಕರೆ ನೀಡಿದರು.

ಕಳೆದ 3 ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳು ಕಡಿಮೆ ಅಂತರದಲ್ಲಿ ಸೋಲು ಕಂಡಿದ್ದಾರೆ. ಆದರೆ ಈ ಬಾರಿ ಪಕ್ಷ ಕ್ಷೇತ್ರದಲ್ಲಿ ಬಲಿಷ್ಠ ಕಾರ್ಯಕರ್ತರನ್ನು ಹೊಂದಿದೆ. ಹಾಗಾಗಿ ಈ ಬಾರಿ ಯಾವುದೇ ಕಾರಣಕ್ಕೂ ಪಕ್ಷ ಕ್ಷೇತ್ರವನ್ನು ಬಿಟ್ಟು ಕೊಡಬಾರದು. ಕಾರ್ಯಕರ್ತರು ಪಕ್ಷದ ಹೈಕಮಾಂಡ್ ಯಾರನ್ನೇ ಅಭ್ಯರ್ಥಿ ಮಾಡಿದರೂ ಅವರ ಗೆಲುವಿಗೆ ಶ್ರಮಿಸಬೇಕು ಎಂದರು.

ಬೂತ್ ಅಧ್ಯಕ್ಷ ಬಾಲು ಮಾತನಾಡಿ, ಈ ಬಾರಿ ವರುಣಾದಲ್ಲಿ ಕಾರ್ಯಕರ್ತರ ನಿರಂತರ ಪರಿಶ್ರಮದಿಂದ ಪಕ್ಷ ಬಲಿಷ್ಠವಾಗಿದೆ. ಕಾರ್ಯಕರ್ತರು ವೈಮನಸ್ಸನ್ನು ಬದಿಗಿಟ್ಟು ಮುಂಬರುವ ಚುನಾವಣೆಯಲ್ಲಿ ಕ್ಷೇತ್ರದಿಂದ ಸ್ಪರ್ಧಿಸುವ ಅಭ್ಯರ್ಥಿ ಗೆಲ್ಲಿಸುವ ಕೆಲಸ ಮಾಡಬೇಕು. ಆ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಬೇಕಿದೆ. ಬೂತ್ ಮಟ್ಟದಲ್ಲಿ ಪಕ್ಷ ಬಲಿಷ್ಠವಾದರೆ ಕ್ಷೇತ್ರ ಮತ್ತಷ್ಟು ಬಲಿಷ್ಠವಾಗಲಿದೆ ಎಂದು ತಿಳಿಸಿದರು.

ಈ ವೇಳೆ ಪುರಸಭಾ ಸದಸ್ಯರಾದ ಚಿಕ್ಕಮಹದೇವ, ಗಣೇಶ್, ಭೈರಾಪುರ ಗ್ರಾಪಂ ಮಾಜಿ ಸದಸ್ಯ ಎಂ.ಮಿಥುನ್, ಮಂಜು ಕುಮಾರ್, ಸೋಮಶೇಖರ್, ಮನು ಮುತ್ತುರಾಜ್, ದಿಲೀಪ್ ಕುಮಾರ್, ನಿತಿನ್, ಸಾಗರ್, ನವೀನ ಇತರರಿದ್ದರು.

ನಿವೃತ್ತ ಐಎಎಸ್ ಅಧಿಕಾರಿ ಡಾ.ಸಿ.ಸೋಮಶೇಖರ್ ಅವರ 'ನೀನೊಲಿದ ಬದುಕು' ಕೃತಿ ಲೋಕಾರ್ಪಣೆ



ಮೈಸೂರು, ಜ.12(ಎಂಕೆ)– ನಿವೃತ್ತ ಐಎಎಸ್ ಅಧಿಕಾರಿ ಹಾಗೂ ಸಾಹಿತಿ ಡಾ.ಸಿ. ಸೋಮಶೇಖರ್ ಅವರ ಆತ್ಮಕಥನ 'ನೀನೊಲಿದ ಬದುಕು' ಕೃತಿಯನ್ನು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಗುರುವಾರ ಲೋಕಾರ್ಪಣೆಗೊಳಿಸಲಾಯಿತು.

ನಗರದ ಎಂಜಿ ರಸ್ತೆಯಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಕನ್ನಡ ಸಾಹಿತ್ಯ ಕಲಾಕೂಟ, ಸಂವಹನ ಪ್ರಕಾಶನ ಹಾಗೂ ಸಪ್ನ ಬುಕ್‌ಹೌಸ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಕೃತಿ ಬಿಡುಗಡೆ ಸಮಾರಂಭದಲ್ಲಿ ಹಿರಿಯ ವಿದ್ವಾಂಸ ನಾಡೋಜ ಡಾ.ಹಂಪನಾ ಕೃತಿಯನ್ನು ಲೋಕಾರ್ಪಣೆಗೊಳಿಸಿದರು. ಬಳಿಕ ಮಾತನಾಡಿದ ಅವರು, ಸೋಮಶೇಖರ್ ತಮ್ಮ ಆತ್ಮಕಥನ 'ನೀನೊಲಿದ ಬದುಕು' ಕೃತಿಯ ಮೂಲಕ ಗಡಿನಾಡಿನ ಕತ್ತಲೆ ಮತ್ತು ಬೆಳಕು ಎರಡನ್ನೂ ತಿಳಿಸಿದ್ದಾರೆ ಎಂದರು.

ರಾಜ್ಯದ 40 ವರ್ಷದ ಇತಿಹಾಸವನ್ನು ಈ ಆತ್ಮಕಥನದ ಮೂಲಕ ತಿಳಿಯಬಹುದಾಗಿದೆ. ಕಷ್ಟದ ನದಿಯನ್ನು ಈಜಿಕೊಂಡು ಜೀವನ ನಡೆಸಿದ ಸೋಮಶೇಖರ್, ಐಎಎಸ್ ಅಧಿಕಾರಿಯಾಗಿ ಸಾಕಷ್ಟು ಕೆಲಸ ಮಾಡಿ, ನಿವೃತ್ತರಾದ ಮೇಲೂ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ನೇಮಕಗೊಂಡು ಕೆಲಸ ಮಾಡುತ್ತಿರುವುದು ಅವರ ಕಾರ್ಯಕ್ಷಮತೆಗೆ ಸಾಕ್ಷಿಯಾಗಿದೆ ಎಂದರು.

ಕರ್ನಾಟಕವನ್ನು ಪ್ರಬಲವಾಗಿ ಕಾಡಿದ್ದು ಗಡಿ ಮತ್ತು ಜಲದ ಸಮಸ್ಯೆ. ಅಂತಹ ಸಮಸ್ಯೆ ಇರುವ ಗಡಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಇವರು ಅಧ್ಯಕ್ಷರಾಗಿದ್ದಾರೆ. ಕೃತಿಯ ಪಾತ್ರ ಮತ್ತು ಗಾತ್ರ ಎರಡೂ ದೊಡ್ಡದಾಗಿದೆ. ಇವರನ್ನು ಸರ್ಕಾರದ ಮಹತ್ವದ ಇಲಾಖೆಗೆ ನೇಮಿಸಿದಾಗಲೂ ಯಾರೇ ಬಂದರೂ ನಗು ನಗುತ್ತ ಮಾತನಾಡಿಸಿ, ಸಮಸ್ಯೆಗಳನ್ನು ಪರಿಹರಿಸುತ್ತಿದ್ದರು ಎಂದು ಸ್ಮರಿಸಿದರು.

ವಚನ ಸಾಹಿತ್ಯದ ಮಹತ್ವವನ್ನು ಅರಿತಿರುವ ಸೋಮಶೇಖರ್, ಹೊಸ ದಿಕ್ಕಿನಲ್ಲಿ ಅಧ್ಯಯನ ಮಾಡಿದ್ದಾರೆ. ಇವರ ಆತ್ಮಕಥನವು ಹಣದ ವಿಚಾರಕ್ಕೆ ಬದಲಾಗಿ ಪ್ರಯತ್ನ, ಪ್ರಾಮಾಣಿಕತೆ ಮತ್ತು ಕಾರ್ಯಕ್ಷಮತೆಯನ್ನು ಆಧರಿಸಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶ್ರೀ ರಾಮಕೃಷ್ಣ ಆಶ್ರಮದ ಶ್ರೀ ಮುಕ್ತಿದಾನಂದ ಸ್ವಾಮೀಜಿ, ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಕವಯತ್ರಿ ಕಮಲಾ ಹಂಪನಾ, ನಿವೃತ್ತ ಪ್ರಾಧ್ಯಾಪಕ ಡಾ.ಸಿ.ನಾಗಣ್ಣ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ಕವಯತ್ರಿ ಡಾ.ಲತಾ ರಾಜಶೇಖರ್, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಪ್ರಕಾಶಕ ಡಿ.ಎನ್.ಲೋಕಪ್ಪ ಸರ್ವಮಂಗಳ ಸೋಮಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಕಾರ್ಯಕರ್ತನಿಗೆ ಗುಂಡಿಕ್ಕಿ ಹತ್ಯೆ

ಕೋಲ್ಕತ್ತಾ, ಜ.12– ಪಶ್ಚಿಮ ಬಂಗಾಳದಲ್ಲಿ ಪಂಚಾಯತ್ ಚುನಾವಣೆಗೆ ಮುನ್ನ ಗುರುವಾರ ಬೆಳಗ್ಗೆ ಪುರ್ಬಾ ಬರ್ಧಮಾನ್ ಜಿಲ್ಲೆಯ ಕೇತುಗ್ರಾಮದಲ್ಲಿ ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ತೃಣಮೂಲ ಕಾಂಗ್ರೆಸ್ ಕಾರ್ಯಕರ್ತನನ್ನು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ.

ಆ ಪ್ರದೇಶದಲ್ಲಿ ಸಕ್ರಿಯ ಟಿಎಂಸಿ ಕಾರ್ಯಕರ್ತನಾಗಿದ್ದ ದುಲಾಲ್ ಶೇಖ್ ಅವರು ಅಮ್ಗಾರಿಯಾ ಬಜಾರ್‌ನ ಸ್ಟಾಲ್‌ನಲ್ಲಿ ಚಹಾ ಕುಡಿಯುತ್ತಿದ್ದಾಗ ಪಾಯಿಂಟ್–ಬ್ಲಾಂಕ್ ರೇಂಜ್ ನಿಂದ ಶೂಟ್ ಮಾಡಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತಕ್ಷಣವೇ ಶೇಖ್(50) ಅವರನ್ನು ಹತ್ತಿರದ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯಲಾಯಿತು. ಅವರು ಮೃತಪಟ್ಟಿದ್ದಾರೆ ಎಂದು ಘೋಷಿಸಲಾಯಿತು ಎಂದು ಅವರು ಹೇಳಿದ್ದಾರೆ.

ಈ ಪ್ರದೇಶದಲ್ಲಿ ಟಿಎಂಸಿಯ ಪ್ರತಿಸ್ಪರ್ಧಿ ಬಣಕ್ಕೆ ಸೇರಿದ ಕೆಲವರು ನನ್ನ ತಂದೆಗೆ ಭೀಕರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಬೆದರಿಕೆ ಹಾಕಿದ್ದರು. ಅವರು ಮರಳು ಮತ್ತು ಕಟ್ಟಡ ಸಾಮಗ್ರಿಗಳ ಪೂರೈಕೆಯಲ್ಲಿ ತೊಡಗಿಸಿಕೊಂಡಿದ್ದಾರೆ' ಎಂದು ಶೇಖ್ ಅವರ ಮಗ ಆರೋಪಿಸಿದ್ದಾರೆ.

ಟಿಎಂಸಿ ರಾಜ್ಯ ಉಪಾಧ್ಯಕ್ಷ ಜಾಯ್ ಪ್ರಕಾಶ್ ಮಜುಂದಾರ್ ಮಾತನಾಡಿ, ಪಂಚಾಯತ್ ಚುನಾವಣೆಗೂ ಮುನ್ನ ಬಿಜೆಪಿ ಮತ್ತು ಸಿಪಿಐ(ಎಂ) ವಿವಿಧ ಕ್ಷೇತ್ರಗಳಲ್ಲಿ ಪ್ರಭಾವಿ ಟಿಎಂಸಿ ಸದಸ್ಯರನ್ನು ತೊಲಗಿಸಲು ಸಂಚು ರೂಪಿಸುತ್ತಿವೆ. ಶೇಖ್ ಅವರು ಇಂತಹ ಕೃತ್ಯಕ್ಕೆ ಬಲಿಯಾಗಿದ್ದಾರೆಯೇ ಎಂಬ ಬಗ್ಗೆ ತನಿಖೆಯಾಗಬೇಕು ಎಂದು ಒತ್ತಾಯಿಸಿದ್ದಾರೆ.

SAD DEMISE



SATHISH S
(SHIRDI TOURS AND TRAVELS)
Death: 12-01-2023
Address
No.124, 2nd Phase, KBL Enclave,
Vijayanagar 4th Stage,
Mysore-570 032
Cremation:
on 14-01-2023, Saturday
at Gokulam, 11.30 am
76765 62833 | 95911 27318


ತಿಳುವಳಿಕೆ ಸೂಚನೆ

ಈ ಮೂಲಕ ಸಾರ್ವಜನಿಕರಿಗೆ ತಿಳುವಳಿಕೆ ಸೂಚನೆ ಏನೆಂದರೆ ಮೇ: ಆಕ್ಸಿಸ್ ಬ್ಯಾಂಕ್ ನಿಂದ "ನೇಸರ ಎಂಟ್ರಪ್ರೈಸ್" ಸಂಸ್ಥೆ ಹೆಸರಿನ ಲೆಕ್ಕದ ಖಾತೆ ನಂ. 922020050370165 ಕ್ಕೆ ಸಂಬಂಧಿಸಿದಂತೆ ಪಡೆದುಕೊಂಡಿದ್ದ ಮೂಲ ಚೆಕ್ ನಂ. 225897, 225898, 225899 ಮತ್ತು 225900 ರ ಕ್ರಮ ಸಂಖ್ಯೆಯನ್ನು ಹೊಂದಿರುವ ಚೆಕ್ ಹಾಳೆಗಳು ಹಾಗೂ ಸದರಿ ಖಾತೆಗೆ ಸಂಬಂಧಿಸಿದ ಮೂಲ ಡೆಬಿಟ್ ಕಾರ್ಡ್ ನಂ.1681 ದಾಖಲೆಗಳು ಕಳೆದು ಹೋಗಿದ್ದು, ಈ ದಾಖಲೆಗಳು ಯಾರಿಗಾದರೂ ಸಿಕ್ಕಿದ ಪಕ್ಷದಲ್ಲಿ ಈ ಕೆಳಕಂಡ ಮೊಬೈಲ್ ಸಂಖ್ಯೆ: 8792561646 ಯನ್ನು ಸಂಪರ್ಕಿಸಿ ತಲುಪಿಸಬೇಕಾಗಿ ವಿನಂತಿ. ಈ ಸಂಬಂಧವಾಗಿ ಹೆಬ್ಬಾಳು ಪೊಲೀಸ್ ಠಾಣೆಯಲ್ಲಿ ದೂರನ್ನು ಸಹಾ ದಾಖಲಿಸಿರುತ್ತೇನೆ. ಒಂದು ವೇಳೆ ಈ ಕಳೆದು ಹೋಗಿರುವ ದಾಖಲೆಯ ಆಧಾರದ ಮೇಲೆ ಯಾವುದೇ ವ್ಯಕ್ತಿ, ಸಂಸ್ಥೆಯವರು ವ್ಯವಹರಿಸಿದ ಪಕ್ಷದಲ್ಲಿ "ನೇಸರ ಎಂಟ್ರಪ್ರೈಸ್" ಸಂಸ್ಥೆಯ ಮಾಲೀಕರುಗಳಾಗಲಿ ಅಥವಾ ಮೇ: ಆಕ್ಸಿಸ್ ಬ್ಯಾಂಕ್ ಆಗಲಿ ಜವಾಬ್ದಾರರಾಗಿರುವುದಿಲ್ಲ.

CHANGE OF NAME

I, HIBA SAHER D/o Mohamed Ghouse Shariff, R/a 216, 4th Cross, Azeez sait Main Road, Near Indian Bank, 2nd Stage, Udayagiri, Mysore, have changed my name as HIBA SAHER D/o Mohammed Ghouse Shariff in fornt of Notary on 12/01/2023 at Mysore.
Sd/- HIBA SAHER
D/o Mohammed Ghouse Shariff

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ.ಬಿ.ಬೋರಯ್ಯ
(Rtd. Office Superintendent MMC&RI)
ಇವರು ದಿನಾಂಕ: 04.01.2023 ಬುಧವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 14.01.2023 ಶನಿವಾರ ಬೆಳಿಗ್ಗೆ 11 ಗಂಟೆಗೆ ಕೆ.ಜಿ.ಕೊಪ್ಪಲಿನ ಸ್ಮಶಾನದಲ್ಲಿ (ಕಾವೇರಿ ಸ್ಕೂಲ್ ಪಕ್ಕ) ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಮೃತರ ಪತ್ನಿ ಶ್ರೀಮತಿ ಶಿವಮ್ಮ, ಮಗ, ಮಗಳು, ಅಳಿಯ, ಸೊಸೆ, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು.
ಭೋಜನ: ಮಧ್ಯಾಹ್ನ 1.00 ಗಂಟೆಗೆ

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

12ನೇ ವರ್ಷದ ಸವಿನೆನಪು



ಶ್ರೀಮತಿ ಕೆಂಪಮ್ಮನವರು
ನೀವು ನಮ್ಮನ್ನಗಲಿ ಇಂದಿಗೆ 12 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ಶ್ರೀಮಾನ್ ಬಂದೀಗೌಡರು ಹಾಗೂ ಮಕ್ಕಳು, ಸೊಸೆ ಮತ್ತು ಕುಟುಂಬವರ್ಗದವರು ಚಿಕ್ಕೇಗೌಡನಹುಂಡಿ

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ

ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ: 0821-2473923/2473933, ಫ್ಯಾಕ್ಸ್ ನಂ.0821-2472797
ಇ-ಮೇಲ್ : mymuladmn@gmail.com

ಟೆಂಡರ್ ಪ್ರಕಟಣೆ (ಇ-ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಗುತ್ತಿಗೆ ಕಾರ್ಮಿಕರುಗಳನ್ನು ಒದಗಿಸಲು ಅರ್ಹ ಟೆಂಡರ್‌ದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ www.eproc.karnataka.gov.in ನಲ್ಲಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ವಿವರ ಈ ಕೆಳಗಿನಂತಿದೆ.

ಕ್ರ.ಸಂ	ಟೆಂಡರ್ ಪ್ರಕಟಣೆ ಸಂಖ್ಯೆ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	IFT No.1029: ADMN:Tender: 2022/CALL -2	ಒಕ್ಕೂಟದ ಮೆಗಾ ಡೈರಿಯಲ್ಲಿ ಅಳವಡಿಸಿರುವ ಪ್ಯಾಕಿಂಗ್ ಯಂತ್ರಗಳ ಚಾಲನೆ ಮತ್ತು ನಿರ್ವಹಣೆಗೆ ಸಂಬಂಧಿಸಿದ ಕೆಲಸಗಳನ್ನು ದ್ವೈವಾರ್ಷಿಕ ಅವಧಿಗೆ ತುಂಡು ಗುತ್ತಿಗೆ / ಸೇವಾ ಗುತ್ತಿಗೆ ಪಡೆಯಲು ಅರ್ಹ ಕಾರ್ಮಿಕ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.	ದಿನಾಂಕ 23.01.2023 ಸಂಜೆ 05:00 ಗಂಟೆಯೊಳಗೆ

ಹೆಚ್ಚಿನ ಮಾಹಿತಿಗಾಗಿ ವ್ಯವಸ್ಥಾಪಕರು (ಆಡಳಿತ/ಖರೀದಿ) ರವರನ್ನು ಮೊಬೈಲ್ ಸಂಖ್ಯೆ: 6366430803 ಮೂಲಕ ಸಂಪರ್ಕಿಸಬಹುದಾಗಿದೆ.
ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

TENDER NOTICE — AT&S

Sealed tenders are invited for **Hazardous & Non-Hazardous Scrap Sales & disposal from authorized recyclers.**

Major scrap Sale Items: Rejected PCBs, E-waste, Cupric chloride etchant, Aluminum, Copper, MS & SS scrap, Drill & Router bits, Kraft paper, Solder, Batteries, wooden pallets, plastic cans, Lubricating oils Etc.

Major Disposal Items: Chemical soaked filter, rubber, Cotton waste/ gloves.

Visit us with license certificate to collect tender form from AT&S purchase department on any working day on or before **21.01.2023** between10AM to 5PM. Last date to submit the tender is **31.01.2023** before 5PM.

General Manager – Supply chain management
M/s. AT&S India Pvt. Limited
No.12A, Industrial Area, Nanjangud-571 301
Tel: +91(0) 08221-244000. E-mail: j.kunder@in.ats.net

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೃಷ್ಣರಾಜನಗರ

E-Mail ID: apmckrnagar@gmail.com Ph:08223-262342-297312
ಜಿಲ್ಲೆ: ಮೈಸೂರು) ಪಿನ್ ಕೋಡ್–571 602 (ರಾಜ್ಯ: ಕರ್ನಾಟಕ
ಸಂ:ಕೃಉಮಾಸ(ಕೃರಾನ)/600/2022–23 ದಿನಾಂಕ: 12.01.2023

ಪ್ರಕಟಣೆ

ಕೆ.ಆರ್.ನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಈ ಕೆಳಕಂಡ ಖಾಲಿ ಸಾಮಾನ್ಯ ನಿವೇಶನವನ್ನು ರೈತ ಉತ್ಪಾದಕ ಸಂಸ್ಥೆಯವರಿಗೆ ಹಾಗೂ ಖಾಲಿ ಮೂಲೆ ನಿವೇಶನಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು 2004 ರ ಪ್ರಕಾರ ಲೀಸ್ ಕಂ ಸೇಲ್ ಆಧಾರದ ಮೇಲೆ ಟೆಂಡರ್–ಕಂ–ಬಹಿರಂಗ ಹರಾಜಿನ ಮೂಲಕ ಅರ್ಹ ಪೇಟೆ ಕಾರ್ಯಕರ್ತರಿಗೆ ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ	ಬ್ಲಾಕ್	ನಿವೇಶನ ಸಂ.	ನಿವೇಶನಗಳ ಅಳತೆ	ವಿಸ್ತೀರ್ಣ ಅಡಿಗಳಲ್ಲಿ	ನಿವೇಶನದ ಮೊತ್ತ	ಶೇಕಡ 25 ರಂತೆ ಮುಂಗಡ
1	A block	01	40.92 * 80.85	3308.38	7,60,927-00	1,90,232-00
2	B block	01	40.92 * 60.39	2471.15	5,68,366-00	1,42,092-00
3	C block	18	40.92 * 80.52	3294.87	7,57,820-00	1,89,455-00
4	D block	03	40.00 * 100.00	4000-00	4,60,000-00	1,15,000-00

ಷರತ್ತು ಮತ್ತು ನಿಬಂಧನೆಗಳು: 1) ಅರ್ಹ ಪೇಟೆ ಕಾರ್ಯಕರ್ತರು ಅರ್ಜಿ ನಮೂನೆ–1 ರೊಂದಿಗೆ ದಿ: 27.01.2023 ರ ಒಳಗಾಗಿ ರೂ;500–00 ಗಳನ್ನು ಪಾವತಿಸಿ ನೊಂದಣಿ ಮಾಡಿಕೊಳ್ಳತಕ್ಕದ್ದು. **2)** ಭರ್ತಿ ಮಾಡಿದ ಅರ್ಜಿಗಳನ್ನು ಅವಶ್ಯಕ ದಾಖಲೆಗಳೊಂದಿಗೆ ದಿ: 01.02.2023 ಒಳಗಾಗಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ನೊಂದಾವಣೆ ಪಡೆದ ಅರ್ಜಿದಾರರು ನಮೂನೆ–3 ರ ಅರ್ಜಿಯೊಂದಿಗೆ ಮುಂಗಡ ಹಣ ಪಾವತಿಸಿ, ಮುಚ್ಚಿದ ಲಕೋಟೆಯಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿ: 01.02.2023ರ ಮಧ್ಯಾಹ್ನ 12.00 ಗಂಟೆಯವರೆಗೆ. **3)** ಬಹಿರಂಗ ಹರಾಜನ್ನು ಅದೇ ದಿ: 01.02.2023 ರಂದು ಮಧ್ಯಾಹ್ನ 3.00 ಗಂಟೆಗೆ ಕೆ.ಆರ್.ನಗರದ ಸಮಿತಿಯ ಆಡಳಿತ ಕಛೇರಿಯಲ್ಲಿ ನಡೆಸಲಾಗುವುದು. **4)** ಕ್ರಮ ಸಂಖ್ಯೆ 1, 2, ಮತ್ತು 3 ರ ಖಾಲಿ ಮೂಲೆ ನಿವೇಶನಗಳನ್ನು ಅರ್ಹ ಪೇಟೆ ಕಾರ್ಯಕರ್ತರಿಗೆ ಟೆಂಡರ್ ಕಂ ಬಹಿರಂಗ ಹರಾಜಿನ ಮೂಲಕ ಹಾಗೂ ಕ್ರಮ ಸಂಖ್ಯೆ 4 ರ ಸಾಮಾನ್ಯ ನಿವೇಶನವನ್ನು ರೈತ ಉತ್ಪಾದಕರ ಸಂಸ್ಥೆಯವರಿಗೆ ಖಾಯ್ದಿರಿಸಿ ಹಂಚಿಕೆ ಮಾಡಲಾಗುವುದು. **5)** ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೆ.ಆರ್.ನಗರ ಇವರ ಹೆಸರಿನಲ್ಲಿ ಮುಂಗಡ ಠೇವಣಿಯ ಡಿ.ಡಿ ಖರೀದಿಸಿ ಕೆ.ಆರ್.ನಗರದಲ್ಲಿ ನಗದಾಗುವಂತೆ ಪ್ರತ್ಯೇಕ ಲಕೋಟೆಯಲ್ಲಿರಿಸಿ ಟೆಂಡರ್ ಪೆಟ್ಟಿಗೆಯಲ್ಲಿ ಹಾಕುವುದು. **6)** ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಟೆಂಡರ್ ಹಾಗೂ ಬಹಿರಂಗ ಹರಾಜು ಎರಡರಲ್ಲೂ ಭಾಗವಹಿಸತಕ್ಕದ್ದು. ಒಂದರಲ್ಲಿ ಭಾಗವಹಿಸಿದರೆ ಪರಿಗಣಿಸಲಾಗುವುದಿಲ್ಲ. **7)** ಈ ಹಂಚಿಕೆಯು ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಅನುಮೋದನೆಯ ಷರತ್ತಿಗೊಳಪಟ್ಟಿರುತ್ತದೆ. **8)** ಹೆಚ್ಚಿನ ಷರತ್ತು ಹಾಗು ನಿಬಂಧನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೆ.ಆರ್.ನಗರ
ಸಹಿ/– ಆಡಳಿತಾಧಿಕಾರಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೆ.ಆರ್.ನಗರ

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕಾನೀನಿನಿ.,
ಹೇಮಾವತಿ ಬಲದಂಡೆ ನಾಲಾ ವಿಭಾಗ, ಹೊಳೆನರಸೀಪುರ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ19/2022–23/ದಿನಾಂಕ: 10.01.2023/1089/11.1.2023

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕಅದ್ಯಾದೇಶ 1999–2000ರ ಪ್ರಕಾರಆಕ್ಟ್ 2000ರ ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1 ಹಾಗೂ ಕೆ.ಡಬ್ಲ್ಯೂ–2ರ ನಿಯಮದನ್ವಯ ವಿಭಾಗ ಕಛೇರಿಯಿಂದ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ(ನಿ.,) ಬೆಂಗಳೂರು ರವರ ಪರವಾಗಿ PWD Class-IIIand above of any State /Central Government /Public Sector organization ಕರ್ನಾಟಕರಾಜ್ಯದಲ್ಲಿ ಹತ್ತು ವರ್ಷಕ್ಕಿಂತಕಡಿಮೆಇಲ್ಲದಂತೆ ವಾಸವಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಂದ 03 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನಲ್ಲಿನ ಗರಿಷ್ಠ ಟೆಂಡರ್ ಮೊತ್ತರೂ.38.01 ಲಕದಿಂದ್ದ ಹಾಗೂ ಕನಿಷ್ಠ ಟೆಂಡರ್ ಮೊತ್ತರೂ.25.15 ಲಕ್ಷಗಳಿದ್ದು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಅರ್ಜಿ ಸಲ್ಲಿಸಲು ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ. 1.ಟೆಂಡರ್ ಪ್ರೋಸೆಸ್ಸಿಂಗ್ ಫೀ: E-procurement ನಲ್ಲಿ ನೋಡುವುದು 2.ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ದಿನಾಂಕ: 11.01.2023 ರಿಂದ 19.01.2023, ಸಂಜೆ 4.00 ಗಂಟೆಯವರೆಗೆ. 3.ಬಿಡ್‌ನ್ನು ತೆರೆಯುವ ದಿನಾಂಕ: 21.01.2023, ಸಂಜೆ 4.30 ಗಂಟೆಯ ನಂತರ ತೆರವುಗೊಳಿಸಲಾಗುವುದು. 4.ಕೆಲಸದ ರೀತಿ: ಪ್ರವಾಹ ಹಾನಿ ಕಾಮಗಾರಿಗಳು 5.ಇ. ಎಂ. ಡಿ.: ರೂ. 25000.00ರಿಂದ ರೂ. 38000.00 ಗಳು. 6.ಗುತ್ತಿಗೆದಾರರ ವರ್ಗ: ಮೂರನೇ ದರ್ಜೆಮತ್ತು ಮೇಲ್ಪಟ್ಟು ಸೂಚನೆ: 1.ಯಾವುದೇ ಸಂದರ್ಭದಲ್ಲಾದರೂ ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಅಂಗೀರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ. 2.ಟೆಂಡರ್ ನಿಬಂಧನೆಗಳು ಹಾಗೂ ಸಂಬಂಧಪಟ್ಟ ವಿವರಗಳನ್ನು E-procurement portal www.eproc.karnataka.gov.inವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. 3.ಟೆಂಡರ್‌ಗಿಟ್ಟ ಮೊತ್ತವು ಬದಲಾವಣೆಗೆ ಒಳಪಟ್ಟಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಕಾನೀನಿನಿ, ಹೇ.ಬ.ನಾ ವಿಭಾಗ, ಹೊಳೆನರಸೀಪುರ
ವಾಸಾಸಂಇ/ಓಸನಿ/ಹಾಸನ/ಎಂಸಿಎ/952/2022–23

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಮೈಸೂರು ಸಿಟಿ, ಗಿರಿಯಭೋವಿ ಪಾಳ್ಯದಲ್ಲಿ ವಾಸವಾಗಿರುವ **ಟಿ. ಗೋಪಾಲ್** ಮತ್ತು ಇವರ ಧರ್ಮ ಪತ್ನಿಯಾದ **ಶ್ರೀಮತಿ ಧನಲಕ್ಷ್ಮಿ**ರವರ ಇರಾದೆಯ ಮೇರೆಗೆ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ,

ಮೈಸೂರು ಸಿಟಿ, ದೇವಾಂಬ ಅಗ್ರಹಾರ, ಸೀತಾ ಕಲ್ಯಾಣ ಮಂಟಪದ ಎದುರು, ಹೊಸ ನಂ ಕೆ 12/1, ನಂ 419 ರಲ್ಲಿ ಇರುವ **ಭೂ ಲಕ್ಷ್ಮಿ ಗೃಹ ನಿರ್ಮಾಣ ಸಹಕಾರ ಸಂಘ** ನಿ. ಸಂಘದ ಪರ ಅಧ್ಯಕ್ಷರಾದ **ಶ್ರೀ ಹೆಚ್.ಕೆ. ಮಧುಚಂದ್ರ** ಇವರು ದಿನಾಂಕ 12/01/2023 ರಂದು ನೀಡಿರುವ ಸಾರ್ವಜನಿಕ ಪ್ರಕಟಣೆಯಲ್ಲಿ ನನ್ನ ಕಕ್ಷಿದಾರರ ಸ್ವಾಧೀನದಲ್ಲಿರುವ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಮಧ್ಯಸ್ಥಗಾರಿಕೆ ನ್ಯಾಯಾಲಯ, ಬೆಂಗಳೂರು ರವರು ಮೇಲೆ ತಿಳಿಸಿದ ಗೃಹ ನಿರ್ಮಾಣ ಸಹಕಾರ ಸಂಘದ ಪರವಾಗಿ ಆದೇಶ ಮಾಡಿರುವುದಾಗಿ ತಿಳಿಸಿರುತ್ತಾರೆ, ಆದರೆ ಸದರಿ ಆದೇಶವು ಪ್ರಶ್ನಾರ್ಹ ಆದೇಶವಾಗಿದ್ದು ಸದರಿ ಆದೇಶದ ವಿರುದ್ಧ ನನ್ನ ಕಕ್ಷಿದಾರರು ಮೇಲ್ಮನವಿಯನ್ನು ಸಲ್ಲಿಸಲು ತೀರ್ಮಾನಿಸಿರುತ್ತಾರೆ. ಆದ್ದರಿಂದ ಸಾರ್ವಜನಿಕರು ಭೂ ಲಕ್ಷ್ಮಿ ಗೃಹ ನಿರ್ಮಾಣ ಸಹಕಾರ ಸಂಘ ನಿ. ಸಂಘದ ಪರ ಅಧ್ಯಕ್ಷರಾದ ಶ್ರೀ ಹೆಚ್.ಕೆ. ಮಧುಚಂದ್ರ ಇವರೊಡನೆ ಈ ಕೆಳಕಂಡ ಸ್ವತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ಕರಾರು, ಜಿ.ಪಿ.ಎ, ಎಂ.ಓ.ಯು ಇತ್ಯಾದಿ ಯಾವುದೇ ವ್ಯವಹಾರವನ್ನು ಮಾಡಬಾರದೆಂದು ಮತ್ತು ಸಂಘಕ್ಕೆ ಯಾವುದೇ ಹಣವನ್ನು ಈ ಸಂಬಂಧ ಪಾವತಿಸಬಾರದೆಂದು ಈ ಮೂಲಕ ತಿಳಿಯಪಡಿಸುತ್ತಾರೆ. ಕೆಳಕಂಡ ಸ್ವತ್ತಿಗೂ ಮೇಲ್ಕಂಡ ಸಂಘಕ್ಕೂ ಯಾವುದೇ ಸಂಬಂಧವಿರುವುದಿಲ್ಲವೆಂದು ಸಾರ್ವಜನಿಕರು ಅರಿಯತಕ್ಕದ್ದು, ಒಂದು ವೇಳೆ ಈ ಪ್ರಕಟಣೆ ಇದ್ದಾಗ್ಯೂ ಮುಂದುವರೆದಲ್ಲಿ ಸಾರ್ವಜನಿಕರಾದ ನಿಮ್ಮ ವ್ಯವಹಾರ ಕಾನೂನುಬಾಹಿರ ಮತ್ತು ಅಸಿಂಧುವಾಗಿರುತ್ತದೆ ಎಂದು ಈ ಮೂಲಕ ನನ್ನ ಕಕ್ಷಿದಾರರು ತಿಳಿಯಪಡಿಸುತ್ತಾರೆ.

ಷೆಡ್ಯೂಲ್

1. ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮಕ್ಕೆ ಸೇರಿದ ಸರ್ವೆ ನಂ 211/1 ರ ವಿಸ್ತೀರ್ಣ 2 ಎಕರೆ 20 ಗುಂಟೆ, **2. ಮೈಸೂರು** ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮಕ್ಕೆ ಸೇರಿದ ಸರ್ವೆ ನಂ 211/1 ರ ವಿಸ್ತೀರ್ಣ 4 ಎಕರೆ 38 ಗುಂಟೆ, **3. ಮೈಸೂರು** ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮಕ್ಕೆ ಸೇರಿದ ಸರ್ವೆ ನಂ 211/2 ರ ವಿಸ್ತೀರ್ಣ 2 ಎಕರೆ 2 ಗುಂಟೆ, **4. ಮೈಸೂರು** ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮಕ್ಕೆ ಸೇರಿದ ಸರ್ವೆ ನಂ 211/1 ರ ವಿಸ್ತೀರ್ಣ 2 ಎಕರೆ 20 ಗುಂಟೆ. **5. ಮೈಸೂರು** ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮಕ್ಕೆ ಸೇರಿದ ಸರ್ವೆ ನಂ 211/2 ರ ವಿಸ್ತೀರ್ಣ 2 ಎಕರೆ 20 ಗುಂಟೆ. **6. ಮೈಸೂರು** ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮಕ್ಕೆ ಸೇರಿದ ಸರ್ವೆ ನಂ 219/2 ರ ವಿಸ್ತೀರ್ಣ 1 ಎಕರೆ 6.08 ಗುಂಟೆ. (6 1/2 ಗುಂಟೆ)

ದಿನಾಂಕ 12/01/2023
ಮೈಸೂರು
ಸಹಿ/– ಕೆ.ಎಸ್. ಲೋಕೇಶ, ವಕೀಲರು,
ಕೆಎಆರ್–3221/2009, #2847/9, ಎಫ್–1, ಮೊದಲನೇ ಮಹಡಿ,
2ನೇ ಮುಖ್ಯ ರಸ್ತೆ, ಜಯನಗರ, ಮೈಸೂರು – 570014 ಮೊ.ನಂ.9845123244